ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 27

ಜೂನ್ 29–ಜುಲೈ 5, 1998 ರೂ. 2.00

'ತನಿಖಾತಂಡ'ದ ರಾಜಕೀಯದ ವಿರುದ್ಧ ಪ್ರಧಾನಿಗೆ ಜ್ಯೋತಿಬಸು ಪತ್ರ

"ಅಂತರ-ರಾಜ್ಯ ಮಂಡಳಿಯ ಸಭೆ ಕರೆಯಿರಿ"

ಪ್ರಧಾನ ಮಂತ್ರಿ ವಾಜಪೇಯಿಯವರಿಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರು ಒಂದು ಪತ್ರ ಬರೆದು ಬೇಗನೇ ಅಂತರ-ರಾಜ್ಯ ಮಂಡಳಿಯ ಸಭೆ ಕರೆಯಬೇಕು ಎಂದು ಹೇಳಿದ್ದಾರೆ. ಸಂವಿಧಾನದ 355ನೇ ಕಲಮಿನ ವಿವರಣೆಯ ಬಗ್ಗೆ ಎಲ್ಲಾ ರಾಜ್ಯಗಳಿಂದ ಸ್ಪಷ್ಟೀಕರಣ ಕೇಳಬೇಕು ಎಂದು ನಿರ್ದಿಷ್ಟವಾಗಿ ಜ್ಯೋತಿಬಸುರವರು ಪ್ರಧಾನಿಗಳಿಗೆ ಬರೆದ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಇತ್ತೀಚೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 'ತನಿಖಾ ತಂಡ'ಗಳನ್ನು ಕಳಿಸಿ ರಾಜ್ಯದ ಅಧಿಕಾರ ವ್ಯಾಪ್ತಿಯಲ್ಲಿರುವ ಕಾನೂನು-ವ್ಯವಸ್ಥೆಯ ವಿಷಯದಲ್ಲಿ ಹಸ್ತಕ್ಷೇಪ ನಡೆಸುವುದನ್ನು ಪ್ರತಿಭಟಿಸಿದಾಗ ಸಂವಿಧಾನದ 355ನೇ ಕಲಮಿನ ಪ್ರಕಾರ ರಾಜ್ಯಪಟ್ಟಿಯಲ್ಲಿರುವ ಅಂದರೆ ರಾಜ್ಯ ಸರಕಾರಗಳ ಅಧಿಕಾರ ವ್ಯಾಪ್ತಿಯಲ್ಲಿರುವ ವಿಷಯಗಳಲ್ಲಿ, ವಿಶೇಷವಾಗಿ ಕಾನೂನು-ವ್ಯವಸ್ಥೆಯ ಪರಿಸ್ಥಿತಿ ಕುರಿತಂತೆ, ಹಸ್ತಕ್ಷೇಪ ನಡೆಸುವ ಅವಕಾಶ ಕೇಂದ್ರ ಸರ್ಕಾರಕ್ಕಿದೆ ಎಂದು ಮತ್ತೆ-ಮತ್ತೆ ಹೇಳುತ್ತಿದೆ. ಜ್ಯೋತಿ ಬಸುರವರು ಈ ಹಿನ್ನೆಲೆಯಲ್ಲಿ ಈ ಪತ್ರ ಬರೆದಿದ್ದಾರೆ.

ಬಿಜೆಪಿ ಈ ಕಲಮಿನ ಬಗ್ಗೆ ನೀಡುವ ವಿವರಣೆ ಸರಿಯಲ್ಲ ಎಂಬುದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ದೃಢ ಅಭಿಪ್ರಾಯ. ಬಿಜೆಪಿ ಅಧಿಕಾರದಲ್ಲಿಲ್ಲದ ರಾಜ್ಯಗಳಿಗೆ 'ತನಿಖಾ ತಂಡ' ಗಳನ್ನು ಕಳಿಸುತ್ತಿರುವುದು ಸಾಂವಿಧಾನಿಕ ಕಾರಣಗಳಿಂದಾಗಿ ಅಲ್ಲ, ಅದಕ್ಕೆ ಬೇರೆಯೇ ಉದ್ದೇಶವಿದೆ ಎಂದು ಎಡರಂಗದ ಅಭಿಪ್ರಾಯ.

ವಿಶೇಷ ಸಂದರ್ಭಗಳಲ್ಲಿ ರಾಜ್ಯದ ವಿಷಯಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರಕ್ಕೆ ಸಂವಿಧಾನದ 355ನೇ ಕಲಮು ಅಧಿಕಾರ ನೀಡಿದೆ ಎಂದು ರಾಜ್ಯ ಸರಕಾರಕ್ಕೆ ಕೇಂದ್ರ ಗೃಹ ಇಲಾಖೆಯ ಕಾರ್ಯದರ್ಶಿಯವರು ಬರೆದ ಪತ್ರಕ್ಕೆ ಪ್ರತಿಕ್ರಿಯಿಸುತ್ತಾ ರಾಜ್ಯ ಗೃಹಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ 'ಕೇಂದ್ರದ ಅಧಿಕಾರ ಶಾಹಿಯ ಒಬ್ಬ ಸದಸ್ಯ ಹೇಳಿರುವ ಅಥವಾ ಹೇಳದಿರುವ ವಿಷಯದ ಬಗ್ಗೆ ಉತ್ತರಿಸಲು ರಾಜ್ಯ ಸರಕಾರಕ್ಕೆ ಏನೇನೂ ಆಸಕ್ತಿಯಿಲ್ಲ' ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಈ ವಿಷಯವನ್ನು ಸೂಕ್ತ ವೇದಿಕೆಯಲ್ಲಿ ಚರ್ಚಿಸಬೇಕು. ಅಂತರ-ರಾಜ್ಯ ಮಂಡಳಿಯೇ ಇದಕ್ಕೆ ಸೂಕ್ತ ವೇದಿಕೆ. ಈಗಾಗಲೇ ಈ ಮಂಡಳಿಯ ಸಭೆಯನ್ನು ಕರೆಯಬೇಕಿತ್ತು ಎಂದು ಭಟ್ಟಾಚಾರ್ಯ ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿನ ಪ್ರಸಕ್ತ ಕಾನೂನು-ವ್ಯವಸ್ಥೆ ಸನ್ನಿವೇಶದ ಬಗ್ಗೆ, ಸಿಬಿಐ ತನಿಖೆ ನಡೆಸಲು ಪಶ್ಚಿಮ ಬಂಗಾಳ ಸರಕಾರಕ್ಕೆ ಇಷ್ಟವಿಲ್ಲ ಎಂಬ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರ ಟಿಪ್ಪಣಿಗೆ ಉತ್ತರಿಸುತ್ತಾ 'ರಾಜ್ಯ ಎಡರಂಗ ಸರ್ಕಾರಕ್ಕೆ ಇತರ ಕೆಲವು ರಾಜ್ಯ ಸರ್ಕಾರಗಳಿಗೆ, ವಿಶೇಷವಾಗಿ ಬಿಜೆಪಿ ಸರಕಾರಗಳಿಗೆ ಇಲ್ಲದ ಆತ್ಮಗೌರವ ಇದೆ. ರಾಜ್ಯ ಪೋಲಿಸ್ ಪಡೆಯ ಸಾಮರ್ಥ್ಯ ಹಾಗೂ ಸಮಗ್ರತೆಯ ಬಗ್ಗೆ ಪೂರ್ಣ ಭರವಸೆಯಿದೆ' ಎಂದು ಬುದ್ಧದೇವ್ ಭಟ್ಟಾಚಾರ್ಯ ಕಠಿಣ ಮಾತುಗಳಲ್ಲಿ ಹೇಳಿದ್ದಾರೆ.

ಠಾಕ್ರೆಯವರ 'ಚಲೇಗಾ'

ಈ ನಡುವೆ ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಕಲ್ಕತ್ತೆಯ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ "ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶಗಳಲ್ಲಿ, ಎಡಪಕ್ಷಗಳು ನಡೆಸುವ ಕೇರಳ, ತ್ರಿಪುರಾ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಇರುವುದಕ್ಕಿಂತ ಉತ್ತಮ ಕಾನೂನು-ವ್ಯವಸ್ಥೆಯ ಪರಿಸ್ಥಿತಿ ಇದೆ" ಎಂದರಂತೆ. ಈ ವಿಚಿತ್ರ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಅವರು ಹೇಳಿದ್ದಿಷ್ಟೆ - ತಮ್ಮ ಪಕ್ಷಕ್ಕೆ ಹಾಗನಿಸುತ್ತದೆ! ಪತ್ರಿಕೆಗಳಿಗೆ ತನ್ನ ಹೇಳಿಕೆಯಿಂದ ತೃಪ್ತವಾಗಲು ಇಷ್ಟು ಕಾರಣ ಸಾಲದೆ? ಇದು ಅವರ ಪ್ರಶ್ನೆ.

ಪತ್ರಕರ್ತರು ಮತ್ತೆ-ಮತ್ತೆ ಕೇಳಿದಾಗ ಬಿಜೆಪಿ ನೇತೃತ್ವದ ಸರಕಾರ ರಾಜಸ್ತಾನಕ್ಕೆ ತಂಡ ಕಳಿಸಲಿಲ್ಲ ಎಂದು ಒಪ್ಪಿಕೊಂಡರು. ಏಕೆ? "ಅಲ್ಲಿನ ನಮ್ಮ ಮುಖ್ಯಮಂತ್ರಿಗಳೊಡನೆ ಚರ್ಚಿಸಿದ ನಂತರ ತಂಡ ಕಳಿಸುವ ಅಗತ್ಯವೆನಿಸಲಿಲ್ಲ" ಎಂದರು ಠಾಕ್ರೆ. ಪಶ್ಚಿಮ ಬಂಗಾಳಕ್ಕೆ 'ತನಿಖಾ'ತಂಡವನ್ನು ಕಳಿಸುವ ಮೊದಲು ಮುಖ್ಯಮಂತ್ರಿ ಜ್ಯೋತಿ ಬಸುರವರೊಂದಿಗೆ ಚರ್ಚಿಸಬಹುದಿತ್ತಲ್ಲಾ ಎಂದು ಕೇಳಿದಾಗ ಬಿಜೆಪಿ ಅಧ್ಯಕ್ಷರು ಬಾಯಿ ತೆರೆಯಲಿಲ್ಲ. ಮಹಾರಾಷ್ಟದಲ್ಲಿ ಕೊಲೆಗಳು ಸುಪಾರಿ ಅಥವಾ ಬಾಡಿಗೆ ಕೊಲೆಗಳು, ಒತ್ತಾಯದ ವಸೂಲಿಗಳು ಹೆಚ್ಚುತ್ತಿರುವ ಬಗ್ಗೆ ಕೇಳಿದಾಗ 'ಅವೆಲ್ಲಾ ಮಾಫಿಯಾಗಳೊಳಗಿನ ಕಚ್ಚಾಟವಷ್ಟೇ, ಬೇರೇನೂ ಇಲ್ಲ" ಎಂದರು!

ಕೊನೆಯದಾಗಿ ಅವರೂ ಕೆಲವು ಆರಿಸಿದ ರಾಜ್ಯಗಳಿಗೆ ಮಾತ್ರ ತನಿಖಾ ತಂಡ ಗಳನ್ನು ಕಳಿಸುವ ಬಿಜೆಪಿ ನೇತೃತ್ವದ ಸರಕಾರದ ಕ್ರಮವನ್ನು ಸಮರ್ಥಿಸಿಕೊಳ್ಳಲು 355ನೇ ಕಲಮಿನ ಮಂತ್ರ ಪಠಿಸಿದರು.

ಬಿಜೆಪಿಯ ಕೆಲವು ಮಿತ್ರಪಕ್ಷಗಳು ಬೆಂಬಲ ಹಿಂತೆಗೆದುಕೊಳ್ಳುವುದಾಗಿ ಹೇಳಲಾರಂಭಿಸಿರುವಾಗ, ಇನ್ನೂ ಕೆಲವರು ತಮ್ಮ ಬೆಂಬಲದ ಷರತ್ತುಗಳ ಪಟ್ಟಿಯನ್ನು ಬೆಳೆಸುತ್ತಿರುವಾಗ ಬಿಜೆಪಿ ನೇತೃತ್ವದ ಸರಕಾರ ಎಷ್ಟು ದಿನ ನಡೆಯುತ್ತದೆ ಎಂದು ಪತ್ರಕರ್ತರು ಕೇಳಿದಾಗ 'ಚಲೇಗಾ' ಎಂದಷ್ಟೇ ಹೇಳಲು ಅವರಿಗೆ ಸಾಧ್ಯವಾಯಿತು. ಬಿಜೆಪಿಯ ಉಚ್ಚ ಮುಖಂಡರಲ್ಲಿನ ಭಿನ್ನಾಭಿಪ್ರಾಯಗಳ ಬಗ್ಗೆ ಪತ್ರಕರ್ತರು ಕೇಳಿದಾಗಲೂ ಬಿಜೆಪಿ ಅಧ್ಯಕ್ಷರು ಮೌನವಾಗಿದ್ದರು. (ಐಎನ್‌ಎಸ್)

ಸಾಕಪ್ಪಾ ಸಾಕು - ಈ ನೂರು ದಿನಗಳು!

ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್‌ಡೆಮಾಕ್ರಸಿ'ಯ ಸಂಪಾದಕೀಯದಿಂದ

ಅಂತೂ ವಾಜಪೇಯಿ ಸರಕಾರದ ನೂರು ದಿನಗಳು ಕಳೆದವು. ಆದರೆ ಎಂತಹಾ ನೂರು ದಿನಗಳು? ಯಾತನಾಮಯ ಉಳಿವಿನ ನೂರು ದಿನಗಳು! ದೇಶಕ್ಕೆ, ಜನಕ್ಕೆ ಯಾವುದೇ ಶಮನ ಕಾಣದ ಸಂಕಟಗಳ, ವಿನಾಶದ ನೂರು ದಿನಗಳು!

ಈ ನೂರು ದಿನಗಳಲ್ಲಿ ದೇಶದ, ಜನಗಳ ತಲೆಯ ಮೇಲೆ ಹೇರಿರುವ ಸಂಕಟಗಳ ದೊಡ್ಡ ಪಟ್ಟಿಯನ್ನು ಪರೀಕ್ಷಿಸುವ ಮೊದಲು ಈ ಸರಕಾರದ ಮುಖಂಡರ ಅತ್ಯಂತ ಅಸಂಬದ್ಧ ಆಕ್ರಾಮಕ ಹೇಳಿಕೆಗಳನ್ನು ಗಮನಿಸೋಣ. ಅತ್ಯಂತ ಮೂರ್ಖರು ಮಾತ್ರವೇ ಅತ್ಯಂತ ಮೂರ್ಖ ಭಂಡತನವನ್ನು ಪ್ರದರ್ಶಿಸುತ್ತಾರಂತೆ. ಈ ಹೇಳಿಕೆಗಳನ್ನು ನೋಡಿದಾಗ ಈ ಮಾತು ಅದೆಷ್ಟು ನಿಜ ಎಂದನಿಸದಿರದು. ಸಂವಿಧಾನವನ್ನು ಉಲ್ಲಂಘಿಸಿ ರಾಜ್ಯಗಳಿಗೆ ಕೇಂದ್ರದ ತಂಡಗಳನ್ನು ಕಳಿಸುವ ಅಸಮರ್ಥನೀಯ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾ ಜ್ಯೋತಿಬಸುರಂತವರಿಗೆ 'ಸಂವಿಧಾನವನ್ನು ಓದಿ' ಎಂದು ಹೇಳುವ ಭಂಡತನ ತೋರಿದ್ದಾರೆ ಈ ಮಂದಿ. ಕಳೆದ ಮೂರು ದಶಕಗಳಿಂದ ಜ್ಯೋತಿ ಬಸು ಈ ಸಂವಿಧಾನದ ಪ್ರಕಾರವೇ ಅಧಿಕಾರ ಹಾಗೂ ಗೋಪ್ಯತೆಯ ಪ್ರತಿಜ್ಞೆ ಸ್ವೀಕರಿಸುತ್ತಾ ಬಂದಿದ್ದಾರೆ ಎಂಬ ವಿಷಯವೂ ಈ ಅಹಂಕಾರಿಗಳ ತಲೆಗೇ ಹೊಳೆದಿಲ್ಲ. ಬಿಜೆಪಿ ಇಂದು ಪ್ರದರ್ಶಿಸುತ್ತಿರುವುದು ಅಭೂತಪೂರ್ವ ಸರ್ವಾಧಿಕಾರಶಾಹೀ ಪ್ರವೃತ್ತಿಯನ್ನು; ಅದೇ ಸಂವಿಧಾನದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಹಾಗೂ ಒಕ್ಕೂಟ ಸಾರಸರ್ವಸ್ವವನ್ನೇ ಬುಡಮೇಲು ಮಾಡುತ್ತಿರುವ ಪ್ರವೃತ್ತಿಯನ್ನು. (ಇತ್ತ ಕರ್ನಾಟಕದಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವರೂ ತಮ್ಮ ಹಿರಿಯರ ಚಾಳಿಯನ್ನೇ ಅನುಸರಿಸಿ ಕಮ್ಯುನಿಸ್ಟ್ ವಿಚಾರಧಾರೆಯ ಬಗ್ಗೆ ಕಾವಿಪಡೆಗಳ ಅಜ್ಞಾನವನ್ನು, ಕುರುಡು ವರ್ಗ ದ್ವೇಷವನ್ನು ಮತ್ತೊಮ್ಮೆ ಮೆರೆದಿದ್ದಾರೆ.)

ಭಾರತದ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸುತ್ತಿರುವ ಜನಪ್ರಿಯ ಮುಖ್ಯಮಂತ್ರಿಗಳನ್ನು ಹೀಗೆ ಕೇವಲ ತಮ್ಮ ಉಳಿವಿಗಾಗಿ ಮೂದಲಿಸುವ ಈ ಬಿಜೆಪಿ ಮಂದಿ 'ಜನಾದೇಶ'ವನ್ನು ಸಿಪಿಐ(ಎಂ) ಬುಡಮೇಲು ಮಾಡುತ್ತಿದೆ ಎಂದೂ ಅರಚಾಡುತ್ತಿದ್ದಾರೆ. ಇವರು ಎಂತೆಂತಹ ಅನೀತಿಯುತ ವ್ಯವಹಾರ ನಡೆಸಿಕೊಂಡು, ನೀತಿ ಬಾಹಿರ ಮೈತ್ರಿಗಳನ್ನು ಮಾಡಿಕೊಂಡು ರಾಜಕೀಯ ನೈತಿಕತೆ ಎಂಬುದನ್ನೇ ಅಪಹಾಸ್ಯ ಮಾಡಿದ್ದಾರೆ ಎಂಬುದೀಗ ಒಂದೊಂದಾಗಿ ಬೆಳಕಿಗೆ ಬರುತ್ತಿದೆ. ಈ ಸರಕಾರ ಬಿದ್ದರೆ (ಅದೀಗ ಅನಿವಾರ್ಯವೆಂದನಿಸುತ್ತದೆ) ಅದಕ್ಕೆ ಈ ಕೂಟದ ಅಂತರಿಕ ವೈರುಧ್ಯಗಳೇ ಕಾರಣ. ಇಷ್ಟೆಲ್ಲಾ ಮಾಡಿಯೂ ಕೇವಲ ಕಾಲಂಶ ಮತ ಪಡೆದ ಇವರು ಜ್ಯೋತಿ ಬಸು, ಮುಲಾಯಂ ಸಿಂಗ್ ಯಾದವ್ ಇತ್ಯಾದಿಯವರಿಗೆ 'ಜನಾದೇಶ'ವೇ ಇಲ್ಲ ಎನ್ನುತ್ತಿದ್ದಾರೆ. ಭಂಡತನ ಇವರನ್ನು ಎಂತಹ ಅಸಂಸ್ಕೃತರನ್ನಾಗಿ ಮಾಡಿದೆಯೆಂದರೆ ಜ್ಯೋತಿ ಬಸುರವರ ನೇತೃತ್ವದ ಪಶ್ಚಿಮಬಂಗಾಳದ ಎಡರಂಗ ಸರಕಾರ ಬಹುಶಃ ರಾಜ್ಯದ ಮತದಾರರ ಬಹುಮತದ ಬೆಂಬಲ ಪಡೆದಿರುವ ಏಕೈಕ ಸರಕಾರ ಎಂಬ ಅಂಶವೂ ಅವರ ಗಮನಕ್ಕೆ ಬರುತ್ತಿಲ್ಲ.

ಇನ್ನು ಈ ನೂರು ದಿನಗಳಲ್ಲಿ ಇವರು ಮಾಡಿದ್ದೇನು? ಎಲ್ಲಾ ರಂಗಗಳಲ್ಲಿ ಇದುವರೆಗೆ ಭಾರತೀಯ ಜನತೆ ಸಾಧಿಸಿದ ಮುನ್ನಡೆಗಳನ್ನೆಲ್ಲಾ ತಿರುವುಮುರುವು ಮಾಡಿದ್ದು. ಆರ್ಥಿಕ ರಂಗದಲ್ಲಿ ಇವರ ನೀತಿಗಳು ಬೆಲೆಯೇರಿಕೆಯನ್ನು ಗಗನಕ್ಕೇರಿಸುತ್ತಿದ್ದರೆ, ರೂಪಾಯಿ ಬೆಲೆಯನ್ನು ಪಾತಾಳಕ್ಕಿಳಿಸುತ್ತಿವೆ. ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ತೆರೆದಿಡಲಾಗುತ್ತಿದೆ. ಭಾರತೀಯಜನಗಳ ಸಂಪತ್ತನ್ನು ವಿದೇಶಿಯರಿಗೆ ಆರತಿ ತಟ್ಟೆಯಲ್ಲಿಟ್ಟು ಕೊಡಲಾಗುತ್ತಿದೆ - ಮಾರುತಿ ಕಂಪನಿ ಪ್ರಕರಣದಲ್ಲಾಗಿರುವಂತೆ. ಬಹುಶಃ ಈ ಪ್ರಕರಣ ಬೋಫೋರ್ಸ್ ಪ್ರಕರಣವನ್ನು ಮೀರಿಸುವಂತದ್ದು, ಭ್ರಷ್ಟಾಚಾರದ ಸಂದೇಹ ಹುಟ್ಟಿಸುವ ವ್ಯವಹಾರ ಇಲ್ಲಿ ನಡೆದಂತಿದೆ. ಒಟ್ಟಿನಲ್ಲಿ ದೇಶ ಮತ್ತು ಜನತೆಯನ್ನು ಒತ್ತೆಯಿಡಲಾಗುತ್ತಿದೆ. ಕಳೆದ ಬಾರಿ ಈ ಹಣಕಾಸು ಮಂತ್ರಿ ದೇಶದ ಚಿನ್ನವನ್ನು ಒತ್ತೆಯಿಟ್ಟಿದ್ದರು, ನೆನಪಿದೆಯೇ? ಈ ಬಾರಿ ಅವರು ದೇಶವನ್ನೇ ಒತ್ತೆಯಿಡ ಹೊರಟಿದ್ದಾರೆ.

ಇನ್ನೊಂದು ಮಟ್ಟದಲ್ಲಿ ಆಯೋಧ್ಯೆಯಲ್ಲಿ ಬಿಜೆಪಿ ಪ್ರಚಾರಾಂದೋಲನ ಸಾಗಿಯೇ ಸಾಗಿದೆ. ಕೋಮುವಿಷ, ದ್ವೇಷ, ಸಾಮಾಜಿಕ ಗಲಭೆಯನ್ನು ಹರಡುತ್ತಲೇ ಇದೆ. ಬಾಬ್ರಿ ಮಸೀದಿಯನ್ನು ಒಡೆದ ಮೇಲೆ ಈಗ ಮತ್ತೊಮ್ಮೆ ನಿರ್ಭಿಡೆಯಾಗಿ ಸಂವಿಧಾನವನ್ನು ಉಲ್ಲಂಘಿಸಲು ಹೊರಟಿದ್ದಾರೆ ಇವರು. ವಿದೇಶಾಂಗ ರಂಗದಲ್ಲಿ ಭಾರತ ಸ್ವಾತಂತ್ರ್ಯದ ನಂತರ ಅಂತರ್ರಾಷ್ಟ್ರೀಯ ಸಮುದಾಯಗಳಲ್ಲಿ ಗಳಿಸಿದ ಪ್ರತಿಷ್ಟೆ, ಸಾಧನೆಗಳನ್ನೆಲ್ಲಾ ಬಾಂಬ್ ಸ್ಫೋಟಿಸಿ ಮಣ್ಣು ಪಾಲು ಮಾಡಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಕುತಂತ್ರಗಳನ್ನು

ಪುಟ 2 ನೋಡಿ

ಜನ-ವಿರೋಧಿ ಬಜೆಟ್ ಹಾಗೂ ಆರ್ಥಿಕ ನೀತಿಗಳ ವಿರುದ್ಧ ಚಳುವಳಿ

ಜುಲೈ 14 ರಂದು ಪ್ರತಿಭಟನಾ ದಿನ: ನವಂಬರ್‌ನಲ್ಲಿ ಸಂಸತ್ ಚಲೋ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ನಿರ್ಧಾರ


ಜೂನ್ 23 ರಂದು ನವದೆಹಲಿಯಲ್ಲಿ ಸಭೆ ಸೇರಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಸಭೆ ಬಿಜೆಪಿ ಸರಕಾರದ ಜನ-ವಿರೋಧಿ ಬಜೆಟ್ಟಿನ ವಿರುದ್ಧ ಕಾರ್ಯಾಚರಣೆಯ ಯೋಜನೆಗಳನ್ನು ನಿರ್ಧರಿಸಿದೆ.

ಈ ಸರಕಾರದ ನೂರುದಿನಗಳ ಅವಧಿಯಲ್ಲಾಗಲೇ ದುಡಿಯುವ ಜನಗಳ, ಜನಸಾಮಾನ್ಯರ ಎಲ್ಲಾ ವಿಭಾಗಗಳ ಪರಿಸ್ಥಿತಿ ತ್ವರಿತವಾಗಿ ಹದಗೆಡುತ್ತಿದೆ. ಸರಕಾರ ಇದರಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಪರಮಾಣು ಸ್ಫೋಟ, ಆಯೋಧ್ಯಾ ದೇವಸ್ಥಾನಗಳಂತಹ ವಿಷಯಗಳತ್ತ ಒತ್ತು ಕೊಡುತ್ತಿದೆ. ಕೇಂದ್ರ-ರಾಜ್ಯ ಸಂಬಂಧಗಳನ್ನು ಹದಗೆಡಿಸುತ್ತಿದೆ ಎಂದಿರುವ ರಾಷ್ಟ್ರೀಯ ವೇದಿಕೆ, ಈ ಕಾರಣದಿಂದಾಗಿ ಬಿಜೆಪಿ ಸರಕಾರದ ನೀತಿಗಳ ವಿರುದ್ಧ ಒಂದು ದೇಶವ್ಯಾಪಿ ಚಳುವಳಿ ಹರಿಯಬಿಡಬೇಕು ಎಂದು ಎಲ್ಲಾ ಕಾರ್ಮಿಕ ಸಂಘಗಳಿಗೆ, ರೈತ-ಕೃಷಿಕೂಲಿಕಾರರ ಸಂಘಟನೆಗಳಿಗೆ, ವಿದ್ಯಾರ್ಥಿ-ಯುವಜನ ಹಾಗೂ ಮಹಿಳಾ ಸಂಘಟನೆಗಳಿಗೆ ಕರೆ ನೀಡಿದೆ.

ಕಾರ್ಯಾಚರಣೆಯ ಯೋಜನೆ ಹೀಗಿದೆ

1. **ಜುಲೈ 3:** ಸಂಸತ್ತಿನ ಅಧಿವೇಶನ ಪುನರಾರಂಭಗೊಳ್ಳುವ ಈ ದಿನದಂದು ಕಾರ್ಖಾನೆ ಗೇಟ್‌ಗಳೆದುರು ಸಭೆಗಳು, ಸಾರ್ವಜನಿಕ ಮತಪ್ರದರ್ಶನಗಳು. ಈಗಾಗಲೇ ಸಿಪಿಎಸ್‌ಟಿಯು ಸಾರ್ವಜನಿಕ ವಲಯ-ವಿರೋಧಿ ನೀತಿಯನ್ನು ಪ್ರತಿಭಟಿಸಿ ನೀಡಿದ ಕರೆಯನ್ನು ಈ ಮೂಲಕ ರಾಷ್ಟ್ರೀಯ ವೇದಿಕೆ ಅನುಮೋದಿಸಿತು.
2. **ಜುಲೈ 14:** ರ್‍ಯಾಲಿ, ಮತಪ್ರದರ್ಶನ ಇತ್ಯಾದಿಗಳ ಮೂಲಕ **ರಾಷ್ಟ್ರೀಯ ಪ್ರತಿಭಟನಾ ದಿನ.**
3. **ಆಗಸ್ಟ್ 12:** ನವದೆಹಲಿಯ ತಲ್ಕಟೋರಾ ಒಳಾಂಗಣದಲ್ಲಿ **ಬೃಹತ್ ರಾಷ್ಟ್ರೀಯ ಸಮಾವೇಶ**
4. **ನವಂಬರ್‌ನಲ್ಲಿ** ಸಂಸತ್ ಅಧಿವೇಶನದ ವೇಳೆಯಲ್ಲಿ **'ಸಂಸತ್ ಚಲೋ'.** ಸಮಾವೇಶದಲ್ಲಿ ದಿನಾಂಕವನ್ನು ನಿರ್ಧರಿಸಲಾಗುವುದು.
5. **ರಾಷ್ಟ್ರವ್ಯಾಪಿ ಮುಷ್ಕರ ಮತ್ತು ಹರತಾಳಕ್ಕೆ ಸಿದ್ಧತೆ.** ದಿನಾಂಕವನ್ನು ರ್‍ಯಾಲಿಯಲ್ಲಿ ಪ್ರಕಟಿಸುವುದು.

ಜೂನ್ 23 ರ ಈ ಸಭೆಯಲ್ಲಿ ಹಲವು ಕೇಂದ್ರ ಕಾರ್ಮಿಕ ಸಂಘಟನೆಗಳು, ಕೈಗಾರಿಕಾ ಒಕ್ಕೂಟಗಳು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿ-ಯುವಜನ, ಮಹಿಳಾ ಸಂಘಟನೆಗಳ ಒಟ್ಟು 30 ಪ್ರತಿನಿಧಿಗಳು ಭಾಗವಹಿಸಿದ್ದರು.



150 ಕೋಟಿ ಜನಗಳ ಭದ್ರತೆಗೆ ಅಪಾಯವೊಡ್ಡಿರುವ ಪರಮಾಣು ಸ್ಫೋಟ

ಪಾಕಿಸ್ತಾನದ ಎಡಪಕ್ಷಗಳ ಖಂಡನೆ

ಪುಟ 7 ನೋಡಿ



ಬಜೆಟ್ ಭುಗಿಲೇಳಿಸಲಿರುವ ಬೆಲೆಯೇರಿಕೆ ಬೆಂಕಿ

ಅತ್ಯಂತ ವಾಸ್ತವಿಕ ಬಜೆಟ್ ಎಂದು ಬಿಜೆಪಿ ಹೊಗಳಿಕೊಳ್ಳುತ್ತಿರುವ ಬಜೆಟ್ ದೇಶದ ಜನಸಾಮಾನ್ಯರ ಮೇಲೆ ಬೆಲೆಯೇರಿಕೆಯ ಹೊರೆಯನ್ನೇ ಹೇರಲಿದೆ. ಬೆಲೆಯೇರಿಕೆಗೆಂದೇ ಹೇಳಿ ಮಾಡಿಸಿದಂತಿರುವ ಈ ಬಜೆಟ್ ಯಾರ ಸೇವೆ ಮಾಡುತ್ತದೆ ಎಂಬುದಕ್ಕೆ ವಿವರಣೆ ನೀಡುವ ಅಗತ್ಯವೇ ಇಲ್ಲ. ಬೆಲೆಯೇರಿಕೆ ಎಂಬುದು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಡವರ ಹೊಟ್ಟೆಯ ಮೇಲೆ ಹೊಡೆದು ಶ್ರೀಮಂತರ ಜೊಬ್ಬು ಬೆಳೆಸುವಂತಹದ್ದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

1998-99 ರ ಬಜೆಟ್ಟಿನಿಂದಾಗಿ ಸಗಟು ಬೆಲೆ ಸೂಚ್ಯಂಕದಲ್ಲಿ ಹೆಚ್ಚಳವಾಗಿ ವಾರ್ಷಿಕ ಹಣದುಬ್ಬರ ಶೇ 7.5 ಯಿಂದ ಶೇ 8 ರ ವರೆಗೆ ಏರಲಿದೆ ಎಂದು ಈಗ ಅಂದಾಜು ಮಾಡಲಾಗಿದೆ. ಇದು ಇತರ ಹಲವು ಅನಿರೀಕ್ಷಿತ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಮಾಡಿರುವ ಅಂದಾಜು. ಉದಾಹರಣೆಗೆ, ಅಮೆರಿಕ ಹಾಗೂ ಇತರ ದೇಶಗಳು ಭಾರತದ ಮೇಲೆ ಹೇರಿರುವ ಆರ್ಥಿಕ ದಿಗ್ಬಂಧನ, ಏಶಿಯ ದೇಶಗಳ ಕರೆನ್ಸಿ ಬಿಕ್ಕಟ್ಟು ಇತ್ಯಾದಿಗಳನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಲಾಗಿಲ್ಲ.

ಈ ಬೆಲೆಯೇರಿಕೆಗೆ ಮುಖ್ಯ ಕಾರಣ ಬಜೆಟ್ ಉತ್ಪಾದಿತ ಸರಕುಗಳು ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕ ಹೇರಿರುವುದು, ಸಗಟು ಬೆಲೆ ಸೂಚ್ಯಂಕದಲ್ಲಿ ಉತ್ಪಾದಿತ ಸರಕುಗಳ ಪಾಲು ಶೇ 57.042 ರಷ್ಟು. ಆದ್ದರಿಂದಲೇ ಹಣದುಬ್ಬರ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಲಿದೆ.

ಈ ವಿಶ್ಲೇಷಣೆಗೆ ತಕ್ಕಂತೆ ಆಗಲೇ ಹಣದುಬ್ಬರದ ಪ್ರಮಾಣ ಏರುಮುಖವಾಗಿಯೇ ಇದೆ. ಮೇ 30 ಕ್ಕೆ ಕೊನೆಗೊಂಡ ವಾರದಲ್ಲಿ ಸಗಟು ಬೆಲೆ ಸೂಚ್ಯಂಕದಂತೆ ಹಣದುಬ್ಬರ ಶೇ 6.5 ರಿಂದ ಶೇ 6.67 ಕ್ಕೇರಿದೆ. ಈ ಸಗಟು ಬೆಲೆ ಸೂಚ್ಯಂಕದ ಹೆಚ್ಚಳಕ್ಕೆ ಗೋಧಿ, ಮೆಕ್ಕೆ ಜೋಳ, ರಾಗಿ, ಅಕ್ಕಿ, ಸಾಂಬಾರು ಪದಾರ್ಥ, ಚಹ, ಎಣ್ಣೆ ತಂಪು ಪಾನೀಯ ಇತ್ಯಾದಿಗಳ ಬೆಲೆ ಹೆಚ್ಚಳವಾಗಿರುವುದೇ ಕಾರಣ.

○

ಕಳ್ಳಕಾಕರಿಗೆ ಫೆಮಾ ರಕ್ಷಣೆ

ವಿದೇಶೀ ವಿನಿಮಯ ನಿರ್ಬಂಧ ಕಾಯಿದೆ ಫೆರಾ ಎಂಬುದು ದೇಶದ ಹಿತಾಸಕ್ತಿಗಳನ್ನು ಕಾಯುವುದಕ್ಕೆ ರೂಪಿಸಿದಂತದ್ದು. ಈ ಕಾಯಿದೆಯನ್ನು ಫೆಮಾ ಅಂದರೆ ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ ಎಂದು ಬದಲಾಯಿಸಲಾಗುತ್ತಿದೆ. ಈ ಬಗ್ಗೆ ಹಿಂದಿನ ಸಂಯುಕ್ತ ರಂಗ ಸರ್ಕಾರದ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರೇ ಫೆಮಾ ಎಂಬ ಕಾಯಿದೆ ರೂಪಿಸಿದ್ದು. ಶ್ರೀಮಂತ ಕಳ್ಳರ ಪರವಾಗಿಯೇ ಇರುವ ಬಿಜೆಪಿ ಸರಕಾರ ಈಗ ಫೆರಾವನ್ನು ಫೆಮಾದಿಂದ ಬದಲಾಯಿಸುವ ಪ್ರಯತ್ನ ಮಾಡುತ್ತಿದೆ.

ಹೀಗೆ ಕಾಯಿದೆ ಬದಲಾದರೆ ಏನಾಗುತ್ತದೆ? ಎಂಬುದಲ್ಲವೇ ನಿಮ್ಮ ಪ್ರಶ್ನೆ. ಫೆರಾ ಎಂಬುದು ಹೋಗಿ ಫೆಮಾ ಎಂಬುದು ಜಾರಿಗೆ ಬಂದರೆ ವಿದೇಶಿ ವಿನಿಮಯ ನಿಯಂತ್ರಣಕ್ಕೆ ಸರ್ಕಾರದ ಇಲಾಖೆಗಳಿಗಿರುವ ಹಲವು ಅಧಿಕಾರಗಳು ಹೊರಟು ಹೋಗುತ್ತವೆ. ಹಲ್ಲಿಲ್ಲದ ಹಾವಾಗಿಬಿಡುತ್ತದೆ ಅದು.

ಫೆಮಾ ತರುವ ಒಂದು ಮುಖ್ಯ ಬದಲಾವಣೆಯೆಂದರೆ ವಿದೇಶಿ ವಿನಿಮಯ ನಿಯಮಗಳ ಉಲ್ಲಂಘನೆಯನ್ನು ಸರಳೀತಗೊಳಿಸುವುದು. ಫೆರಾ ಪ್ರಕಾರ ಎನ್‌ಫೋರ್ಸ್‌ಮೆಂಟ್ ಡೈರೆಕ್ಟೊರೇಟ್‌ನ ಅಧಿಕಾರಿಗಳ ಮುಂದೆ ನೀಡಿದ ಹೇಳಿಕೆಗಳಿಗೆ ಬೆಲೆಯಿಲ್ಲದೆ ಹೋಗುವುದು. ಅಂದರೆ ಈ ಹೇಳಿಕೆಗಳ ಮೇಲಿಂದ ಯಾವುದೇ ನಿರ್ಧಾರಗಳನ್ನು ಕೈಗೊಳ್ಳುವಂತಿಲ್ಲ. ಇಂತಹ ಹೇಳಿಕೆಗಳು ಈಗ ನ್ಯಾಯಾಧೀಶರ ಎದುರು ಆಗಿದ್ದರೆ ಮಾತ್ರ ಕಾನೂನಿನ ರೀತ್ಯಾ ಸ್ವೀಕಾರಾರ್ಹ. ಇಂತಹ ಬದಲಾವಣೆಯಿಂದಾಗಿ ಈಗಾಗಲೇ ವಿಚಾರಣೆಯ ಹಂತದಲ್ಲಿರುವ ಹಲವು ಪ್ರಕರಣಗಳು ದುರ್ಬಲವಾಗುವುದು.

ಉದಾಹರಣೆಗೆ ಐಟಿಸಿ ಕಂಪನಿ ಸುಮಾರು 300 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ನಿಯಮ ಉಲ್ಲಂಘನೆಯ ಪ್ರಕರಣ ಎದುರಿಸುತ್ತಿದೆ. ಅಧಿಕಾರಿಗಳು ಚಿಟಾಲಿಯ ಮತ್ತು ಇತರ ಕಂಪನಿ ನಿರ್ವಾಹಕರುಗಳಿಂದ ಆಗಲೇ ಹೇಳಿಕೆ ಪಡೆದಿದ್ದಾರೆ. ಇವು ಬಹಳ ಮುಖ್ಯ ಸಾಕ್ಷಿ. ಹಾಗೆಯೇ ಶಾ ವಾಲೆಸ್ ಪ್ರಕರಣ ದಲ್ಲಿ 70 ಕೋಟಿ ರೂಪಾಯಿಗಳ ಉಲ್ಲಂಘನೆ ಇದೆ. ಈ ಪ್ರಕರಣದಲ್ಲಿ ನಿರಂಜನ್ ಠಾಕೂರ್ ಮತ್ತು ಇತರರು ಹೇಳಿಕೆಗಳನ್ನು ನೀಡಿದ್ದಾರೆ. ಈಗ ಫೆಮಾ ಜಾರಿಗೆ ಬಂದರೆ ಈ ಹೇಳಿಕೆಗಳಾವೂ ಕಾನೂನಿನ ಪ್ರಕಾರ ಸಿಂಧು ಎನಿಸುವುದಿಲ್ಲ. ಅಂದರೆ ಪ್ರಕರಣಗಳು ಬಿದ್ದು ಹೋಗಿ ಅಪರಾಧಿಗಳು ಮುಕ್ತರಾಗುತ್ತಾರೆ.

ಇದೇ ರೀತಿ ಚಂದ್ರಸ್ವಾಮಿ, ಕೃಷ್ಣ ಕುಮಾರ್ ಮತ್ತು ಜೈನ್ ಕುಟುಂಬಗಳ ಮೇಲಿರುವ ಪ್ರಕರಣಗಳು ನಿರ್ಜೀವವಾಗಿಬಿಡುತ್ತವೆ. ಅಂದಾಜಿನ ಪ್ರಕಾರ ಫೆಮಾ ಜಾರಿಗೆ ಬಂದ ಮೇಲೆ 3000 ಪ್ರಕರಣಗಳನ್ನು ಕೈಬಿಡಬೇಕಾಗುತ್ತದಂತೆ.

ಹೀಗೆ ಕಳ್ಳಕಾಕರಿಗೆ ರಕ್ಷಣೆ ನೀಡುವುದಕ್ಕಾಗಿಯೇ ಫೆರಾ ಬದಲಾಗಿ ಫೆಮಾ ಆಗಲಿದೆ. ಇದು ಉದಾರೀಕರಣ.

ಶೇರು ಮಾರುಕಟ್ಟೆಯ ಡೋಲಾಯಮಾನ

ಇಡೀ ಏಶಿಯಾದ ಶೇರು ಮಾರುಕಟ್ಟೆಗಳು ಕಳೆದ ವಾರ ಪಾತಾಳಮುಖವಾಗಿ ಚಲಿಸಿದವು. ಇದಕ್ಕೆ ಮುಖ್ಯ ಕಾರಣ ಜಪಾನಿನ ಯೆನ್ ತನ್ನ ಬೆಲೆ ಕಳೆದುಕೊಂಡದ್ದು. ಹಾಗೆ ಜಪಾನಿನ ಆರ್ಥಿಕವೇ ತೀರ ಕಷ್ಟದಲ್ಲಿದೆ. ಈ ಸಾರಿಯ ವ್ಯತ್ಯಾಸವೆಂದರೆ ಇದು ಹಿಂದಿನ ಆಗ್ನೇಯ ಏಶ್ಯಾ ಬಿಕ್ಕಟ್ಟಿನಂತೆ ಭಾರತದ ಕರೆನ್ಸಿಯ ಮೇಲೆ ನೇರ ಪ್ರಭಾವ ಬಿದ್ದರಲಿಲ್ಲ, ಆದರೆ ಈ ಸಾರಿ ಶೇರು ಮಾರುಕಟ್ಟೆಯ ಕುಸಿತದ ಪರಿಣಾಮ ನೇರವಾಗಿ ಭಾರತದ ಶೇರು ಮಾರುಕಟ್ಟೆಗಳ ಮೇಲೂ ಆಯಿತು. ನಂತರ ಜಪಾನಿನ ಯೆನ್ ಸುಧಾರಿಸಿಕೊಂಡಂತೆ ಭಾರತದ ಶೇರು ಮಾರುಕಟ್ಟೆಗಳು ಸುಧಾರಿಸಿಕೊಂಡವು.

ಇಲ್ಲಿ ಬಹಳ ಮುಖ್ಯವಾದದ್ದು ಉದಾರೀಕರಣವಾದಿಗಳ 'ಭಾರತದ ಆರ್ಥಿಕ ಸುಭದ್ರವಾಗಿದೆ' ಎಂಬ ವಾದ ಟೊಳ್ಳಾದದ್ದು. ಏಶಿಯನ್ ಕರೆನ್ಸಿ ಬಿಕ್ಕಟ್ಟಿನ ಸಮಯದಲ್ಲಿ ಉದಾರೀಕರಣವಾದಿಗಳು ಈ ವಾದ ಹೂಡಿದ್ದರು. ಶೇರು ಮಾರುಕಟ್ಟೆಯ ಕುಸಿತ ಒಂದು ಸೂಚನೆ ಅಷ್ಟೇ. ಉದಾರೀಕರಣ ಹೆಚ್ಚಾಗುತ್ತ ಎಲ್ಲ ನಿರ್ಬಂಧಗಳು ಸಡಿಲಗೊಳ್ಳುತ್ತ ಹೋದಂತೆಲ್ಲ ದೇಶದ ಆರ್ಥಿಕ ವಿಶ್ವದ ಆರ್ಥಿಕದಲ್ಲಿ ವಿಲೀನಗೊಳ್ಳುತ್ತ ಹೋಗುವುದರಿಂದ ವಿಶ್ವದ ಇತರೆಡೆಗಳಲ್ಲಿ ಹುಟ್ಟುವ ಬಿಕ್ಕಟ್ಟುಗಳು ನೇರವಾಗಿ ಭಾರತದೊಳಕ್ಕೂ ಬರುವ ಪರಿಸ್ಥಿತಿ. ಭಾರತದಂತಹ ಬಡರಾಷ್ಟ್ರಗಳಿಗೆ ಇಂತಹ ಬಿಕ್ಕಟ್ಟುಗಳನ್ನು ತಡೆದುಕೊಳ್ಳುವ ತಾಕತ್ತು ಇರುವುದಿಲ್ಲ. ಶ್ರೀಮಂತರನ್ನು ತಟ್ಟದೇ ಬಡವರ ಹೆಗಲಿಗೇ ಬರುವ ಈ ಬಿಕ್ಕಟ್ಟುಗಳು ಬಡವರನ್ನು ಪೂರ್ತಿ ಹಿಂಡುತ್ತವೆ.

ಭಾರತಕ್ಕೆ ಕೆಳಸ್ಥಾನ ನೀಡಿದ ಮೂಡಿಸ್

ಮೂಡೀಸ್ ಎಂಬ ಅಂತರ್ರಾಷ್ಟ್ರೀಯ ರೇಟಿಂಗ್ ಸಂಸ್ಥೆ ಭಾರತದ ರೇಟಿಂಗ್ ಅನ್ನು ಇನ್ನೂ ಕೆಳಕ್ಕೆ ಪುನರ್ವಿಮರ್ಶಿಸಿದೆ. ಭಾರತಕ್ಕೆ ಈಗ Ba_2 ಸ್ಥಾನ. ಈ ಅಂತರ್ರಾಷ್ಟ್ರೀಯ ರೇಟಿಂಗ್ ಕಂಪನಿಗಳು ನೀಡುವ ರೇಟಿಂಗ್‌ನಿಂದಲೇ ವಿದೇಶಿ ಹೂಡಿಕೆ ದಾರರು ಭಾರತದಲ್ಲಿ ಹೂಡಿಕೆ ಮಾಡುವ ಯಾ ಮಾಡದೇ ಇರಲು ತೀರ್ಮಾನಿಸುವುದರಿಂದ ಭಾರತಕ್ಕೆ ಈ ರೇಟಿಂಗ್ ಹಾನಿ ಒದಗಿಸಲಿದೆ.

ವಿದೇಶಿ ಹೂಡಿಕೆದಾರರು ಭಾರತದಲ್ಲಿ ಹೂಡಿಕೆ ಮಾಡುವುದನ್ನು ನಿಲ್ಲಿಸುತ್ತಾರೆ, ಕಡಿಮೆ ಮಾಡುತ್ತಾರೆ.

ಈಗ ಜಿ.8 ದೇಶಗಳ ಆರ್ಥಿಕ ದಿಗ್ಬಂಧನವೂ ಭಾರತದ ಮೇಲಿರುವುದರಿಂದ ಇಂತಹ ರೇಟಿಂಗ್ ಭಾರತಕ್ಕೆ ವಿದೇಶಗಳಿಂದ ಹರಿದು ಬರುವ ಹೂಡಿಕೆಗಳನ್ನು ಬತ್ತಿಸುತ್ತದೆ.

ಇದೇ ರೀತಿ ಹಲವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ರೇಟಿಂಗ್‌ನ್ನೂ ಕಡಿಮೆ ಮಾಡಿರುವುದರಿಂದ ಈ ಸಂಸ್ಥೆಗಳ ಕಿಮ್ಮತ್ತು ಕಡಿಮೆ ಆಗುತ್ತದೆ. ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಅವುಗಳ ಸ್ಥಾನವೂ ಕೆಳಗಿಳಿಯುತ್ತದೆ.

ತೀವ್ರ ಮುಗ್ಗಟ್ಟಿನ ಹೊಸ್ತಿಲಲ್ಲಿ ಏಶಿಯಾದ ದೇಶಗಳು

ಇದನ್ನು ಉದಾರೀಕರಣದ, ಜಾಗತೀಕರಣದ ವಿರೋಧಿಗಳು ಹೇಳಿದ್ದಲ್ಲ. ಉದಾರೀಕರಣ ಮತ್ತು ಜಾಗತೀಕರಣದ ಏಜೆಂಟ್ ಆಗಿರುವ ಆರ್ಥಿಕ ಮುಗ್ಗಟ್ಟುಗಳ ರೂವಾರಿಯೇ ಆಗಿರುವ ವಿಶ್ವಬ್ಯಾಂಕ್ ಮೇಲಿನಂತೆ ಹೇಳಿದೆ. ಅದರ ಪ್ರಕಾರ ಈ ದೇಶಗಳು ಈಗಾಗಲೇ ಒಂದು ಮುಗ್ಗಟ್ಟನ್ನು ಕಂಡಿವೆ. ಈಗ ಇನ್ನೊಂದು ತೀವ್ರ ಮುಗ್ಗಟ್ಟು ಉಂಟಾಗುತ್ತಿದೆ. ಈ ಮುಗ್ಗಟ್ಟು ದೀರ್ಘ ಅವಧಿಯದೂ ಆಗುವ ಸಂಭವವಿದೆ ಎಂದು ವಿಶ್ವಬ್ಯಾಂಕ್‌ನ ಪೂರ್ವ ಏಶಿಯಾದ ವಿಭಾಗದ ಉಪಾಧ್ಯಕ್ಷ ಜೀನ್ ಮೈಖೆಲ್ ಹೇಳಿದ್ದಾರೆ.

ಈ ಪ್ರದೇಶದಲ್ಲಿ ಆರ್ಥಿಕ ಬೆಳವಣಿಗೆ ದರ ನಕಾರಾತ್ಮಕ ಶೇ 2 ರಿಂದ ಶೇ 15 ರಷ್ಟಿರುತ್ತದಂತೆ. ಈ ನಕಾರಾತ್ಮಕ ಬೆಳವಣಿಗೆಯ ಪ್ರಾರಂಭದಿಂದ ಸುಮಾರು 115 ಶತಕೋಟಿ ಅಮೆರಿಕನ್ ಡಾಲರುಗಳಷ್ಟು ಬಂಡವಾಳ ಈ ದೇಶಗಳಿಂದ ಪಾಶ್ಚಿಮಾತ್ಯ ದೇಶಗಳಿಗೆ ಹರಿದು ಹೋಗಿದೆಯಂತೆ.

ಇಲ್ಲಿಯವರೆಗೆ ಈ ಬಿಕ್ಕಟ್ಟು ಭಾರತಕ್ಕೆ ಬರುವುದಿಲ್ಲ ಎಂಬ ಭ್ರಮೆಯನ್ನು ಆಳುವ ವರ್ಗ ಹುಟ್ಟಿಸಲು ಕೆಲಸ ಮಾಡುತ್ತಿತ್ತು. ಈಗ ಯಾರೂ ಈ ಭ್ರಮೆಗೆ ಒಳಗಾಗುವುದಿಲ್ಲ ಯಾಕೆಂದರೆ ಭಾರತದ ಆಡಳಿತವು ದುರ್ಬಲವಾದದ್ದು ಎಂದು ಗೊತ್ತಾಗಿ ಹೋಗಿದೆ. ಇದಲ್ಲದೆ ಭಾರತ ಅಣ್ವಸ್ತ್ರ ಪರೀಕ್ಷೆ ಮಾಡಿದ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಜಿ-8 ದೇಶಗಳು ಹೇರಿರುವುದರಿಂದ ಭಾರತದ ದೌರ್ಬಲ್ಯ ಇನ್ನೂ ಹೆಚ್ಚಾಗಿದೆ.

ಈಗ ಮತ್ತೆ ಹೆಚ್ಚಲಿರುವ ಬಡ್ಡಿ ದರಗಳು

ಉದಾರೀಕರಣದ ಕ್ರಮಗಳಿಂದಾಗಿ ಬಡ್ಡಿದರಗಳು ಕೆಳಗಿಳಿದು ಸಾಲ ಸುಲಭವಾಗಿ ದೊರೆಯುವಂತಾಗಿ ಆರ್ಥಿಕ ಬೆಳವಣಿಗೆಗೆ ಅದು ಇಂಬು ಕೊಡುತ್ತದೆ ಎಂದು ಉದಾರೀಕರಣವಾದಿಗಳು ವಾದ ಹೂಡಿದ್ದರು. ಕಳೆದ ಬಜೆಟ್ಟಿನ ನಂತರ ಬಡ್ಡಿ ದರದಲ್ಲಿ ಇಳಿತವೂ ಉಂಟಾಗಿತ್ತು. ಹಣದುಬ್ಬರ ದರ ಹಾಗೂ ಆರ್ಥಿಕ ಬೆಳವಣಿಗೆ ದರಗಳೂ ಕಡಿಮೆಯಾಗಿದ್ದವು.

ಈಗ ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಕಾರ ಬಡ್ಡಿ ದರಗಳು ಮತ್ತೆ ಏರಲಿವೆ. ಹಲವು ಸರ್ಕಾರೀ ಬಾಂಡುಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಹೆಚ್ಚಿನ ಪ್ರತಿಫಲವನ್ನು ನಿರ್ಧರಿಸಿದೆ. ಇದರ ಅರ್ಥ ಬಡ್ಡಿ ದರಗಳು ಹೆಚ್ಚಾಗಲಿವೆ ಎಂದು.

ಹೀಗೆ ಮಾಡುವುದರಿಂದ ಸರ್ಕಾರವೂ ಹೆಚ್ಚು ಸಾರ್ವಜನಿಕ ಸಾಲ ಎತ್ತುವುದು ಸಾಧ್ಯವಾಗುತ್ತದೆ. ಬಡ್ಡಿ ದರವನ್ನು ಕಡಿಮೆ ಮಾಡುವುದೇ ತನ್ನ ಗುರಿ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದ್ದರೂ ಅದರ ಕ್ರಮಗಳು ಈ ಉದ್ದೇಶಕ್ಕೆ ತದ್ವಿರುದ್ಧವಾಗಿವೆ.

ಆರ್ಥಿಕ ಟಿಪ್ಪಣಿ

ಜಿ.ಎಸ್.ಮಣಿ

ಆರ್ಥಿಕ ಭಯೋತ್ಪಾದಕರ ವಿರುದ್ಧ ಬಿಜೆಪಿಯ ಮೆದು ನಿಲುವೇಕೆ?

'Pro-active', 'Reactive' ಇವು ನಮ್ಮ ಕೇಂದ್ರಗೃಹ ಮಂತ್ರಿಗಳಿಗೆ ಬಹಳ ಪ್ರಿಯವಾದ ಇಂಗ್ಲೀಷ್ ಪದಗಳು. ಹಿಂದಿನ ಸರ್ಕಾರಗಳಿಗೂ ತಮ್ಮ ಸರಕಾರಕ್ಕೂ ಇರುವ ವ್ಯತ್ಯಾಸ ಇದೇ ಎಂದು ಅವರ ಬಲವಾದ ನಂಬಿಕೆ. ಆದರೆ ಇದು ರಾಜಕೀಯ ಉಗ್ರಗಾಮಿಗಳಿಗೆ ಮಾತ್ರ ಸೀಮಿತ. ಆರ್ಥಿಕ ಉಗ್ರಗಾಮಿಗಳ ಮಟ್ಟಿಗೆ ಹಿಂದಿನ ಸರಕಾರಗಳಿಗಿಂತ ಈಗಿನ ಸರಕಾರ ಏನೇನೂ ಭಿನ್ನವಿಲ್ಲ - ಮಾತಿನಲ್ಲಿ ಕೂಡಾ. ಇದನ್ನು ಸಂಸತ್ತಿನಲ್ಲಿ ಡನ್‌ಲಪ್ ಕಂಪನಿಯ ವ್ಯವಹಾರಗಳನ್ನು ಕುರಿತಂತ ಚರ್ಚೆಯಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯರಾದ ದೀಪಂಕರ್ ಮುಖರ್ಜಿ ಹಾಗೂ ಜೀಬನ್ ರಾಯ್‌ರವರು ಬಯಲಿಗೆಳೆದರು.

ಸರಕಾರದ ನೀತಿಗಳು, ಒಂದು ಘಟನೆಗೆ ಪ್ರತಿಕ್ರಿಯೆಯಾಗಿಯಷ್ಟೇ ಇರಬಾರದು, ಅದನ್ನು ಮುಂಗಂಡು ಮೊದಲೇ ಕಾರ್ಯಾಚರಣೆ ನಡೆಸಬೇಕು ಎನ್ನುವುದು ನಿಜವಾಗಿ ಅಡ್ವಾಣಿಯವರ ಪ್ರಿಯಪದಗಳ ಹಿಂದಿರಬೇಕಾದ ಅರ್ಥ.

ಆರ್ಥಿಕ ಉಗ್ರಗಾಮಿತನದಲ್ಲಿ ತೊಡಗಿರುವ ಡನ್‌ಲಪ್ ಟಯರ್ ಕಂಪನಿಯನ್ನು ಸರಕಾರ ವಹಿಸಿಕೊಳ್ಳುತ್ತದೆಯೋ ಎಂಬ ಪ್ರಶ್ನೆಗೆ 'ಸರಕಾರದ ಮುಂದೆ ಇಂತಹ ಪ್ರಸ್ತಾವಗಳೇನೂ ಇಲ್ಲ' ಎಂದ ಕೈಗಾರಿಕಾ ಮಂತ್ರಿ ಸಿಕಂದರ್ ಭಕ್ತ್ ಸಿಪಿಐ(ಎಂ) ಸಂಸತ್ ಸದಸ್ಯರ ಮಧ್ಯಪ್ರವೇಶದಿಂದಾಗಿ ಕೊನೆಗೆ 'ದಯವಿಟ್ಟು ಸ್ವಲ್ಪ ಸಮಯ ಕೊಡಿ' ಎನ್ನಬೇಕಾಯಿತು.

ಈ ಹಿಂದೆ ಹೇಳಿದಂತೆ ಮನು ಛಾಬ್ರಿಯಾ ಗುಂಪಿನ ಡನಲಪ್ ಕಂಪನಿ ರೋಗಗ್ರಸ್ತ ಕಂಪನಿಯಲ್ಲ. ಆದರೂ ಕಳೆದ ಏಳು ತಿಂಗಳಿಂದ ಕಾರ್ಮಿಕರಿಗೆ ಸಂಬಳ ಕೊಡದೆ ಮುಚ್ಚಿದೆ. ಇದು ತಯಾರಿಸುವ ಟಯರುಗಳಿಗೆ, ಏರೋ ಟಯರುಗಳಿಗೆ, ಟ್ರಾಕ್ಟರ್ ಟಯರುಗಳಿಗೆ ಬಹಳ ಬೇಡಿಕೆಯಿದೆ. ಆದರೂ ಪಶ್ಚಿಮ ಬಂಗಾಳದ ಘಟಕದಲ್ಲಿ 7000 ಕಾರ್ಮಿಕರು, ತಮಿಳುನಾಡಿನ ಘಟಕದಲ್ಲಿ 3000 ಕಾರ್ಮಿಕರು ದುಡಿಯುತ್ತಿರುವ ಈ ಕಂಪನಿ ಮುಚ್ಚಿದೆ. ರೋಗಗ್ರಸ್ತವಾಗಿಲ್ಲದಿದ್ದರೂ ಬಿಐಎಫ್‌ಆರ್ ಮುಂದೆ ಹೋಗಿದೆ. ರಾಷ್ಟ್ರೀಕೃತ ಬ್ಯಾಂಕುಗಳು ತನ್ನ ಕಂಪನಿಯ ಅಭಿವೃದ್ಧಿ ಕೆಲಸಗಳಿಗೆ ಸಾಲ ಕೊಡುವುದಿಲ್ಲ ಎಂದು ಮಾಲಕನ ಅಳಲು. ಕೊಟ್ಟ ಸಾಲವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬುದು ರಾಷ್ಟ್ರೀಕೃತ ಬ್ಯಾಂಕುಗಳ ತರ್ಕ. ಕೃತಕವಾಗಿ ಈ ಸಂಸ್ಥೆಯನ್ನು ರೋಗಗ್ರಸ್ತಗೊಳಿಸಲಾಗಿದೆ ಎಂಬುದು ನ್ಯಾಯಾಲಯದ ಬಾಗಿಲು ತಟ್ಟಿರುವ ಕಾರ್ಮಿಕರ ಅಭಿಪ್ರಾಯವಷ್ಟೇ ಅಲ್ಲ, ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಮತ್ತಿತರ ರಾಷ್ಟ್ರೀಕೃತ ಬ್ಯಾಂಕುಗಳ ಅಭಿಪ್ರಾಯ ಕೂಡಾ.

ಆದರೂ ಕೇಂದ್ರ ಸರ್ಕಾರ ಈ ಪ್ರಕರಣ ಬಿಐಎಫ್‌ಆರ್, ಹೈಕೋರ್ಟಿನ ಮುಂದಿದೆ ಎಂದು ಹೇಳಿಕೊಂಡು ತೆಪ್ಪಗಿದೆ. 'ಕಂಪನಿ ಕಾನೂನು ಮಂಡಳಿಯ ಸೆಕ್ಷನ್ 18-AA ಪ್ರಕಾರ ಹಣಕಾಸು ದುರಾಡಳಿತವಿದ್ದರೆ, ಆ ಬಗ್ಗೆ ನಿಮಗೆ ಖಚಿತವೆನಿಸಿದರೆ ನೀವು ತಾತ್ಕಾಲಿಕವಾಗಿ ಆಡಳಿತವನ್ನು ವಹಿಸಿಕೊಂಡು ಉತ್ಪಾದನೆಯನ್ನು ಆರಂಭಿಸಬಹುದು' ಎಂದು ದೀಪಂಕರ್ ಮುಖರ್ಜಿ ಕೇಂದ್ರ ಕೈಗಾರಿಕಾ ಮಂತ್ರಿಗಳಿಗೆ ನೆನಪಿಸಿದರು.

ಇದು ಈ ಕಂಪನಿಗೆ ಮಾತ್ರ ಸಂಬಂಧಿಸಿದ ಪ್ರಶ್ನೆಯಲ್ಲ. ಈ ಕಂಪನಿಯ ಮಾಲಕ ಮನುಛಾಬ್ರಿಯನ ಇಡೀ ಕೈಗಾರಿಕಾ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ಈ ಹಿಂದೆ ಆತನ ಶಾವ್ಯಾಲೆಸ್ ಕಂಪನಿಯಲ್ಲೂ ಇಂತಹ ಪ್ರಕರಣ ನಡೆದಿದೆ. ಈ ಕಂಪನಿಗಳ ದುಡ್ಡುಗಳನ್ನೆಲ್ಲಾ ನುಂಗಿದ ಈ ಮಾಲಕನ ನಿಜವಾದ ಕಾರ್ಯಾಲಯ ಇರುವುದು ದುಬೈಯಲ್ಲಿ ಎಂದು ಜೀಬನ್ ರಾಯ್ ಹೇಳಿದರು. ಇದನ್ನೇ ತಾವು 'ಕಾರ್ಪೋರೇಟ್ ಭಯೋತ್ಪಾದನೆ' ಎನ್ನುವುದು ಎಂದರು ದೀಪಂಕರ್ ಮುಖರ್ಜಿ.

ಈ ಇಬ್ಬರು ಸಿಪಿಐ(ಎಂ) ಸಂಸತ್ ಸದಸ್ಯರು ಹೇಳಿರುವುದೆಲ್ಲಾ ನಿಜ ಎಂದು ಕೈಗಾರಿಕಾ ಮಂತ್ರಿ ಸಿಕಂಧರ್ ಭಕ್ತ್ ಒಪ್ಪಿಕೊಳ್ಳಬೇಕಾಯಿತು. 'ನಾನು ಈ ವ್ಯಕ್ತಿಯ ಹೆಸರು ತಗೊಳ್ಳಲಿಲ್ಲ. ನಾನದನ್ನು ತಪ್ಪಿಸ ಬಯಸಿದ್ದೆ. ಡನಲಪ್ ಇಂಡಿಯ ಕಂಪನಿಯಿಂದ ಹಣವನ್ನು ಎಲ್ಲಿಗೆ ಸಾಗಿಸಲಾಗಿದೆ ಎಂಬ ಪ್ರಶ್ನೆಯನ್ನೂ ನಾನು ತಪ್ಪಿಸಬಯಸಿದ್ದೆ. ಅದೆಲ್ಲಿ ಹೋಗಿದೆ ಎಂದು ನನಗೆ ಗೊತ್ತು. ನಮ್ಮ ಈ ಚರ್ಚೆಗೆ ಸಂಬಂಧ ಪಟ್ಟ ವಿಷಯವಲ್ಲ ಇದು. ನಾನು ಮತ್ತೆ ಹೇಳುತ್ತೇನೆ - ದಯವಿಟ್ಟು ನಮಗೆ ಸಮಯ ಕೊಡಿ. ಏನೇನು ನಡೆಯುತ್ತಿದೆ ಎಂದು ನಮಗೆ ಗೊತ್ತು. ಈ ಕಂಪನಿ ಮುಚ್ಚಲು ನಾವು ಬಿಡುವುದಿಲ್ಲ' ಎಂದರು ಕೈಗಾರಿಕಾ ಮಂತ್ರಿಗಳು.

ಸಾಕಪ್ಪಾ ಸಾಕು.............................

ಪುಟ 1 ರಿಂದ

ನಮ್ಮ ಈ ಪ್ರದೇಶದಲ್ಲಿ ಹರಡಲು ನೇರವಾಗಿ ನೆರವಾಗಿದ್ದಾರೆ, ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯಗೊಳಿಸಲು ಸಹಾಯನೀಡಿದ್ದಾರೆ. ಈಗ ಆರಂಭಿಸಿರುವ ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಈ ಪ್ರದೇಶದಲ್ಲಿ ಗಂಭೀರ ಪರಿಸ್ಥಿತಿ ಉಂಟು ಮಾಡಿರುವುದಲ್ಲದೆ, ಭಾರತೀಯ ಜನಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೂ ಭಾರೀ ಏಟು ನೀಡಲಿದೆ.

ಒಟ್ಟಿನಲ್ಲಿ, ಕಳೆದ ನೂರು ದಿನಗಳಲ್ಲಿ ನಾವು ನೋಡಿರುವುದು ಆರ್.ಎಸ್.ಎಸ್.ನ ರಾಜಕೀಯ ಅಂಗದ ನೇತೃತ್ವದಲ್ಲಿರುವ ಒಂದು ಸರಕಾರವನ್ನು ತನ್ನ ಆಳ್ವಿಕೆಯನ್ನು ಕ್ರೋಢೀಕರಿಸಲಿಕ್ಕಾಗಿ ಸಂವಿಧಾನವನ್ನು ದೂರತಳ್ಳಲು, ಆಡಳಿತದ ಪ್ರಜಾಪ್ರಭುತ್ವ ವಿಧಿ-ವಿಧಾನಗಳನ್ನು ಧ್ವಂಸ ಮಾಡಲು, ಕನಿಷ್ಟ ರಾಜಕೀಯ ನೈತಿಕತೆಯನ್ನು ಹಾಳುಗೆಡವಲು, ರಾಷ್ಟ್ರಾಂಧ ಭಾವೋದ್ರೇಕವನ್ನು ಬಡಿದೆಬ್ಬಿಸಲು ಹಾಗೂ ರಾಜಕೀಯದಲ್ಲಿ ಅಪರಾಧ ಮತ್ತು ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲೂ ಇವರು ಹೇಸುವವರಲ್ಲ.

ಚುನಾವಣಾ ಫಲಿತಾಂಶಗಳು ಪ್ರಕಟವಾಗುತ್ತಿದ್ದಾಗ ಬಿಜೆಪಿಗೊಂದು ಅವಕಾಶ ಕೊಡಬೇಕು ಎಂದು 'ಪ್ರಜಾಪ್ರಭುತ್ವ'ದ ಹೆಸರಲ್ಲಿ ಒಂದೇ ಸಮನೆ ಅರಚಾಡಿದ ಬುದ್ಧಿಜೀವಿಗಳೆನಿಸಿಕೊಂಡವರು, ಪತ್ರಕರ್ತರು ಈಗ ಬಾಯಿಮುಚ್ಚಿಕೊಂಡಿದ್ದಾರೆ - ತಮ್ಮ ಕಣ್ಣೆದುರೇ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುತ್ತಿದ್ದರೂ. ತಾವು ರಾಜ್ಯಗಳಿಗೆ ಹೆಚ್ಚಿನ ಅಧಿಕಾರಕ್ಕಾಗಿ ಹೋರಾಡುವವರು ಎಂದು ಹೆಮ್ಮೆ ಪಡುತ್ತಿದ್ದ ಅಕಾಲಿಗಳು, ತೆಲುಗುದೇಶಂ ಇತ್ಯಾದಿಗಳು ಈಗ ಕೇವಲ ಅಧಿಕಾರದಾಸೆಯಿಂದ ಇವರನ್ನು ಬೆಂಬಲಿಸುತ್ತಿದ್ದಾರೆ. ಇಂತಹ ಅವನತಿ ನಮ್ಮ ಪ್ರಜಾಪ್ರಭುತ್ವ ಜಾತ್ಯಾತೀತ ವ್ಯವಸ್ಥೆಯನ್ನು ನಿರ್ಮೂಲಗೊಳಿಸಲು ಬಿಡಬೇಕೇ? ಬಿಜೆಪಿ ನಮ್ಮ ದೇಶದ, ನಮ್ಮ ಜನಗಳ ಕಲ್ಯಾಣದೊಂದಿಗೆ ಆಟವಾಡುವುದನ್ನು ಮುಂದುವರಿಸಲು ಬಿಡಬೇಕೇ? ಇಲ್ಲ, ನಮ್ಮ ಜನ ಈಗ ಹೇಳಬೇಕಾಗಿದೆ - ಸಾಕಪ್ಪಾ ಸಾಕು!

ಕರ್ನಾಟಕದಲ್ಲಿ ಕಳೆದವಾರ

ಜೂನ್ 19

● ಮಕ್ಕಳಿಗೆ ಮತ್ತು ಗರ್ಭಿಣಿಯರಿಂಗೆ ಪೌಷ್ಠಿಕ ಆಹಾರ ನೀಡುವ ಯೋಜನೆಯಲ್ಲಿ ನಡೆಯುತ್ತಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಮುಖ್ಯಮಂತ್ರಿಗಳ ಆದೇಶ.

ಜೂನ್ 20

● ಕೊಜೆಂಟ್ರಿಕ್ ವಿದ್ಯುತ್ ಸ್ಥಾವರಕ್ಕೆ ಸುಪ್ರೀಂ ಕೋರ್ಟ್ ತೀರ್ಪು ಬರುವವರೆಗೆ ಸದ್ಯದಲ್ಲಿ ಕೇಂದ್ರದ ಅನುಮತಿ ಸಿಗುವ ಸಂಭವವಿಲ್ಲ ಎಂದು ಕೇಂದ್ರ ವಿದ್ಯುತ್ ಸಚಿವರು.

● ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 35-02% ತೇರ್ಗಡೆ. ತೇರ್ಗಡೆ ಮತ್ತು ರ್‍ಯಾಂಕ್ ಗಳಿಕೆಯಲ್ಲಿ ಈ ಬಾರಿಯೂ ವಿದ್ಯಾರ್ಥಿನಿಯರದ್ದೇ ಮೇಲುಗೈ. ಬಾಲಕಿಯರ ತೇರ್ಗಡೆ ಪ್ರಮಾಣ ಶೇ 44.82 ಬಾಲಕರದ್ದು ಶೇ 28.84

ಜೂನ್ 21

● ಮುಂಬರುವ ವಿಧಾನಸಭಾ ಚುನಾವಣೆಗಳನ್ನು ಜನತಾದಳ ಸಾಮೂಹಿಕ ನಾಯಕತ್ವದ ಆಧಾರ ದಲ್ಲಿ ಎದುರಿಸುವುದು ಎಂದು ಉಪಮುಖ್ಯಮಂತ್ರಿಗಳು.

ಜೂನ್ 22

● ವಿವಿಧ ನಿಗಮ-ಮಂಡಳಿಗಳ ಅಧ್ಯಕ್ಷರ ರಾಜೀನಾಮೆ ಪ್ರಕ್ರಿಯೆ ಆರಂಭ. 19 ಅಧ್ಯಕ್ಷರ ರಾಜೀನಾಮೆ

ಜೂನ್ 23

● ಬೆಂಗಳೂರು ನಗರದಲ್ಲಿ ಕೊಲೆ-ಸುಲಿಗೆಗಳೂ ಸೇರಿದಂತೆ ವಿವಿಧ ರೀತಿಯ ಅಪರಾಧಗಳ ಹೆಚ್ಚಳದ ಬಗ್ಗೆ ಮುಖ್ಯಮಂತ್ರಿ ಆತಂಕ, ಇದನ್ನು ತಡೆಯುವ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಹಿರಿಯ ಪೋಲೀಸ್ ಅಧಿಕಾರಿಗಳಿಗೆ ಆದೇಶ.

ಜೂನ್ 23

● ಸುಪಾರಿ ಕೊಲೆಗಳಲ್ಲಿ ಭಾಗಿಯಾದ ಆರೋಪಿ ಸಚಿವ ಮಾಲಿಕಯ್ಯ ಗುತ್ತೇದಾರ್ ಅವರು ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿ ರಾಜಕೀಯ ಶಾಂತಿ ಸಮಿತಿ ನೀಡಿದ್ದ ಕಲೆಯಂತೆ ಸಂಪೂರ್ಣ ಕಲ್ಬುರ್ಗಿ ಬಂದ್.

● ರಾಜ್ಯದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ 900 ಕೋಟಿ ಬೇಕಿದ್ದು, ರಾಜ್ಯದ 'ರಸ್ತೆ ನಿಧಿ'ಗೆ ಕೇಂದ್ರ ಸರ್ಕಾರ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕು ಎಂದು ಕೇಂದ್ರ ಭೂಸಾರಿಗೆ ಮಂತ್ರಿಗಳಿಗೆ ಮುಖ್ಯಮಂತ್ರಿಗಳ ಆಗ್ರಹ.

ಜೂನ್ 24

● ವಿಧಾನಪರಿಷತ್ತಿನ ವಾಯುವ್ಯ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳು, ಪಶ್ಚಿಮ ಶಿಕ್ಷಕರ ಕ್ಷೇತ್ರ ಹಾಗೂ ದಕ್ಷಿಣ ಪದವೀಕ್ಷೇತ್ರದಿಂದ ಒಟ್ಟು 4 ಸ್ಥಾನಗಳಿಗೆ 65-70 ಶೇ ಮತದಾನ.

● ಪಾವಗಡ ತಾಲೂಕಿನಲ್ಲಿ ಪೋಲೀಸ್-ನಕ್ಸಲೀಯರ ಕಾಳಗ ನಡೆದಿದೆಯೆಂದು ವರದಿ.

ಕೇಂದ್ರ ಬಜೆಟ್ ವಿರುದ್ಧ ರಾಜ್ಯಾದ್ಯಂತ ಜಂಟಿ ಪ್ರತಿಭಟನೆ, ಧರಣಿ ಸತ್ಯಾಗ್ರಹ

ಕುಂದಾಪುರ; ಕೇಂದ್ರ ಸರ್ಕಾರದ ಬಜೆಟ್ ವಿರುದ್ಧ ಎಡಪಕ್ಷಗಳ ಕರೆಯ ಮೇರೆಗೆ ನಡೆದ ಜೂನ್ 15 ರ ಪ್ರತಿಭಟನೆಯ ಅಂಗವಾಗಿ ದ.ಕನ್ನಡ ಕುಂದಾಪುರದಲ್ಲಿ ಸಿಪಿಐ(ಎಂ) ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಹಂಚಿನ ಕಾರ್ಮಿಕರೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ನೂರಾರು ಜನರು ತಾಲ್ಲೂಕು ಕಛೇರಿ ಎದುರು ಪ್ರತಿಭಟಿಸಿದರು. ನಂತರ ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆಯುನ್ನುದ್ದೇಶಿಸಿ ಮಾತನಾಡಿದ ರಾಜ್ಯ ಸಮಿತಿ ಸದಸ್ಯರಾದ ಕೆ.ಶಂಕರ್ ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನ ಸಾಮಾನ್ಯರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿ, ದೇಶದ ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಬಿಕ್ಕಟ್ಟಿಗೆ ನೂಕಿರುವ ಕೇಂದ್ರ ಸರ್ಕಾರದ ಈ ಬಜೆಟ್ ಆಮದು ಮತ್ತು ರಫ್ತು ನೀತಿಯನ್ನು ಸಮರ್ಥಿಸಿರುವ ಬಜೆಟ್ ಆಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಬ್ರಾಹಂ ಕರ್ಕಡ ಮಾತನಾಡಿ ದೇಶದ ಜನತೆ ಬಿಜೆಪಿಯಿಂದ ಬಯಸಿದ್ದು ಭದ್ರ ಸರ್ಕಾರ ಆದರೆ ಅದು ಆರಂಭದಲ್ಲೇ ಅಸ್ಥಿರಗೊಂಡಿರುವುದನ್ನು ಜನತೆ ಕಂಡಿದ್ದಾರೆಂದರು. ಜಿಲ್ಲಾ ಸಮಿತಿ ಸದಸ್ಯ ಮಹಾಬಲ ಒಡೇರ ಹೋಬಳಿ ಸಭೆಯುನ್ನುದ್ದೇಶಿಸಿ ಮಾತನಾಡಿದರು. ಸಿ.ನಾರಾಯಣ ಸ್ವಾಗತಿಸಿದರೆ ಹೆಚ್. ನರಸಿಂಹ ವಂದಿಸಿದರು.

ತುಮಕೂರು: ಜೂನ್ 15 ರಂದು ಜಿಲ್ಲಾ ಸಿಪಿಐ ಹಾಗೂ ಸಿಪಿಐ(ಎಂ) ಕಾರ್ಯಕರ್ತರು ನಗರದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು.

ಗಿಫ್ಟ್‌ಟ್ಯಾಕ್ಸ್‌ನ್ನು ಕಡಿತಗೊಳಿಸಿರುವ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಸುವುದರ ಮೂಲಕ ಸ್ಪಷ್ಟವಾಗಿ ತನ್ನ ಬಡಜನ ವಿರೋಧಿ ನೀತಿಯನ್ನು ಬಹಿರಂಗ ಗೊಳಿಸಿದೆಯೆಂದು, ಈ ಸರ್ಕಾರ ಹಿಂದೆ ಸಮರ್ಥ ಪ್ರಧಾನಿ ಎಂಬ ಘೋಷಣೆ ನೀಡಿದ್ದ ವಾಜಪೇಯಿ ಸರ್ಕಾರ ದೇಶವನ್ನು ನಿರುದ್ಯೋಗದೆಡೆಗೆ ಕೊಂಡು ಹೋಗುತ್ತಿದ್ದು, ಬಿಜೆಪಿ ಈ ನೀತಿಯನ್ನು ಹಿಂದಕ್ಕೆ ಪಡೆಯ ಬೇಕೆಂದು ಜಿಲ್ಲಾಧಿಕಾರಿಗಳ ಕಚೇರಿಯೆದುರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಉಮೇಶ್ ಎಚ್ಚರಿಸಿದರು.

ಬಿಜೆಪಿ ಅಥವಾ ತನ್ನ ಮಾತೃ ಸಂಸ್ಥೆಯಾದ ಆರ್‌ಎಸ್‌ಎಸ್ ವಿಚಾರಧಾರೆ ಒಳಗೊಂಡ ಗುಪ್ತ ಅಜೆಂಡಾವನ್ನು ದೇಶದಲ್ಲಿ ಜಾರಿ ಮಾಡುವ ಮೂಲಕ ದೇಶದ ಐಕ್ಯತೆಯನ್ನು ಒಡೆಯಲು ಹೊರಟಿದೆ ಯೆಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಂ.ಶಿವಣ್ಣ ನವರು ವಿವರಿಸಿದರು. ಇದೇ ಸಂದರ್ಭದಲ್ಲಿ ಸಿಪಿಐ(ಎಂ) ನ ಮಹಮ್ಮದ್ ದಸ್ತಗೀರ್ ಅವರು ಮಾತನಾಡಿ, ಸ್ವದೇಶಿ ಜಪದಿಂದ ಅಧಿಕಾರ ಹಿಡಿದು ಬಿಜೆಪಿ ಇಂದು ಜಪಾನಿನ ಸುಜುಕಿ ಮಾರುತಿ ಕಂಪನಿಯ ಸ್ವದೇಶಿ ವ್ಯವಸ್ಥಾಪಕರನ್ನು ಕೈಬಿಟ್ಟು ಕಂಪನಿಗೆ ಜಪಾನಿನ ವ್ಯಕ್ತಿಯನ್ನೇ ನಿರ್ದೇಶಕರನ್ನಾಗಿ ಮಾಡಿರುವುದು ಬಿಜೆಪಿಯ ಡೋಂಗೀ ಸ್ವದೇಶಿ ನೀತಿಗೆ ಸಾಕ್ಷಿಯಾಗಿದೆ. ಜೀವವಿಮಾ ವಲಯದಲ್ಲಿ ಖಾಸಗಿಯವರಿಗೆ ಅನುಮತಿ ನೀಡಿರುವ ಕೇಂದ್ರದ ಕ್ರಮವನ್ನು ಸಹ ಖಂಡಿಸ ಲಾಯಿತು. ಈ ಪ್ರತಿಭಟನಾ ಕಾರ್ಯ ಕ್ರಮದಲ್ಲಿ ಸಿಪಿಐ ನ ಟಿ.ಆರ್.ರೇವಣ್ಣ, ಕಂಬೇಗೌಡ, ಸಿಐಟಿಯು ನ ಸೈಯದ್ ಮುಜೀಬ್, ಬೀಡಿ ಕಾರ್ಮಿಕ ಸಂಘದ ಪದಾಧಿಕಾರಿಗಳು ಎಐಟಿಯುಸಿನ ಕಾರ್ಮಿಕರು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನ ಕಾರ್ಯಕರ್ತರು ಭಾಗವಹಿಸಿದ್ದರು.

ಗೌರಿಬಿದನೂರು: ನೂರಾರು ರೈತ ಕಾರ್ಮಿಕರು ತಾಲೂಕು ಕಛೇರಿ ಮುಂದೆ ಕೇಂದ್ರದ ಬಿಜೆಪಿ ಆಯ-ವ್ಯಯದ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ಸತ್ಯಾಗ್ರಹ ನಡೆಸಿದರು. ಸಿಪಿಐ(ಎಂ)ನ ತಾಲೂಕು ಸಮಿತಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯ ವಿ.ಶ್ರೀನಿವಾಸ ಕರ್ಣ ಮಾತನಾಡಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅಗತ್ಯ ಕೆಲಸಗಳನ್ನು ಬಿಟ್ಟು ಒಣಗೇಡಿ ಹಾಗೂ ಬೇಜವಾಬ್ದಾರಿ ಕಾರ್ಯಗಳಲ್ಲಿ ತೊಡಗಿದೆ ಎಂದರು. ಮತ್ತೊಬ್ಬ ಜಿಲ್ಲಾ ಸಮಿತಿ ಸದಸ್ಯ ಸಿದ್ದಗಂಗಪ್ಪ ಮಾತನಾಡಿ ಬಜೆಟ್ ಬಗ್ಗೆ ವಿವರಿಸಿದರು. ಕೊನೆಯಲ್ಲಿ ತಹಶೀಲ್ದಾರರಿಗೆ ಪ್ರತಿಭಟನಾ ಮನವಿ ಸಲ್ಲಿಸಲಾಯಿತು.

ಬಿಜಾಪುರ: ಕೇಂದ್ರದ ಮುಂಗಡ ಪತ್ರ ವಿರೋಧಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆಯ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸ ಲಾಯಿತು. ಪೆಟ್ರೋಲ್ ಬೆಲೆ ವಿಮಾ ವಲಯ ಖಾಸಗೀಕರಣವಿರುವ ಈ ಬಜೆಟ್ ಲಾಭಕೋರರ ಪರವಾದ ಬಜೆಟ್ ಆಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಭೀಮಶಿ ಕಲಾದಗಿ ವಿವರಿಸಿದರು. ರೈತ-ಕೂಲಿಕಾರರು, ಕಾರ್ಮಿಕರು, ಹಾಗೂ ಚಿಕ್ಕ ವ್ಯಾಪಾರಸ್ಥರ ಮತ್ತು ಮಧ್ಯಮ ವರ್ಗದ ಪರವಾಗಿ ಮನವಿ ಸಲ್ಲಿಸಿದ ನಿಯೋಗದಲ್ಲಿ ಭೀಮಸಿ ಕಲಾದಗಿ, ಚಂಚಲಕರ, ಸಂಗಮೇಶ್ವರ ಏಳಗಿ ಮುಂತಾದವರಿದ್ದರು.

ದಾವಣಗೆರೆ: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮುಂಗಡ ಪತ್ರವು, ಬೆಲೆ ಏರಿಕೆ, ನಿರುದ್ಯೋಗ ಹಾಗೂ ಹಣದುಬ್ಬರಕ್ಕೆ ಅವಕಾಶ ನೀಡಿದ್ದು, ಬಜೆಟ್ ಸಂಪೂರ್ಣ ಜನಸಾಮಾನ್ಯರ ವಿರೋಧಿಯಾಗಿದೆ ಎಂದು ಪ್ರತಿಭಟಿಸಿ ನಗರದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ರಾಜ್ಯ ರೈತ ಸಂಘದ ನೂರಾರು ಕಾರ್ಯಕರ್ತರು ಉಪ ವಿಭಾಗಾಧಿಕಾರಗಳ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನದ ಮೂ[illegible] ಧರಣಿ ಸತ್ಯಾಗ್ರಹ ನಡೆಸಿದರು.

ಜ[illegible] ಇಲ್ಲಿನ ಸಿಪಿಐ ಕೇಂದ್ರ ಕಚೇರಿಯಿಂದ ಮೆರವಣಿಗೆ ಆರಂಭಿಸಿದ ಮೂರು ಪಕ್ಷಗಳ ಕಾರ್ಯಕರ್ತರುಗಳು ನಂತರ ಉಪವಿಭಾಗಾಧಿಕಾರಿಗಳ ಕಛೇರಿ ಎದುರು ಮಧ್ಯಾಹ್ನದವರೆಗೂ ಧರಣಿ ಸತ್ಯಾಗ್ರಹ ನಡೆಸಿ ಮನವಿ ಸಲ್ಲಿಸಿದರು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಮಾಜಿ ಶಾಸಕರು ಹಾಗೂ ಹಿರಿಯ ಕಾರ್ಮಿಕ ಮುಖಂಡರು ಆದ ಪಂಪಾಪತಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಆರ್. ಆನಂದ ತೀರ್ಥ, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಮಹಾಂತೇಶ್, ಮಾಜಿ ನಗರಾಧ್ಯಕ್ಷರಾದ ಹೆಚ್.ಕೆ.ರಾಮಚಂದ್ರಪ್ಪ ಮೊದಲಾದವರು ಮಾತನಾಡಿದರು.

ಧರಣಿ ಸತ್ಯಾಗ್ರಹದ ನೇತೃತ್ವವನ್ನು ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರಾದ ಆನಗೋಡು ರಾಮಚಂದ್ರಪ್ಪ, ಜಿಕ್ರೆಯಾ, ಬೈರಪ್ಪ, ಅಡಿವೆಪ್ಪ, ಆಟೋ ಚಾಲಕರ ಸಂಘದ ಕಲ್ಲೇಶಪ್ಪ, ರೈತ ಸಂಘದ ಶೇಖರ ನಾಯ್ಕ, ಮುನಿಯಪ್ಪ, ಬ್ಯಾಂಕ್ ನೌಕರರ ಸಂಘದ ಎಂ.ಆರ್.ಹಿರೇಮಠ, ಹನುಮಂತರಾವ್, ಹುಸೇನ್, ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಎ.ಎಸ್.ಮೂರ್ತಿ, ವಿದ್ಯಾರ್ಥಿ-ಯುವಜನ ಮುಖಂಡರಾದ ಜೆ.ಲತಾ, ಇ.ಶ್ರೀನಿವಾಸ್, ಪಿ.ಮಂಜುನಾಥ ಗೌಡಜ್ಜಿ, ಸೈಯದ್ ಖಾಜಾಪೀರ್, ಶಿವಶಂಕರ್, ಆಂಜನಪ್ಪ ಮುಂತಾದವರು ವಹಿಸಿದ್ದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಜೆ.ಎಂ. ಹನುಮಂತಪ್ಪನವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಕೆ.ಎಲ್.ಭಟ್ ವಂದಿಸಿದರು.

ತುಮಕೂರು :

ಅರ್ಹರಿಗೆಲ್ಲಾ ಪಡಿತರ ಚೀಟಿ

ಜೂನ್ 16 ರಂದು ಸಿಐಟಿಯು ತಮ್ಮ ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಮತ್ತು ಸಿಪಿಐ(ಎಂ) ಗಳ ಕಾರ್ಯಕರ್ತರುಗಳು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕರ ಕಛೇರಿ ಎದುರು ಪ್ರತಿಭಟನೆ ನಡೆಸಿದರು. ಇದೇ ಸಂದರ್ಭದಲ್ಲಿ ಹಸಿರು ಪಡಿತರ ಚೀಟಿ ನೀಡುವಂತೆ ಅದಕ್ಕೆ ಅನುಕೂಲವಾಗುವ ಸರ್ವೆ ಕಾರ್ಯವನ್ನು ಆರಂಭಿಸಬೇಕೆಂದು, ಬೀಡಿ ಕಾರ್ಮಿಕರಿಗೆ ಹಾಗೂ ಅಸಂಘಟಿತ ಕಾರ್ಮಿಕರಿಗೆಲ್ಲಾ ಹಸಿರು ಪಡಿತರ ಚೀಟಿ ನೀಡುವಂತೆ ಮತ್ತು ಸಂಘದ ವತಿಯಿಂದ ನೀಡಿರುವ ಸುಮಾರು 200 ಅರ್ಜಿದಾರರಿಗೆ ಈ ತಕ್ಷಣದಲ್ಲಿ ರೇಷನ್ ಕಾರ್ಡ್ ನೀಡುವಂತೆ ಒತ್ತಾಯಿಸಲಾಯಿತು. ಈಗಾಗಲೇ ಕೆಂಪು ಕಾರ್ಡುಗಳನ್ನು ಹೊಂದಿರುವ ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ಕಾರ್ಡುಗಳನ್ನು ಹಸಿರು ಕಾರ್ಡುಗಳಾಗಿ ಬದಲಾಯಿಸಿ ಕೊಡುವಂತೆ ಸಹ ಒತ್ತಾಯಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆಯ ಉಪನಿರ್ದೇಶಕರು, ಆ ಸಂಬಂಧ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ತಿಳಿಸಿದ್ದಾರೆ.

ಜಿಲ್ಲೆಯಲ್ಲಿರುವ ಪಡಿತರ ಚೀಟಿ ರಹಿತ ನಾಗರೀಕರಿಗೆಲ್ಲಾ (ಅರ್ಹರಿಗೆ) ಆಗಸ್ಟ್ ತಿಂಗಳ ಮೊದಲ ವಾರದೊಳಗಾಗಿ ಪಡಿತರ ಚೀಟಿ ನೀಡುವುದಾಗಿ ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಅರ್ಜಿ ಸಲ್ಲಿಸುವಂತೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಎ.ಗೋವಿಂದರಾಜು ರವರು ತಮ್ಮ ಕಚೇರಿ ಎದುರು ರೇಷನ್ ಕಾರ್ಡ್‌ಗೆ ಒತ್ತಾಯಿಸಿ ಆಗಮಿಸಿದ್ದ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕ ಸಂಘದ ಕಾರ್ಯಕರ್ತರಿಗೆ ಭರವಸೆ ನೀಡಿದರು.

ಈ ಹೋರಾಟದಲ್ಲಿ ಸಿಐಟಿಯುನ ರಾಜ್ಯ ಉಪಾಧ್ಯಕ್ಷ ಮಹಮ್ಮದ್ ದಸ್ತಗೀರ್, ಸಿಪಿಐ(ಎಂ)ನ ಬಿ.ಉಮೇಶ್, ಆಟೋ ಚಾಲಕರ ಸಂಘದ ಚೆಲುವರಾಜು, ಬೀಡಿ ಕಾರ್ಮಿಕ ಸಂಘದ ಸೈಯದ್ ಮುಜೀಬ್ ಮತ್ತಿತರರು ಭಾಗವಹಿಸಿದ್ದರು.

"ನಿರಂತರ ಸಂಘಟಿತ ಹೋರಾಟದಿಂದಲೇ ಜಯ ಸಾಧ್ಯ"

ಕಾರ್ಮಿಕರು ಒಟ್ಟಾಗಿ ನಿರಂತರವಾಗಿ ತಮ್ಮ ಬೇಡಿಕೆಗಳ ಆಧಾರದಲ್ಲಿ ಹೋರಾಟ ನಡೆಸಿದಾಗ ಮಾತ್ರವೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಜಯ ಪಡೆಯಲು ಸಾಧ್ಯವೆಂದರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು. ಅವರು ಜೂನ್ 13 ರಂದು ಬೆಂಗಳೂರಿನಲ್ಲಿ ನಡೆದ ವಸತಿಹೀನ ಬೀಡಿ ಕಾರ್ಮಿಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವಸತಿಹೀನ ಕಾರ್ಮಿಕರಿಗಾಗಿ ಸಾಮೂಹಿಕ ವಸತಿ ಯೋಜನೆಯನ್ನು ರೂಪಿಸುವಂತೆ ಸರ್ಕಾರಕ್ಕೆ ಒತ್ತಡ ತರುವಲ್ಲಿ ತಾವು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಅವರು ಬೀಡಿ ಕಾರ್ಮಿಕರಿಗೆ ಭರವಸೆ ನೀಡಿದರು.

ಜಿಲ್ಲೆಯ ಬೀಡಿ ಕಾರ್ಮಿಕರ ಮಕ್ಕಳಿಗೆ 16.5 ಲಕ್ಷ ರೂ. ವಿದ್ಯಾರ್ಥಿ ವೇತನ

ಕೇಂದ್ರದ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿ ಮತ್ತು ಸಂಘಟನೆ, ವತಿಯಿಂದ ಜಿಲ್ಲೆಯ ವಿವಿಧೆಡೆಯಲ್ಲಿ ಅಭ್ಯಾಸ ಮಾಡುತ್ತಿರುವ ಬೀಡಿ ಕಾರ್ಮಿಕರ ಮಕ್ಕಳಿಗೆ 1997-98ನೇ ಸಾಲಿನಲ್ಲಿ ಒಟ್ಟು 16.5 ಲಕ್ಷ ರೂ.ಗಳ ವಿದ್ಯಾರ್ಥಿವೇತನ ಮಂಜೂರಾಗಿದೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಹಾಗೂ ಪದವಿ ಮತ್ತಿತರೆ ಮಟ್ಟಗಳಲ್ಲಿ ಅಭ್ಯಾಸ ಮಾಡುತ್ತಿರುವ ಸರಿಸುಮಾರು 6000 ಜನ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನವು ಮಂಜೂರಾಗಿರುವುದಾಗಿ ಬೆಂಗಳೂರಿನಲ್ಲಿ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಸ್ಥೆಯ ಆಯುಕ್ತರವರ ಕಚೇರಿಗೆ ಭೇಟಿ ನೀಡಿದ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಸಿಐಟಿಯುನ ನಿಯೋಗಕ್ಕೆ ವಿದ್ಯಾರ್ಥಿವೇತನ ವಿಭಾಗದ ಮುಖ್ಯಸ್ಥರು ಈ ವಿಷಯವನ್ನು ತಿಳಿಸಿದ್ದಾರೆ.

ಸಿಐಟಿಯು ನೇತೃತ್ವದ ಬೀಡಿ ಕಾರ್ಮಿಕರ ಸಂಘದ ಪರಿಶ್ರಮದಿಂದಾಗಿ ಈ ಸಾಧನೆ ಆಯಿತೆಂಬುದು ಗಮನಾರ್ಹ.

ತುಂಗಭದ್ರ ಎಡದಂಡೆ ಕಾಲುವೆಗೆ ಜೂನ್ ಒಳಗೆ ನೀರು ಬಿಡುವಂತೆ ಒತ್ತಾಯಿಸಿ ರಸ್ತಾರೋಖೋ

ಗಂಗಾವತಿ: ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸಂಯುಕ್ತ ಆಶ್ರಯದಲ್ಲಿ ನೂರಾರು ರೈತ ಕೂಲಿಕಾರರು ಜೂನ್ 17 ರಂದು ಗಂಗಾವತಿಯ ಚನ್ನಬಸವ ಸ್ವಾಮಿ ವೃತ್ತದಲ್ಲಿ ರಸ್ತಾರೋಖೋ ಕಾರ್ಯಕ್ರಮ ನಡೆಸಿದರು.

ಜೂನ್ ಅಂತ್ಯದೊಳಗೆ ತುಂಗಭದ್ರ ಎಡದಂಡ ಕಾಲುವೆಗೆ ನೀರು ಒದಗಿಸುವಂತೆ ಕಳೆದ ವರ್ಷ ಕಾಲುವೆ ಬಿರುಕಿನಿಂದ ಆದ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸಲು ಹಾಗೂ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ರೂ. ಒಂದು ಲಕ್ಷ ಪರಿಹಾರ ನೀಡುವಂತೆ ಮತ್ತು ನಷ್ಟಕ್ಕೆ ಒಳಗಾದ ರೈತರಿಗೆ ಸರಕಾರಿ ಮತ್ತು ಸಹಕಾರಿ ಸಾಲವನ್ನು ಮನ್ನಾ ಮಾಡಲು, ಕಳಪೆ ಬೀಜ ಮತ್ತು ಕ್ರಿಮಿನಾಶಕ ತಯಾರಿಸುವ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲು ಒತ್ತಾಯಿಸಿ ನೂರಾರು ರೈತ-ಕೂಲಿಕಾರರು ಚಳುವಳಿ ನಡೆಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಹನುಮೇಶ ಬರಗೂರ ಮಾತನಾಡಿ ಕೇಂದ್ರದ ಬಿಜೆಪಿ ಸರಕಾರ, ರಾಜ್ಯದ ಜನತಾದಳ ಸರಕಾರಗಳೆರಡು ರೈತ ವಿರೋಧಿ ಸರಕಾರಗಳಾಗಿವೆ. ತುಂಗಭದ್ರ ಎಡದಂಡೆ ನಾಲೆಯನ್ನು ಕೂಡಲೇ ದುರಸ್ತಿ ಮಾಡಿಸಿ ರೈತರಿಗೆ ಶೀಘ್ರ ನೀರು ಒದಗಿಸಬೇಕು, ಇಲ್ಲವಾದಲ್ಲಿ ಮುಂದಿನ ದಿನದಲ್ಲಿ ರೈತರು ಉಗ್ರವಾದ ಹೋರಾಟ ಮಾಡುವರೆಂದು ಸರಕಾರಕ್ಕೆ ಎಚ್ಚರಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ತಿಪ್ಪೇರುದ್ರ ಸ್ವಾಮಿ ಮಾತನಾಡುತ್ತಾ ಗಂಗಾವತಿ ತಾಲೂಕಿನಲ್ಲಿ ನೂರಾರು ರೈತರು ತಮ್ಮ ಹೊಲದಲ್ಲಿ ಕಬ್ಬು ನಾಟಿ ಮಾಡಿದ್ದಾರೆ, ನೀರಿಲ್ಲದೆ ಕಬ್ಬು ಒಣಗುವ ಸ್ಥಿತಿ ಬಂದಿದೆ, ಗಂಗಾವತಿ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿ ಖಾಸಗಿಯವರಿಗೆ ವಹಿಸುವ ಪಿತೂರಿಯನ್ನು ಸರಕಾರ ನಡೆಸಿದೆ ಎಂದ ಅವರು ತುಂದಭದ್ರ ಎಡದಂಡೆ ಕಾಲುವೆಗೆ ನೀರು ಬಿಡಿಸಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿ ಈ ರೈತ ವಿರೋಧಿ ಸರಕಾರಕ್ಕೆ ಎಚ್ಚರಿಕೆ ನೀಡಬೇಕೆಂದು ರೈತರಿಗೆ ಕರೆ ನೀಡಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಬಾಳಪ್ಪ ಮಾತನಾಡುತ್ತಾ ತುಂಗಭದ್ರ ಎಡದಂಡೆ ಕಾಲುವೆಗೆ ನೀರು ಬೇಗನೆ ಬಿಡದಿದ್ದರೆ, ಕೃಷಿಯಲ್ಲಿ ಕೆಲಸ ಮಾಡುವ ಕೃಷಿಕೂಲಿಕಾರರು ಪಟ್ಟಣಕ್ಕೆ ಗುಳೆ ಹೋಗಬೇಕಾದಂತಹ ಕಾಲ ಬಂದಿದೆ. ಅಲ್ಲದೇ ಅಕ್ಕಿ ಗಿರಣಿಗಳನ್ನು ಮುಚ್ಚಿ ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಬೀದಿಪಾಲಾಗುವ ಪರಿಸ್ಥಿತಿ ಇದ್ದು ಇದರಿಂದ ರೈತ ಕೂಲಿಕಾರರು, ಕಾರ್ಮಿಕರು, ಐಕ್ಯ ಚಳುವಳಿ ನಡೆಸಬೇಕೆಂದು ಕರೆ ನೀಡಿದರು.

ತೋಟ ಕಾರ್ಮಿಕರ ಮುಷ್ಕರ

ಸೋಮವಾರಪೇಟೆ: ನೂರಾರು ತೋಟ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ತಮ್ಮ ಬಹುದಿನಗಳ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಜೂನ್ 15 ರಂದು ಸೋಮವಾರ ಪೇಟೆಯ ಎಸ್ಟೇಟ್ ಕಛೇರಿ ಮುಂದೆ ಒಂದು ದಿನದ ಮುಷ್ಕರ ನಡೆಸಿದರು.

ಕೃಷ್ಣಮೂರ್ತಿ ನೇತೃತ್ವದಲ್ಲಿ ಮುಷ್ಕರ ನಿರತರು 1996 ರಿಂದ ಬಾಕಿ ಇರುವ ತುಟ್ಟಿಭತ್ಯೆ ಒಂದೇ ಕಂತಿನಲ್ಲಿ ಕೊಡುವಂತೆ ಹಾಗೂ ಈಗ ಸಿಗಬೇಕಾದ ಸಂಬಳ 51 ರೂಗಳನ್ನು ಕೂಡಲೇ ಜಾರಿಗೆ ತರುವಂತೆ ಸರ್ಕಾರ ಮತ್ತು ಮಾಲಿಕ ವರ್ಗವನ್ನು ಒತ್ತಾಯಿಸಿದರು. ಮುತ್ತಣ್ಣನವರು ಮಾತನಾಡಿ ತೋಟ ಕಾರ್ಮಿಕರ ಸಮಸ್ಯೆಗಳನ್ನು ವಿವರಿಸಿದರು.

ಕಳೆದ ಸಂಚಿಕೆಯಲ್ಲಿ ಜೂನ್ 15-16 ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋದ ನಿರ್ಣಯಗಳ ಸುದ್ದಿಯನ್ನು ಓದಿರುವಿರಿ. ಸಭೆಯ ನಂತರ ಹೊರಡಿಸಿದ ಪೊಲಿಟ್‌ಬ್ಯೂರೋ ಹೇಳಿಕೆಯನ್ನು ಈ ಕೆಳಗೆ ಕೊಡಲಾಗಿದೆ.

ಸಿಪಿಐ[ಎಂ] ಪೊಲಿಟ್‌ಬ್ಯೂರೋ ಕರೆ

ಶಸ್ತ್ರಾಸ್ತ್ರ ಪೈಪೋಟಿ, ಬಜೆಟ್ ಪ್ರಸ್ತಾವಗಳ ವಿರುದ್ಧ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿ

ಗುಜರಾತದಲ್ಲಿ ಸುಂಟರಗಾಳಿ ಪರಿಹಾರ-ಪುನರ್ವಸತಿ ಕೆಲಸ ತೀವ್ರಗೊಳಿಸಬೇಕು.

ಗುಜರಾತಿನ ಕರಾವಳಿಯನ್ನು ಅಪ್ಪಳಿಸಿದ ಸುಂಟರಗಾಳಿ ಉಂಟುಮಾಡಿದ ಭಾರೀ ಜೀವ-ಆಸ್ತಿ ವಿನಾಶದ ಬಗ್ಗೆ ತನ್ನ ಆಳವಾದ ದುಃಖವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವ್ಯಕ್ತಪಡಿಸಿದೆ. ಕಾಂಡ್ಲಾ ಬಂದರು ಪಟ್ಟಣ ಅತ್ಯಂತ ಹೆಚ್ಚು ವಿನಾಶ ಕಂಡಿದೆ. ಈ ನಿರ್ಣಾಯಕ ದಿನಗಳಲ್ಲಿ ಬಿಜೆಪಿ ನೇತೃತ್ವದ ಸರಕಾರದ ರಾಜ್ಯ ಆಡಳಿತ ಈ ಅನಾಹುತವನ್ನು ಎದುರಿಸುವಲ್ಲಿ ಸಿದ್ಧವಾಗಿರದೆ ವಿಫಲವಾಗಿದೆ. ಕಾಂಡ್ಲಾ ಮತ್ತಿತರ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭಯವಿದೆ. ಚುಚ್ಚುಮದ್ದುಗಳು ಸಿಗುತ್ತಿಲ್ಲ. ಪರಿಹಾರ ಮತ್ತು ಪುನರ್ವಸತಿ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ತೀವ್ರಗೊಳಿಸ ಬೇಕಾಗಿದೆ.

ಪಕ್ಷದ 16ನೇ ಮಹಾಧಿವೇಶನ

ಪೊಲಿಟ್‌ಬ್ಯೂರೋ ಪಕ್ಷದ 16ನೇ ಮಹಾಧಿವೇಶನದಲ್ಲಿ ಮಂಡಿಸಬೇಕಾದ ಕರಡು ರಾಜಕೀಯ ನಿರ್ಣಯವನ್ನು ಅಂತಿಮಗೊಳಿಸಿ ಜುಲೈ 16 ರಿಂದ 18 ರವರೆಗೆ ದಿಲ್ಲಿಯಲ್ಲಿ ಸಭೆ ಸೇರಲಿರುವ ಕೇಂದ್ರ ಸಮಿತಿ ಇದನ್ನು ಚರ್ಚಿಸಿ ಅಂತಿಮಗೊಳಿಸಿದ ನಂತರ ಇದನ್ನು ಪಕ್ಷದ ಸದಸ್ಯರ ನಡುವೆ ಚರ್ಚೆಗೆ ಬಿಡುಗಡೆ ಗೊಳಿಸಲಾಗುವುದು. ಸಿಪಿಐ(ಎಂ) ನ ಸಂವಿಧಾನದ ಪ್ರಕಾರ ಈ ಕರಡನ್ನು ಮಹಾಧಿವೇಶನ ಚರ್ಚಿಸುವ ಮೊದಲು ಪಕ್ಷದೊಳಗೆ ಇದು ಚರ್ಚೆಗೊಳಪಡಬೇಕು. ಇದಕ್ಕಾಗಿ ಮಹಾಧಿವೇಶನ ಸೇರುವ ಕನಿಷ್ಟ ಎರಡು ತಿಂಗಳ ಮೊದಲು ಅದನ್ನು ಬಿಡುಗಡೆಗೊಳಿಸಬೇಕು. ಸಿಪಿಐ(ಎಂ) 16ನೇ ಮಹಾಧಿವೇಶನ ಕಲ್ಕತ್ತೆಯಲ್ಲಿ ಅಕ್ಟೋಬರ್ 5 ರಿಂದ 11 ರವರೆಗೆ ನಡೆಯಲಿದೆ.

ಬಿಹಾರ್ ಹತ್ಯೆಗಳು

ಪಕ್ಷದ ಬಿಹಾರ ರಾಜ್ಯ ಸಮಿತಿ ಸದಸ್ಯ ಹಾಗೂ ಶಾಸಕ ಕಾಂ. ಅಜಿತ್ ಸರ್ಕಾರ್ ಹತ್ಯೆಯನ್ನು ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿತು. ಭೂಮಾಲಕರು ಮತ್ತು ಅವರ ರಾಜಕೀಯ ಏಜೆಂಟರುಗಳ ಈ ಹೀನಕೃತ್ಯಕ್ಕೆ ಶಿಕ್ಷೆಯಾಗಲೇಬೇಕು. ಕಾಂ. ಅಜಿತ್ ಸರ್ಕಾರ್ ದಶಕಗಳಿಂದ ಪೂರ್ಣಿಯಾ ಜಿಲ್ಲೆಯಲ್ಲಿ ಭೂಮಿ ಹೋರಾಟಗಳ ಒಂದು ಪ್ರತೀಕವಾಗಿದ್ದರು. ಇತ್ತೀಚೆಗೆ ಸ್ವತಃ ಒಬ್ಬ ದೊಡ್ಡ ಭೂಮಾಲಕನೂ ಆದ ಬಿಜೆಪಿಯ ಹಾಲಿ ಸಂಸತ್ ಸದಸ್ಯ ಕಾನೂನು ಬಾಹಿರವಾಗಿ ಹಿಡಿದಿಟ್ಟುಕೊಂಡಿದ್ದ ಭೂಮಿಯ ಮೇಲೆ ಒಂದು ಬಲವಾದ ಭೂ ಹೋರಾಟ ಆರಂಭವಾಗಿತ್ತು. ಈ ಜಘನ್ಯ ಹತ್ಯೆಯ ಬಗ್ಗೆ ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸುತ್ತದೆ. ಪೂರ್ಣಿಯಾ ಜಿಲ್ಲೆಯಲ್ಲಿ ಅಜಿತ್ ಸರ್ಕಾರ್ ನೇತೃತ್ವದಲ್ಲಿ ನಡೆಯುತ್ತಿದ್ದ ಭೂ ಹೋರಾಟ ಹಾಗೂ ಕೂಲಿ ಹೋರಾಟ ಮುಂಬರುವ ದಿನ ಗಳಲ್ಲಿ ಬಿಹಾರ ದಾದ್ಯಂತ ಮುಂದು ವರಿಯುತ್ತದೆ ಹಾಗೂ ತೀವ್ರಗೊಳ್ಳುತ್ತದೆ ಎಂಬ ವಿಶ್ವಾಸ ಪೊಲಿಟ್‌ಬ್ಯೂರೋಗಿದೆ.

> ಪೂರ್ಣಿಯಾ ಜಿಲ್ಲೆಯಲ್ಲಿ ಅಜಿತ್ ಸರ್ಕಾರ್ ನೇತೃತ್ವದಲ್ಲಿ ನಡೆಯುತ್ತಿದ್ದ ಭೂ ಹೋರಾಟ ಹಾಗೂ ಕೂಲಿ ಹೋರಾಟ ಮುಂಬರುವ ದಿನಗಳಲ್ಲಿ ಬಿಹಾರದಾದ್ಯಂತ ಮುಂದುವರಿಯುತ್ತದೆ ಹಾಗೂ ತೀವ್ರಗೊಳ್ಳುತ್ತದೆ ಎಂಬ ವಿಶ್ವಾಸ ಪೊಲಿಟ್‌ಬ್ಯೂರೋಗಿದೆ.

ದೇವಸ್ಥಾನ ಕಟ್ಟುವ ಬಗ್ಗೆ ಬಿಜೆಪಿಯ ವಂಚಕ ನಿಲುವು

ವಿಶ್ವಹಿಂದೂ ಪರಿಷತ್ ಉತ್ತರ ಪ್ರದೇಶ(ಅಯೋಧ್ಯ) ಮತ್ತು ರಾಜಸ್ತಾನದ ವಿವಿಧ ಕೇಂದ್ರಗಳಲ್ಲಿ ನಡೆಸುತ್ತಿರುವ ದೇವಸ್ಥಾನ ನಿರ್ಮಾಣ ಕಾರ್ಯಗಳ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಬಲವಾದ ವಿರೋಧವನ್ನು ವ್ಯಕ್ತಪಡಿಸಿದೆ. ಈ ಎರಡು ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳ ಆಶ್ರಯದಲ್ಲಿ ದೇವಸ್ಥಾನದ ಸಿದ್ಧತಾ ಕೆಲಸ ನಡೆಯುತ್ತಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಬರುವುದರೊಂದಿಗೆ ಈ ಕೆಲಸ ತೀವ್ರಗೊಂಡಿದೆ. ಅಯೋಧ್ಯೆಗೆ ಭೇಟಿ ನೀಡಿದ ಎಡಪಕ್ಷಗಳ ಸಂಸದೀಯ ನಿಯೋಗ ಬಾಬ್ರಿ ಮಸೀದಿಯಿದ್ದ ಜಾಗ ದಿಂದ ಬಹಳ ದೂರವೇನೂ ಇಲ್ಲದ ಜಾಗದಲ್ಲಿ ದೇವಸ್ಥಾನ ಕಟ್ಟುವ ಕೆಲಸ ನಡೆಯುತ್ತಿದೆ ಎಂಬುದನ್ನು ಖಚಿತಪಡಿಸಿದೆ.

ಸರಕಾರ ನ್ಯಾಯಾಲಯದ ಆಜ್ಞೆಯನ್ನು ಜಾರಿಗೊಳಿಸಲು ಬದ್ಧವಾಗಿದೆ ಎಂದು ಹೇಳಿ ಈ ಬಗ್ಗೆ ಸಂದೇಹಗಳನ್ನು ದೂರ ಮಾಡುವ ಪ್ರಧಾನ ಮಂತ್ರಿಗಳ ಪ್ರಯತ್ನ ವಿಶ್ವಾಸಾರ್ಹವೆನಿಸುವುದಿಲ್ಲ. ಬಿಜೆಪಿ ಮುಖಂಡತ್ವ ಈ ಹಿಂದೆ 1992 ರಲ್ಲಿ ಬಾಬ್ರಿ ಮಸೀದಿಯನ್ನು ರಕ್ಷಿಸುವ ಭರವಸೆಯನ್ನು ನೀಡಿ ನಡೆದುಕೊಂಡ ರೀತಿಯೇ ಇದಕ್ಕೆ ಕಾರಣ. ಬಿಜೆಪಿ ಮುಖಂಡತ್ವ ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟುವುದು ತನ್ನ ಗುರಿಯೆಂದು ಸ್ಪಷ್ಟಪಡಿಸಿದೆ. ನ್ಯಾಯಾಲಯದ ತೀರ್ಪು ವಿವಾದಿತ ಸ್ಥಳದಲ್ಲಿ ದೇವಸ್ಥಾನ ಕಟ್ಟುವುದಕ್ಕೆ ವ್ಯತಿರಿಕ್ತವಾಗಿದ್ದರೆ ದೇವಸ್ಥಾನ ಕಟ್ಟಲು ಅನುಕೂಲವಾಗುವಂತೆ ಒಂದು ಶಾಸನವನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಗುವುದು ಎಂದು ಬಿಜೆಪಿ ಉಪಾಧ್ಯಕ್ಷ ಕೆ.ಎಲ್.ಶರ್ಮ ಹೇಳಿದ್ದಾರೆ. ಇದು ಬಿಜೆಪಿ-ಆರ್.ಎಸ್.ಎಸ್. ಕೂಟ ಮತ್ತೊಮ್ಮೆ ಕಾನೂನಿನ ಆಳ್ವಿಕೆಯಲ್ಲಿ ಬುಡ ಮೇಲು ಮಾಡಲು ಪಿತೂರಿ ನಡೆಸಿದೆ ಎಂಬುದರ ಒಂದು ಬಹಿರಂಗ ಘೋಷಣೆ. ಕೇಂದ್ರ ಸರಕಾರದಲ್ಲಿ ಬಿಜೆಪಿಯಿರುವಾಗ ಇದೊಂದು ವಾಸ್ತವ ಬೆದರಿಕೆ.

> ಅಂತಿಮ ತೀರ್ಪು ಬರುವವರೆಗೆ ಯಥಾಸ್ಥಿತಿಯನ್ನು ಕಾಪಾಡಬೇಕು ಎಂಬ ಸುಪ್ರೀಂಕೋರ್ಟ್ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದು ಕೇಂದ್ರ ಸರ್ಕಾರಕ್ಕೆ ಇರುವ ಏಕೈಕ ವಿಧಾನವೆಂದರೆ ಉತ್ತರ ಪ್ರದೇಶ, ರಾಜಸ್ತಾನಗಳಲ್ಲಿ ನಡೆದಿರುವ ಕೆಲಸಗಳು ತಕ್ಷಣ ನಿಲ್ಲಿಸುವುದು.

ಉತ್ತರ ಪ್ರದೇಶ ಮತ್ತು ರಾಜಸ್ತಾನ ಎರಡೂಕಡೆ ನಡೆದಿರುವ ದೇವಸ್ಥಾನದ ಕೆಲಸಗಳನ್ನು ತಕ್ಷಣ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ. ಅಂತಿಮ ತೀರ್ಪು ಬರುವವರೆಗೆ ಯಥಾಸ್ಥಿತಿಯನ್ನು ಕಾಪಾಡಬೇಕು ಎಂಬ ಸುಪ್ರೀಂಕೋರ್ಟ್ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಸರ್ಕಾರಕ್ಕೆ ಇರುವ ಏಕೈಕ ವಿಧಾನವೆಂದರೆ ಇದೇ.

ಬಿಜೆಪಿ-ಆರ್.ಎಸ್.ಎಸ್.-ವಿ.ಹೆಚ್.ಪಿ. ಕೂಟದ ಈ ಯೋಜನೆಗಳ ವಿರುದ್ಧ ಜನರನ್ನು ಜಾಗೃತಗೊಳಿಸುವ ಒಂದು ಪ್ರಚಾರಾಂದೋಲನವನ್ನು ಸಿಪಿಐ(ಎಂ)ನ ಎಲ್ಲಾ ಘಟಕಗಳು ಇತರ ಜಾತ್ಯಾತೀತ ಶಕ್ತಿಗಳೊಂದಿಗೆ ಸೇರಿಕೊಂಡು ನಡೆಸಬೇಕು ಎಂದು ಪೊಲಿಟ್‌ಬ್ಯೂರೋ ಕರೆ ನೀಡುತ್ತದೆ.

ಪರಮಾಣು ಶಸ್ತ್ರೀಕರಣ ನಿಲ್ಲಿಸಿ

ವಾಜಪೇಯಿ ಸರಕಾರ ಪರಮಾಣು ಶಸ್ತ್ರಗಳನ್ನು ನೆಲೆಗೊಳಿಸಲು ಪ್ರಯತ್ನಿಸಬಾರದು ಎಂಬ ಆಗ್ರಹವನ್ನು ಸಿಪಿಐ (ಎಂ) ಪೊಲಿಟ್ ಬ್ಯೂರೋ ಪುನರುಚ್ಚರಿಸುತ್ತದೆ. ದೀರ್ಘ ಕಾಲದ ಪರಮಾಣು ನೀತಿಯನ್ನು ಬದಲಿಸಿರುವುದು ದೇಶದ ಪ್ರಧಾನ ಹಿತಾಸಕ್ತಿಗಳಿಗೆ ಕೆಡುಕು ತಂದಿದೆ. ಬಿಜೆಪಿ ನೇತೃತ್ವದ ಸರಕಾರದ ವಿಭಿನ್ನ ಮಂತ್ರಿಗಳು ತಮ್ಮ ರಾಷ್ಟ್ರಾಂಧ ಹೇಳಿಕೆಗಳ ಮೂಲಕ ತಳೆದ ಸಂಕುಚಿತ ಹಾಗೂ ಆಕ್ರಾಮಕ ನಿಲುವುಗಳು, ಎಚ್ಚರಗೇಡಿತನ ನಮ್ಮ ನೆರೆ ದೇಶ ಗಳೊಂದಿಗೆ ಸಂಬಂಧಗಳ ಸುಧಾರಣೆಯನ್ನು ಅಸ್ತವ್ಯಸ್ತಗೊಳಿಸಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಪರಮಾಣು ಪ್ರಶ್ನೆಗೆ ಆರ್.ಎಸ್.ಎಸ್. ಮತ್ತು ಅದರ ಅಂಗ ಸಂಘಟನೆಗಳಾದ ವಿ.ಹೆಚ್.ಪಿ. ಗಳಂತವು ನೀಡಿರುವ ರಾಷ್ಟ್ರಾಂಧ ತಿರುವನ್ನು ದೃಢವಾಗಿ ವಿರೋಧಿಸಿವೆ. ಕೇಂದ್ರ ಗೃಹ ಮಂತ್ರಿಗಳು ಹಾಗೂ ಇತರರು ಕಾಶ್ಮೀರ ಸಮಸ್ಯೆಯ ಪರಿಹಾರ ಹಾಗೂ ಭಾರತ ಪರಮಾಣು ಶಸ್ತ್ರಾಸ್ತ್ರ ಸ್ಥಾನಹೊಂದುವುದನ್ನು ತಳಕು ಹಾಕುವ ಮೂಲಕ ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯಗೊಳಿಸುವ, ಪಾಶ್ಚಿಮಾತ್ಯ ಶಕ್ತಿಗಳ ಹಾಗೂ ಪಾಕಿಸ್ತಾನದ ಬಲೆಗೆ ಬಿದ್ದಿದ್ದಾರೆ. ಇದರಿಂದ ಶಿಮ್ಲಾ ಒಪ್ಪಂದದ ಆಧಾರದಲ್ಲಿ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯ ಎಂಬುದನ್ನು ಅಂತರ್ರಾಷ್ಟ್ರೀಯ ಸಮುದಾಯ ಸ್ವೀಕರಿಸುವಂತೆ ಮಾಡಿದ್ದ ಸುಮಾರು ಮೂರು ದಶಕಗಳ ಭಾರತದ ರಾಜತಾಂತ್ರಿಕ ಪ್ರಯತ್ನಗಳಿಗೆ ತೀವ್ರ ಧಕ್ಕೆ ಬಂದಿದೆ. ಈ ಸರಕಾರ ಕಾಶ್ಮೀರ ಸಮಸ್ಯೆಯನ್ನು ಅಂತರ್ರಾಷ್ಟ್ರೀಯಗೊಳಿಸುವ ಸಾಮ್ರಾಜ್ಯಶಾಹಿ ಪ್ರಯತ್ನಗಳಿಗೆ ಬಲಿಯಾಗಲು ಬಿಡಬಾರದು.

ಭಾರತದ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಅದರ ಕೆಲವು ಮಿತ್ರದೇಶಗಳು ಹೇರಿರುವ ನಿರ್ಬಂಧಗಳನ್ನು ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸುತ್ತದೆ. ಪರಮಾಣು ಶಸ್ತ್ರಸಜ್ಜಿತ ದೇಶಗಳಾಗಲೀ, ಜಿ-8 ದೇಶಗಳಿಗಾಗಲೀ ಭಾರತದ ಮೇಲೆ ನಿರ್ಬಂಧ ಹೇರಲು ಏನೇನೂ ಹಕ್ಕಿಲ್ಲ. ಏಕೆಂದರೆ ಈ ದೇಶಗಳೇ ಸ್ವತಃ ಪರಮಾಣು ಶಸ್ತ್ರಾಸ್ತ್ರಗಳ ಮೇಲೆ ಏಕಸ್ವಾಮ್ಯ ಹೊಂದಿ ಎನ್.ಪಿ.ಟಿ., ಸಿಟಿಬಿಟಿಗಳಂತಹ ಪಕ್ಷಪಾತಪೂರ್ಣ ಸಂಧಿಗಳನ್ನು ಹೇರುತ್ತಿದ್ದಾರೆ.

ಅಲಿಪ್ತತೆ ಮತ್ತು ಶಾಂತಿಯ ನಮ್ಮ ದೀರ್ಘಕಾಲದ ವಿದೇಶಾಂಗ ಧೋರಣೆಗೆ ಅನುಗುಣವಾಗಿರುವ ಒಂದು ಪರಮಾಣು ನೀತಿಯನ್ನು ತಳೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಶಾಂತಿಪ್ರಿಯ ಶಕ್ತಿಗಳಿಗೆ ಕರೆ ನೀಡುತ್ತದೆ. ಪೋಖ್ರಾನ್ ಪರೀಕ್ಷಣೆಗಳ ನಂತರ ಭಾರತ

i. ಪರಮಾಣು ಶಸ್ತ್ರಾಸ್ತ್ರಗಳನ್ನು ನೆಲೆಗೊಳಿಸಲು ಹೋಗಬಾರದು.

ii. ಸಿಟಿಬಿಟಿ, ಎನ್.ಪಿ.ಟಿ. ಗಳಂತಹ ಪಕ್ಷಪಾತಪೂರ್ಣ ಸಂಧಿಗಳಿಗೆ ಸಹಿ ಹಾಕಲು ನಿರಾಕರಿಸಬೇಕು

iii ಪರಮಾಣು ಶಸ್ತ್ರಾಸ್ತ್ರಗಳನ್ನು ಮೊದಲು ಬಳಸುವುದಿಲ್ಲ ಎಂದು ಘೋಷಿಸಬೇಕು.

iv ಪರಮಾಣು ಶಸ್ತ್ರಾಸ್ತ್ರಗಳ ಪ್ರಸರಣವನ್ನು ತಡೆಯಲು ಹಾಗೂ ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣ ತರವು ನಿಷ್ಪಕ್ಷಪಾತ ಒಪ್ಪಂದಗಳಿಗಾಗಿ ಪ್ರಚಾರಾಂದೋಲನ ನಡೆಸಬೇಕು.

ಕೆಲವು ಪ್ರಸಿದ್ಧ ವ್ಯಕ್ತಿಗಳು ಹಾಗೂ ವಿವಿಧ ಸಂಘಟನೆಗಳು ವಾಜಪೇಯಿ ಸರಕಾರ ಅನುಸರಿಸುತ್ತಿರುವ ಪರಮಾಣು ನೀತಿಯನ್ನು ವಿರೋಧಿಸುವ ಮುತುವರ್ಜಿ ವಹಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸ್ವಾಗತಿಸುತ್ತದೆ. ಪರಮಾಣು ಶಸ್ತ್ರೀಕರಣದ ವಿರುದ್ಧ ಒಂದು ವಿಶಾಲ ತಳಹದಿಯ ಆಂದೋಲನ ರೂಪಿಸಲು ಶ್ರಮಿಸಬೇಕು, ಹಿರೋ ಶಿಮಾ ದಿನವಾದ ಆಗಸ್ಟ್ 6ನ್ನು ಪರಮಾಣು ಶಸ್ತ್ರಗಳನ್ನು ವಿರೋಧಿಸುವ, ಸಾರ್ವತ್ರಿಕ ನಿಶ್ಶಸ್ತ್ರೀಕರಣದ ಬೇಡಿಕೆಯ ದಿನವಾಗಿ ಆಚರಿಸಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ ಪೊಲಿಟ್ ಬ್ಯೂರೋ ಕರೆ ನೀಡುತ್ತದೆ.

> ಕೆಲವು ಪ್ರಸಿದ್ಧ ವ್ಯಕ್ತಿಗಳು ಹಾಗೂ ವಿವಿಧ ಸಂಘಟನೆಗಳು ವಾಜಪೇಯಿ ಸರಕಾರ ಅನುಸರಿಸುತ್ತಿರುವ ಪರಮಾಣು ನೀತಿಯನ್ನು ವಿರೋಧಿಸುವ ಮುತುವರ್ಜಿ ವಹಿಸಿರುವುದನ್ನು ಸಿಪಿಐ(ಎಂ)ಪೊಲಿಟ್‌ಬ್ಯೂರೋ ಸ್ವಾಗತಿಸುತ್ತದೆ. ಪರಮಾಣು ಶಸ್ತ್ರೀಕರಣದ ವಿರುದ್ಧ ಒಂದು ವಿಶಾಲ ತಳಹದಿಯ ಆಂದೋಲನ ರೂಪಿಸಲು ಶ್ರಮಿಸಬೇಕಾಗಿದೆ.

ಬಿಜೆಪಿ ಸರಕಾರದ ಸರ್ವಾಧಿಕಾರಿ ಪ್ರವೃತ್ತಿ

ರಾಜ್ಯದಲ್ಲಿ ಕಾನೂನು- ವ್ಯವಸ್ಥೆಯ ಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ತಂಡಗಳನ್ನು ಕಳಿಸುವ ಕೇಂದ್ರಗೃಹ ಮಂತ್ರಾಲಯದ ನಿರ್ಣಯ ಒಕ್ಕೂಟವಾದದ ಸ್ಫೂರ್ತಿಯನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತದೆ. ಇದು ರಾಜ್ಯ ಸರಕಾರಗಳ ಹಕ್ಕುಗಳಲ್ಲಿ ಮಾಡಿರುವ ಹಸ್ತಕ್ಷೇಪ. ನಮ್ಮ ಸಂವಿಧಾನದ ಪ್ರಕಾರ ಕಾನೂನು-ವ್ಯವಸ್ಥೆ ರಾಜ್ಯ ಪಟ್ಟಿಯಲ್ಲಿರುವ ವಿಷಯ. ಬಿಜೆಪಿ ಸಂವಿಧಾನದ 356ನೇ ಕಲಮನ್ನು ರಾಜಕೀಯವಾಗಿ ಬಳಸಲು ಕಾತುರವಾಗಿದೆ ಎಂಬುದು ಸ್ಪಷ್ಟ. ತನ್ನ ರಾಜಕೀಯ ಹಿತಾಸಕ್ತಿಗಳನ್ನು ಬೆಳೆಸಲು ಈ ಕಲಮನ್ನು ಅದು ಬಳಸಬಯಸುತ್ತದೆ.

ಪ್ರಧಾನಮಂತ್ರಿಗಳು ಪಶ್ಚಿಮ ಬಂಗಾಳದ ಸ್ಥಿತಿಯನ್ನು ಪರಿಶೀಲಿಸಲು ಒಂದು ಬಿಜೆಪಿ ಪಕ್ಷದ ತಂಡವನ್ನು ಕಳಿಸುವ ನಿರ್ಧಾರವನ್ನು ಪ್ರಕಟಿಸಿರುವುದು ಒಂದು ಅತ್ಯಂತ ಹಗರಣಕಾರಿ ಸಂಗತಿ. ಇದು ಪ್ರಧಾನಮಂತ್ರಿಗಳ ಅಧಿಕಾರದ ದೊಡ್ಡ ದುರುಪಯೋಗ. ಭಾರತದ ಜನತೆ ಸರ್ವಾಧಿಕಾರಿಶಾಹಿ ಆಳ್ವಿಕೆಯನ್ನು ಹೇರುವ ಇಂತಹ ಪ್ರಯತ್ನಗಳನ್ನು ಸಹಿಸುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಿಜೆಪಿ ಸರಕಾರವನ್ನು ಎಚ್ಚರಿಸುತ್ತದೆ!

ಬಜೆಟ್ ಪ್ರಸ್ತಾವಗಳು

ಸಾರ್ವಜನಿಕ ವಲಯದ ಖಾಸಗೀಕರಣವನ್ನು ತೀವ್ರಗೊಳಿಸಿರುವ, ಈ ಮೂಲಕ ದುಡಿಯುವ ಹಾಗೂ ಅವರ ಉದ್ಯೋಗಗಳ ಮೇಲೆ ಧಾಳಿ ನಡೆಸಿರುವ ಬಜೆಟ್ ಪ್ರಸ್ತಾವಗಳನ್ನು ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಪೆಟ್ರೋಲಿಯಂ ಬೆಲೆಯೇರಿಕೆ, ಬಳಕೆದಾರರ ದೈನಂದಿನ ಬಳಕೆಯ ಹಲವಾರು ಸರಕುಗಳ ಮೇಲಿನ ಅಬಕಾರಿ ಸುಂಕವನ್ನು ತೀವ್ರವಾಗಿ ಹೆಚ್ಚಿಸಿರುವುದನ್ನು ಕೂಡಾ ಅದು ವಿರೋಧಿಸಿದೆ. ಇದು ಹಣದುಬ್ಬರಕ್ಕೆ ಹಾಗೂ ಸರ್ವತೋಮುಖ ಬೆಲೆಯೇರಿಕೆಗೆ ತುಪ್ಪ ಸುರಿದಿದೆ. ಒಂದೆಡೆ ಪರಮಾಣು ಪರೀಕ್ಷಣೆಗಳ ನಂತರ ಹೇರಿದ ನಿರ್ಬಂಧಗಳಿಂದ ಹೆಚ್ಚುವ ಆರ್ಥಿಕ ಸಂಕಷ್ಟಗಳನ್ನು ಎದುರಿಸುವಲ್ಲಿ ಇದು ವಿಫಲವಾಗಿದ್ದರೆ, ಮತ್ತೊಂದೆಡೆ ಸಿರಿವಂತರಿಗೆ ಇನ್ನಷ್ಟು ರಿಯಾಯ್ತಿಗಳನ್ನು ಒದಗಿಸಿದೆ. ರೂಪಾಯಿಯ ಮೌಲ್ಯದ ಇಳಿತ ಒಂದು ಅಪಾಯಕಾರಿ ಪ್ರಭಾವ ಬೀರಲಿದೆ.

ಹಣಕಾಸು ಮಂತ್ರಿಗಳು ಮತ್ತು ಸರಕಾರ ತಮ್ಮ ಬಜೆಟ್ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳುತ್ತಿರುವ ರೀತಿ ಆರ್ಥಿಕ ವಿಷಯಗಳಲ್ಲಿ, ನೀತಿ ನಿರೂಪಣೆಯೆಂಬುದನ್ನು ಒಂದು ಅಪಹಾಸ್ಯದ ಮಟ್ಟಕ್ಕಿಳಿಸಿದೆ. ಹೇಗಾದರೂ ಬದುಕುಳಿಯುವುದೇ ಸರಕಾರದ ಮುಖ್ಯ ಗುರಿಯಾಗಿದ್ದು, ಇದರಿಂದಾಗಿ ದೇಶ ಮತ್ತು ಆರ್ಥಿಕ ಸಾವಿರಾರು ಕೋಟಿ ರೂಪಾಯಿ ಗಳಷ್ಟು ನಷ್ಟ ಅನುಭವಿಸುವಂತಾಗಿದೆ. ಪೆಟ್ರೋಲ್ ಬೆಲೆ ಗಳನ್ನು ಕುರಿತಂತೆ ಸರಕಾರದ ವರ್ತನೆ ಅದರ ಸಂಪೂರ್ಣ ಅಸಮರ್ಥತೆಯ ಉದಾಹರಣೆ. ದುಡಿಯುವ ಜನ ಈಗಾಗಲೇ ಪ್ರಕಟಿಸಿ ರುವ ಭಾರೀ ಹೊರೆಗಳೊಂದಿಗೆ ಈ ಅಸಮರ್ಥತೆಗೂ ಬೆಲೆ ತೆರಬೇಕಾಗಿದೆ.

> ದುಡಿಯುವ ಜನ ಈಗಾಗಲೇ ಪ್ರಕಟಿಸಿರುವ ಭಾರೀ ಹೊರೆಗಳೊಂದಿಗೆ ಈ ಸರಕಾರ ಅಸಮರ್ಥತೆಗೂ ಬೆಲೆ ತೆರಬೇಕಾಗಿದೆ.

ಹಣಕಾಸು ಮಸೂದೆ ಜುಲೈನಲ್ಲಿ ಸಂಸತ್ತಿನಲ್ಲಿ ಬಂದಾಗ ಸಿಪಿಐ(ಎಂ) ಅದನ್ನು ವಿರೋಧಿಸುವುದು. ಜುಲೈ 3 ರಂದು ಜಂಟಿಯಾಗಿ ಒಂದು ಕೈಗಾರಿಕಾ ಮುಷ್ಕರ ನಡೆಸಬೇಕೆಂಬ ಪಶ್ಚಿಮ ಬಂಗಾಳದ ಕಾರ್ಮಿಕ ಸಂಘಗಳ ನಿರ್ಧಾರವನ್ನು ಪೊಲಿಟ್‌ಬ್ಯೂರೋ ಸ್ವಾಗತಿಸುತ್ತದೆ. ಬಜೆಟ್ ಪ್ರಸ್ತಾವಗಳ ವಿರುದ್ಧ ಆಂದೋಲನವನ್ನು ತೀವ್ರಗೊಳಿಸಬೇಕು ಎಂದು ಪೊಲಿಟ್‌ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಹಾಗೂ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡುತ್ತದೆ.

ಹಿಂದಿನ ಒಂದು ಸಂಚಿಕೆಯಲ್ಲಿ ಗ್ರೀಸಿನ ಅಥೆನ್ಸಿನಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದ ಸುದ್ದಿಯನ್ನು ಓದಿರುವಿರಿ. ಸಿಪಿಐ(ಎಂ) ನ ಪರವಾಗಿ ಅದರಲ್ಲಿ ಭಾಗವಹಿಸಿದ್ದ ಸೀತಾರಾಂ ಯೆಚೂರಿಯವರು ಈ ಸಮ್ಮೇಳನದ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.



ಎಲ್ಲೆಡೆ ಮತ್ತೆ ಮುನ್ನುಗ್ಗುತ್ತಿವೆ ಕಮ್ಯೂನಿಸ್ಟ್ ಪಕ್ಷಗಳು

ಮೇ ತಿಂಗಳ ಅಂತ್ಯದಲ್ಲಿ ಗ್ರೀಸ್ ಕಮ್ಯುನಿಸ್ಟ್ ಪಕ್ಷ ಒಂದು ಅಂತರ ರ್‍ರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಿತ್ತು. ಅದರ ವಿಷಯ - "ಪ್ರಸ್ತುತ ಪರಿಸ್ಥಿತಿಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು". ಇದನ್ನು ಗ್ರೀಕ್ ಪಾರ್ಟಿಯ ಸ್ಥಾಪನೆಯ 80ನೇ ವಾರ್ಷಿಕೋತ್ಸವ ಹಾಗೂ ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಕಟಣೆಯ 150ನೇ ವಾರ್ಷಿಕೋತ್ಸವದ ಸಂದರ್ಭದ ನೆನಪಿನಲ್ಲಿ ಏರ್ಪಡಿಸಲಾಗಿತ್ತು.

ಸಿಪಿಐ(ಎಂ) ಫೆಬ್ರವರಿ 1998 ರಲ್ಲಿ ನಡೆಯಲಿದ್ದ ತನ್ನ 16ನೇ ಮಹಾಧಿವೇಶನದ ಜತೆಗೆ ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಕಟಣೆಯ 150ನೇ ವಾರ್ಷಿಕೋತ್ಸವದ ಸ್ಮರಣಾರ್ಥ ಒಂದು ಅಂತರಾಷ್ಟ್ರೀಯ ಸಮ್ಮೇಳನವನ್ನು ನಡೆಸಲು ನಿರ್ಧರಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಮಧ್ಯಂತರ ಸಾರ್ವತ್ರಿಕ ಚುನಾವಣೆಗಳಿಂದಾಗಿ ಅದನ್ನು ಮುಂದೂಡಬೇಕಾಯಿತು.

ಈ ವರ್ಷ ಹಲವು ಕಮ್ಯುನಿಸ್ಟ್ ಪಕ್ಷಗಳು ಈ ವಾರ್ಷಿಕೋತ್ಸವದ ನೆನಪಿನಲ್ಲಿ ಅಂತರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸಿವೆ. ಕ್ಯೂಬಾ ಪಕ್ಷ ಅಕ್ಟೋಬರ್ 1997 ರಲ್ಲಿ ಒಂದು ದೊಡ್ಡ ಅಂತರಾಷ್ಟ್ರೀಯ ಸಮ್ಮೇಳನ ನಡೆಸಿತು. 'ಪ್ರಸ್ತುತ ಪರಿಸ್ಥಿತಿಗಳಲ್ಲಿ ಸಮಾಜವಾದದ ಹೋರಾಟ' ಇದರ ಚರ್ಚಾ ವಿಷಯವಾಗಿತ್ತು. ಯುರೋಪಿನಲ್ಲಿ ಹಲವು ಆಚರಣೆಗಳು ನಡೆಯುತ್ತಿವೆ. ಇತ್ತೀಚೆಗೆ ಫ್ರೆಂಚ್ ಕಾರ್ಮಿಕ ಸಂಘಟನೆಗಳು ಇತರ ಪ್ರಗತಿಪರ ಸಂಘಟನೆಗಳ ಜತೆಗೂಡಿ ಒಂದು ಅಂತರಾಷ್ಟ್ರೀಯ ಸಭೆ ನಡೆಸಿದವು.

ಮಾಜಿ ಸೋವಿಯತ್ ಗಣತಂತ್ರಗಳಲ್ಲಿ

ಅಥೆನ್ಸಿನಲ್ಲಿ ನಡೆದ ಅಂತರಾಷ್ಟ್ರೀಯ ಸಭೆಯಲ್ಲಿ 50 ದೇಶಗಳಿಂದ 57 ಕಮ್ಯುನಿಸ್ಟ್ ಪಕ್ಷಗಳು ಮತ್ತು ಕಾರ್ಮಿಕ ಪಕ್ಷಗಳು ಭಾಗವಹಿಸಿದ್ದವು. ಪ್ರಸ್ತುತ ಪರಿಸ್ಥಿತಿಗಳಲ್ಲಿ ಇಂತಹ ಸಭೆ ನಮ್ಮಲ್ಲಿ ಹಲವರಿಗೆ ಇತರ ದೇಶಗಳಲ್ಲಿ ಅಲ್ಲಿಯ ಕಮ್ಯುನಿಸ್ಟ್ ಪಕ್ಷಗಳ ಅನುಭವದಿಂದ ಕಲಿಯಲು ಅವಕಾಶ ಕಲ್ಪಿಸಿ ಕೊಡುತ್ತದೆ. ಈ ಸಭೆಯಲ್ಲಿ ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಮಾಜಿ ಸೋವಿಯತ್ ಗಣತಂತ್ರಗಳ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳು ಹಾಜರಿದ್ದವು. ಈ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯ ಪ್ರಕ್ರಿಯೆಯಲ್ಲಿ ಜನಗಳು ಅನುಭವಿಸಬೇಕಾಗಿ ಬಂದಿರುವ ಶೋಚನೀಯ ಪರಿಸ್ಥಿತಿಗಳನ್ನು ಅವರು ವರ್ಣಿಸಿದರು. ಬಂಡವಾಳದ ಆಳ್ವಿಕೆ ಹಗೆ ಸಾಧಿಸುವ ವೈಖರಿಯಲ್ಲಿ ಸಮಾಜವಾದಿ ಸಾಧನೆಗಳನ್ನು ಕಳಚಿ ಹಾಕುತ್ತಿದೆ.

ತಾವು ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಸರಿಯಾಗಿ ಅನುಸರಿಸದ್ದರಿಂದ ಶಿಕ್ಷೆ ಅನುಭವಿಸಬೇಕಾಗಿ ಬಂದಿದೆ ಎಂದು ರಶ್ಯನ್ ಒಕ್ಕೂಟದ ಕಮ್ಯುನಿಸ್ಟರು ಒಪ್ಪಿಕೊಂಡರು. ಕ್ರಾಂತಿಕಾರಿಗಳು ಮಾತ್ರವೇ ಕ್ರಾಂತಿಯನ್ನು ಹೂಳಲು ಸಾಧ್ಯ ಎಂಬ ಎಂಗೆಲ್ಸ್‌ರ ಮಾತನ್ನು ಅವರು ನೆನಪಿಸಿಕೊಂಡರು.

ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಗೋರ್ಬಚೆವ್ ಅಡಿಯಲ್ಲಿ ಪುಟ್ಟ ಬಂಡವಾಳಶಾಹಿಗಳ ಕೈಗೆ ಹೋಯಿತು ಎಂಬುದು ಅವರ ವಿಶ್ಲೇಷಣೆಯಿಂದ ಕಂಡು ಬರುತ್ತದೆ. ಹಿಂದಿನ

> ಈ ಸಭೆಯಲ್ಲಿ ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಮಾಜಿ ಸೋವಿಯತ್ ಗಣತಂತ್ರಗಳ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳು ಹಾಜರಿದ್ದವು. ಈ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯ ಪ್ರಕ್ರಿಯೆಯಲ್ಲಿ ಜನಗಳು ಅನುಭವಿಸಬೇಕಾಗಿ ಬಂದಿರುವ ಶೋಚನೀಯ ಪರಿಸ್ಥಿತಿಗಳನ್ನು ಅವರು ವರ್ಣಿಸಿದರು.

ಸೋವಿಯತ್ ಒಕ್ಕೂಟದಲ್ಲಿ ಈಗ 21 ಕಮ್ಯುನಿಸ್ಟ್ ಪಕ್ಷಗಳು, ಆಂದೋಲನಗಳು ಇವೆ ಎಂದು ಅವರು ತಿಳಿಸಿದರು. ಪೆರೆಸ್ಟ್ರೋಯಿಕಾರ, ಖಾಸಗೀಕರಣ ಮತ್ತು ಬಂಡವಾಳಶಾಹಿ ವಿಧಾನಗಳ ಹತ್ತು ವರ್ಷಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬಂಡವಾಳಶಾಹಿಯ ಮರು ಸ್ಥಾಪನೆಯಾಗಿದೆ. ಇದರಿಂದ ಜನಗಳ ಜೀವನಪರಿಸ್ಥಿತಿ ಎಂತಹ ಮಟ್ಟಕ್ಕಿಳಿಯುತ್ತಿದೆಯೆಂದರೆ ಜನಸಂಖ್ಯೆಯೇ ತೀವ್ರವಾಗಿ ಇಳಿಯುತ್ತಿದೆ. ರಶ್ಯನ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ದೇಶಪ್ರೇಮಿ ಮತ್ತು ಪ್ರಜಾಪ್ರಭುತ್ವವಾದಿ ವ್ಯಕ್ತಿಗಳ ಒಂದು ಜನಪ್ರಿಯ ರಂಗ ಏರ್ಪಟ್ಟಿದೆ. ಇದರಲ್ಲಿ 9 ರಾಷ್ಟ್ರೀಯ ಪಕ್ಷಗಳು, 16 ಪ್ರಾದೇಶಿಕ ಪಕ್ಷಗಳಿವೆ. ತಮ್ಮ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಅವರು ಹೇಳಿಕೊಂಡರು. ಅಧ್ಯಕ್ಷ ಬೋರಿಸ್ ಯೆಲ್ಸಿನ್ ಮತ್ತು ಕಮ್ಯುನಿಸ್ಟ್ ಪ್ರಾಬಲ್ಯವಿರುವ ಸಂಸತ್ತಿನ ನಡುವಿನ ತಿಕ್ಕಾಟ ಚರಮಬಿಂದು ತಲುಪುತ್ತಿದೆ. ರಶ್ಯನ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ(ಸಿಪಿಆರ್‌ಎಫ್) ಇತ್ತೀಚೆಗೆ ಒಂದು ತುರ್ತು ಮಹಾಧಿವೇಶನ ನಡೆಸಿ

> ಪೂರ್ವ ಯುರೋಪಿನ ಮಾಜಿ ಸಮಾಜವಾದಿ ದೇಶಗಳ ಪಕ್ಷಗಳ ವರದಿಗಳಿಂದಲೂ ಕಂಡು ಬರುವ ಸಂಗತಿಯೆಂದರೆ ನಿರ್ದಯ ಬಂಡವಾಳಶಾಹಿ ಮರುಸ್ಥಾಪನೆಯ ನಗ್ನ ದಮನ ಮಿಲಿಯ ಗಟ್ಟಲೆ ಜನಗಳನ್ನು ಅನಾಥಗೊಳಿಸಿದೆ.

ಅಧ್ಯಕ್ಷರು ಜನಗಳ ಆದೇಶವನ್ನು, ತೀರ್ಪನ್ನು ನಿರ್ಲಕ್ಷಿಸುವುದನ್ನು ನಿಷೇಧಿಸುವ ವಿಶೇಷಾಧಿಕಾರ ಪ್ರಯೋಗಿಸದಂತೆ ತಡೆಯಲು ಯಾವ ಸಂವಿಧಾನ ಬದಲಾವಣೆಗಳನ್ನು ತರಬೇಕು ಎಂಬುದನ್ನು ಚರ್ಚಿಸಿತು.

ಜಾರ್ಜಿಯಾದ ಕಮ್ಯುನಿಸ್ಟರು ಸಾಮ್ರಾಜ್ಯಶಾಹಿಗಳ ಏಜೆಂಟ್ ಶೆವರ್‌ನಾಡ್ಜೆ ಸೋವಿಯತ್ ಒಕ್ಕೂಟಕ್ಕೆ ವಿಶ್ವಾಸಘಾತ ಮಾಡಿದ ನಂತರ ಕಮ್ಯುನಿಸ್ಟರು ಬಹಳ ಕಷ್ಟ ಅನುಭವಿಸಬೇಕಾಗಿ ಬಂತು ಎಂದರು. ತಮ್ಮ ಹೋರಾಟಗಳ ಮೂಲಕ ಅವರೀಗ ಒಂದು ಕಾನೂನುಬದ್ಧ ಪಕ್ಷವಾಗಿದ್ದಾರೆ. 60 ಸಾವಿರಕ್ಕೂ ಹೆಚ್ಚು ಸದಸ್ಯತ್ವ ಹೊಂದಿದ್ದಾರೆ. ಆದರೆ ಮುಖ್ಯ ದೌರ್ಬಲ್ಯವೆಂದರೆ ಇವರಲ್ಲಿ 23% ಮಾತ್ರವೇ 35 ವರ್ಷಕ್ಕಿಂತ ಕೆಳಗಿನ ವಯಸ್ಸಿನವರು. ಅಜರ್‌ಬೈಝಾನ್ ಕಮ್ಯುನಿಸ್ಟರು 1992 ರಿಂದ ತಮ್ಮಲ್ಲಿ ನಡೆಯುತ್ತಿರುವ ಅಂತರ್ಯುದ್ಧದ ಬಗ್ಗೆ ವಿವರಿಸಿದರು. ಈ ಗಣತಂತ್ರಗಳ ಪೈಕಿ ಬೈಲೋರಷ್ಯಾದಲ್ಲಿ ಕಮ್ಯುನಿಸ್ಟರ ಬಲವಾದ ಅಸ್ತಿತ್ವವಿದೆ. ಇಲ್ಲಿ ಇದುವರೆಗೆ ಕಮ್ಯುನಿಸ್ಟ್ ಪಕ್ಷ ಪ್ರಧಾನ ಉದ್ದಿಮೆಗಳ ಖಾಸಗೀಕರಣವನ್ನು ತಡೆದಿದೆ. ಅದೇ ರೀತಿ ಉಕ್ರೇನಿನಲ್ಲಿ ಸೈದ್ಧಾಂತಿಕವಾಗಿ ಬಲಿಷ್ಟವಾದ ಕಮ್ಯುನಿಸ್ಟ್ ಗುಂಪೊಂದು ಇದೆ.

ಪೂರ್ವ ಯುರೋಪಿನಲ್ಲಿ

ಪೂರ್ವ ಯುರೋಪಿನ ಮಾಜಿ ಸಮಾಜವಾದಿ ದೇಶಗಳ ಪಕ್ಷಗಳ ವರದಿಗಳಿಂದಲೂ ಕಂಡು ಬರುವ ಸಂಗತಿಯೆಂದರೆ ನಿರ್ದಯ ಬಂಡವಾಳಶಾಹಿ ಮರುಸ್ಥಾಪನೆಯ ನಗ್ನ ದಮನ ಮಿಲಿಯ ಗಟ್ಟಲೆ ಜನಗಳನ್ನು ಅನಾಥಗೊಳಿಸಿದೆ. ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆಗೆ ವಸ್ತುಸ್ಥಿತಿ ಅನುಕೂಲಕರವಾಗಿದ್ದರೂ ಮಾರ್ಕ್ಸ್‌ವಾದ -ಲೆನಿನ್‌ವಾದದ ಬಲವಾದ ಬೇರುಗಳನ್ನು ಹೊಂದಿರುವ ಒಂದು ಸೈದ್ಧಾಂತಿಕವಾಗಿ ಬಲಿಷ್ಟವಾದ ಕಮ್ಯುನಿಸ್ಟ್ ಆಂದೋಲನದ ಅಭಾವ ಒಂದು ಅತಿದೊಡ್ಡ ದೌರ್ಬಲ್ಯ. ಈ ದೌರ್ಬಲ್ಯವನ್ನು ಮೀರಿ ನಿಲ್ಲುವುದು ಈಗ ತಮ್ಮ ಮುಖ್ಯ ಕೆಲಸ ಎಂದು ಅವರು ಹೇಳುತ್ತಾರೆ.

ಬಂಡವಾಳಶಾಹಿ ಜಗತ್ತಿನಲ್ಲಿ

ಬಂಡವಾಳಶಾಹಿ ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳು ನವ-ಉದಾರವಾದಿ ಆರ್ಥಿಕ ನೀತಿಗಳು ಮಾಡುತ್ತಿರುವ ಹೊಸ ಧಾಳಿಗಳ ವಿರುದ್ಧ ದುಡಿಯುವ ಜನಗಳ ಹೆಚ್ಚುತ್ತಿರುವ ಹೋರಾಟಗಳ ವರದಿ ನೀಡಿದವು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕಳೆದ 6 ತಿಂಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ರಿಟ್ರೆಂಚ್ ಆಗಿದ್ದಾರೆ. ದುಡಿಯುವ ಜನಗಳಲ್ಲಿ 30% ತಾತ್ಕಾಲಿಕ ಕಾರ್ಮಿಕರು, ಅವರಿಗೆ ಸಾಮಾಜಿಕ ಕಲ್ಯಾಣ ಯೋಜನೆಗಳ ಸೌಲಭ್ಯವಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ಜನತೆಯ ಅಸಂತೃಪ್ತಿಯನ್ನು ಸಂಕುಚಿತ ರಾಷ್ಟ್ರೀಯವಾದಿ ಶಕ್ತಿಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿವೆ. ಪ್ರತಿಗಾಮಿ ಕಾರ್ಮಿಕ ಸಂಘಟನೆ AFL-CIO ಇತ್ತೀಚೆಗೆ ತನ್ನ ಸಂವಿಧಾನದಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಇದ್ದ ನಕಾರಾತ್ಮಕ ಅಂಶಗಳನ್ನೆಲ್ಲಾ ತೆಗೆದುಹಾಕಿದೆ ಎಂದು ನಮಗೆ ತಿಳಿಸಲಾಯಿತು. ಶೀತಲ ಯುದ್ಧದ ಅವಧಿಯಲ್ಲಿ ಈ ಕಾರ್ಮಿಕ ಒಕ್ಕೂಟ ಕಮ್ಯುನಿಸ್ಟ್ - ವಿರೋಧದ ಕೊತ್ತಳವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಲಾಯಿತು.

> ಯುರೋಪಿನಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ಹೆಚ್ಚುತ್ತಿವೆ, ಅವನ್ನು ಹೆಚ್ಚೆಚ್ಚು ಸಂಯೋಜಿತವಾಗಿ ನಡೆಸುವ ಪ್ರಯತ್ನಗಳು ನಡೆಯುತ್ತಿವೆ.

ಯುರೋಪಿನಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ಹೆಚ್ಚುತ್ತಿವೆ, ಅವನ್ನು ಹೆಚ್ಚೆಚ್ಚು ಸಂಯೋಜಿತವಾಗಿ ನಡೆಸುವ ಪ್ರಯತ್ನಗಳು ನಡೆಯುತ್ತಿವೆ. ಈ ಹೆಚ್ಚಿನ ದೇಶಗಳಲ್ಲಿ ಕಮ್ಯುನಿಸ್ಟರ ಮುಂದಿರುವ ಕರ್ತವ್ಯವೆಂದರೆ ತಮ್ಮ ನೇತೃತ್ವದಲ್ಲಿ ಒಂದು ಬಂಡವಾಳಶಾಹಿ-ವಿರೋಧಿ

> ವಿವಿಧ ದೇಶಗಳಲ್ಲಿ ಕಮ್ಯುನಿಸ್ಟ್ ನೇತೃತ್ವದ ಸಮರಧೀರ ಪ್ರದರ್ಶನ, ಕಾರ್ಯಾಚರಣೆಗಳಲ್ಲಿ ಒಂದು ಗಮನಾರ್ಹ ಹೆಚ್ಚಳವಾಗಿದೆಯೆಂಬುದನ್ನು ಇಲ್ಲಿ ಕಾಣಲಾಯಿತು. ಇಂತಹ ಮುನ್ನಡೆಗಳು ಇತ್ತೀಚಿನ ವರ್ಷಗಳಲ್ಲಿನ ಹಿನ್ನಡೆಯೇನಿದ್ದರೂ ಅದು ಕೆಲವರು ಹೇಳಿರುವಂತೆ ಸಿದ್ಧಾಂತದ ಅಥವಾ ಇತಿಹಾಸದ ಕೊನೆಯಂತೂ ಅಲ್ಲ ಎಂಬ ಸಂಗತಿಯನ್ನು ದೃಢೀಕರಿಸಿವೆ.

ಎಡ ಆಂದೋಲನವನ್ನು ಕಟ್ಟಿ ಸಾಮಾಜಿಕ ಪ್ರಜಾಪ್ರಭುತ್ವದ ಜತೆಗೆ ಹೋಗುವುದನ್ನು ತಡೆಯುವುದು ಹಾಗೂ ಅತಿ ಬಲಪಂಥೀಯ, ಜನಾಂಗವಾದಿ, ದ್ವೇಷಸಾಧಕ ಶಕ್ತಿಗಳನ್ನು ಎದುರಿಸುವುದು.

ಬಲಿಷ್ಟ ಗ್ರೀಕ್ ಪಕ್ಷ

ಈ ಸಮ್ಮೇಳನ ಗ್ರೀಸ್‌ನಲ್ಲಿ ಕಮ್ಯುನಿಸ್ಟ್ ಆಂದೋಲನ ಎಷ್ಟು ಆಳವಾದ ಬೇರು ಬಿಟ್ಟಿದೆ ಎಂಬುದನ್ನು ಅರಿಯುವ ಅವಕಾಶ ಒದಗಿಸಿತು. ಬಲವಾದ ಸಾಮೂಹಿಕ ನೆಲೆಯಿರುವ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಂತೆ ಗ್ರೀಕ್ ಪಕ್ಷದಲ್ಲೂ ಗ್ರೀಕ್ ಬುದ್ಧಿಜೀವಿಗಳಲ್ಲಿ ಉನ್ನತರಾದವರು, ಸಾಂಸತಿಕ ವ್ಯಕ್ತಿಗಳಲ್ಲಿ ಉನ್ನತರಾದವರು ಹಲವರಿದ್ದಾರೆ. ಈ ಸಭೆ ನಡೆಯುತ್ತಿದ್ದಂತೆಯೇ ಅಲ್ಲಿ ಖಾಸಗೀಕರಣದ ವಿರುದ್ಧ ದೊಡ್ಡ ಮುಷ್ಕರ ಕಾರ್ಯಾಚರಣೆಗಳು ನಡೆಯುತ್ತಿದ್ದವು. ಗ್ರೀಸಿನ ಕಮ್ಯುನಿಸ್ಟರನ್ನು ಅವರ ದೇಶಪ್ರೇಮಿ ಹಾಗೂ ಪ್ರಜಾಪ್ರಭುತ್ವವಾದಕ್ಕಾಗಿ ಇಲ್ಲಿ ಬಹಳವಾಗಿ ಗೌರವಿಸಲಾಗುತ್ತದೆ. ಕಳೆದ ಚುನಾವಣೆಗಳಲ್ಲಿ ಅವರಿಗೆ 6% ಕ್ಕಿಂತ ಹೆಚ್ಚು ಮತ ದೊರೆಯಿತು. ಗ್ರೀಕ್ ಕಮ್ಯುನಿಸ್ಟ್ ಪಕ್ಷದ ದಿನಪತ್ರಿಕೆ ದೇಶದ ಮಾಧ್ಯಮದ ಒಂದು ಪ್ರಮುಖ ದನಿಯೆಂದು ಪರಿಗಣಿಸಲ್ಪಡುತ್ತದೆ. ಆಳುವ ಸಾಮಾಜಿಕ ಜನತಾಂತ್ರಿಕ ಪಕ್ಷ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಈಡೇರಿಸುತ್ತಿರುವಾಗ ಗ್ರೀಕ್ ಕಮ್ಯುನಿಸ್ಟ್ ಪಕ್ಷ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಸಮರಶೀಲ ತೀವ್ರಗಾಮಿ ಆಂದೋಲನಗಳತ್ತ ಒಯ್ಯುವ ಏಕೈಕ ಸಮರ್ಥ ರಾಜಕೀಯ ಶಕ್ತಿಯಾಗಿದೆ.

ಒಟ್ಟಾರೆಯಾಗಿ ಈ ಸಮ್ಮೇಳನ ಪ್ರಸಕ್ತ ವಿಶ್ವ ವಾಸ್ತವತೆಗಳ ವಿವಿಧ ಅಂಶಗಳ ಒಂದು ಒಳನೋಟ ನೀಡುವುದರೊಂದಿಗೆ ಹಲವು ದೇಶಗಳಲ್ಲಿನ ಪ್ರಸಕ್ತ ಪರಿಸ್ಥಿತಿಗಳನ್ನು ಅರಿಯಲು ಅವಕಾಶ ಒದಗಿಸಿಕೊಟ್ಟಿತು. ವಿವಿಧ ದೇಶಗಳಲ್ಲಿ ಕಮ್ಯುನಿಸ್ಟ್ ನೇತೃತ್ವದ ಸಮರಧೀರ ಪ್ರದರ್ಶನ, ಕಾರ್ಯಾಚರಣೆಗಳಲ್ಲಿ ಒಂದು ಗಮನಾರ್ಹ ಹೆಚ್ಚಳವಾಗಿದೆಯೆಂಬುದನ್ನು ಇಲ್ಲಿ ಕಾಣಲಾಯಿತು. ಇಂತಹ ಮುನ್ನಡೆಗಳು ಇತ್ತೀಚಿನ ವರ್ಷಗಳಲ್ಲಿನ ಹಿನ್ನಡೆಯೇನಿದ್ದರೂ ಅದು ಕೆಲವರು ಹೇಳಿರುವಂತೆ ಸಿದ್ಧಾಂತದ ಅಥವಾ ಇತಿಹಾಸದ ಕೊನೆಯಂತೂ ಅಲ್ಲ ಎಂಬ ಸಂಗತಿಯನ್ನು ದೃಢೀಕರಿಸಿವೆ. ಹೆಚ್ಚುತ್ತಿರುವ ಹೋರಾಟಗಳು ಹಾಗೂ ಕಮ್ಯುನಿಸ್ಟ್ ಶಕ್ತಿಗಳು ಮತ್ತೆ ಒಂದುಗೂಡುತ್ತಿರುವುದು ಈ ವಾಸ್ತವತೆಗೊಂದು ಸಾಕ್ಷಿ.

ಬಿಹಾರ್ ಬಂದ್ : ಸಿ.ಪಿ.ಐ.(ಎಂ) ಅಭಿನಂದನೆ

ಸಿ.ಪಿ.ಐ(ಎಂ) ಮುಖಂಡ ಹಾಗು ಶಾಸಕ ಕಾಂ|| ಅಜಿತ್ ಸರ್ಕಾರ್ ಅವರ ಹೇಯ ಕಗ್ಗೊಲೆಯನ್ನು ಪ್ರತಿಭಟಿಸಲು ನೀಡಿದ್ದ ಬಂದ್ ಕರೆಗೆ ರಾಜ್ಯದಾದ್ಯಂತ ತೋರಿದ ಸ್ಪಂದನಕ್ಕಾಗಿ ಸಿ.ಪಿ.ಐ(ಎಂ) ಬಿಹಾರ ರಾಜ್ಯ ಸಮಿತಿ ರಾಜ್ಯದ ಜನತೆಯನ್ನು ಅಭಿನಂದಿಸಿದೆ.

ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಜೀವನದ ಮೇಲೆ ಕ್ರಿಮಿನಲ್ ಶಕ್ತಿಗಳು ಹೊಂದಿರುವ ಹಿಡಿತ ಹಾಗೂ ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಪರಿಸ್ಥಿತಿ ತೀವ್ರವಾಗಿ ಕುಸಿಯುತ್ತಿರುವುದಕ್ಕೆ ಜನತೆಯ ಒಕ್ಕೊರಲ ಪ್ರತಿಭಟನೆಯಾಗಿತ್ತು ಈ ಬಂದ್. ಭೂಮಾಲಿಕರು, ಕ್ರಿಮಿನಲ್‌ಗಳು, ಜಾತೀಯ ಮತ್ತು ಕೋಮುವಾದಿ ಶಕ್ತಿಗಳು ಹಾಗೂ ಪೂರ್ಣಿಯಾದ ಭ್ರಷ್ಟ ಅಧಿಕಾರಿಗಳ ನಡುವಿನ ಅಪವಿತ್ರ ಸಂಬಂಧಕ್ಕೆ ಪ್ರತಿಭಟನೆಯಾಗಿತ್ತು ಈ ಬಂದ್.

ಇತರ ಹಲವು ಪಕ್ಷಗಳಿಗೆ ಸೇರಿದ ಭೂಮಾಲಕರು ಕಾಮ್ರೇಡ್ ಸರ್ಕಾರ್ ಅವರನ್ನು ಕೊಲ್ಲಲು ಸಂಚು ಹೂಡಿದ್ದರು. ಪೂರ್ಣಿಯಾ ಮತ್ತು ಸಹಾರ್ಸಾದ ಕೆಲವು ಕ್ರಿಮಿನಲ್ ತಂಡಗಳು ಅದನ್ನು ಕಾರ್ಯರೂಪಕ್ಕೆ ತಂದಿದ್ದವು.

ಭೂಸುಧಾರಣೆಯನ್ನು ಜಾರಿಗೊಳಿಸುವಲ್ಲಿ ಬಿಹಾರ ರಾಜ್ಯ ಸರ್ಕಾರದ ವೈಫಲ್ಯ ಮತ್ತು ರಾಜ್ಯದ ಆಳುವ ಪಕ್ಷಗಳು ಭೂಮಾಲಿಕರಿಗೆ ರಕ್ಷಣೆ ನೀಡುತ್ತಿರುವ ವಿಚಾರವನ್ನು ಈ ಬಂದ್ ಬಯಲಿಗೆ ಎಳೆದಿದೆ.

ಎಡಪಕ್ಷಗಳ ಕರೆಯ ಮೇರೆಗೆ ನಡೆದ ಬಂದ್ ವೇಳೆ ಇಡೀ ಪಾಟ್ನಾ ಜಿಲ್ಲೆಯ ಕಲ್ಲುಗಣಿಗಳು ಮತ್ತು ಬೀಡಿ ಫ್ಯಾಕ್ಟರಿಗಳು ಮುಚ್ಚಿದ್ದವು. ಹಲವು ಜಿಲ್ಲೆಗಳಲ್ಲಿ ಬಂದ್ ಯಶಸ್ವಿಯಾಗಿ ನಡೆದ ವರದಿಗಳು ಬಂದಿವೆ. ರಾಜ್ಯ ಕೇಂದ್ರ ಪಾಟ್ನಾ ಮತ್ತು ಜಿಲ್ಲೆಗಳಲ್ಲಿ ಎಡಪಕ್ಷಗಳ ಅನೇಕ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಣೇಶ ಶಂಕರ ವಿದ್ಯಾರ್ಥಿ, ಕೇಂದ್ರ ಸಮಿತಿ ಸದಸ್ಯ ಸುಬೋಧ ರಾಯ್, ಫಾರ್ವರ್ಡ್ ಬ್ಲಾಕ್ ರಾಜ್ಯ ಕಾರ್ಯದರ್ಶಿ ನೃಪೇಂದ್ರ ಕೃಷ್ಣ ಮಹತೊ, ಆರ್.ಎಸ್.ಪಿ. ರಾಜ್ಯ ಕಾರ್ಯದರ್ಶಿ ತಾರಾಕಾಂತ ಪ್ರಕಾಶ್ ಮತ್ತು ಎಂಸಿಪಿಐ ನಾಯಕ ದೇವಲಾಲ್ ಸಿಂಗ್ ಬಂಧಿತರಲ್ಲಿ ಪ್ರಮುಖರು.

ಆಸ್ಸಾಂ : ಬಿಜೆಪಿ ಜೊತೆ ಎಜಿಪಿ ಮೈತ್ರಿಗೆ ಸಿ.ಪಿ.ಐ.(ಎಂ) ಟೀಕೆ

ಗುವಾಹಟಿ ಮಹಾನಗರ ಪಾಲಿಕೆ (ಜಿ.ಎಂ.ಸಿ.) ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ತನ್ನ ಅಭ್ಯರ್ಥಿ ಜಯಗೊಳಿಸುವಂತಾಗಲು ಅಸ್ಸಾಂ ಗಣಪರಿಷತ್ (ಎಜಿಪಿ) ಭಾರತೀಯ ಜನತಾ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದನ್ನು ಸಿ.ಪಿ.ಐ.(ಎಂ) ಅಸ್ಸಾಂ ರಾಜ್ಯ ಸಮಿತಿ ಕಟುವಾಗಿ ಟೀಕಿಸಿದೆ.

ಎಜಿಪಿಯ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ರಾಜ್ಯ ಸಮಿತಿ ಕಾರ್ಯದರ್ಶಿ ಹೇಮೇನ್ ದಾಸ್, ಇಂಥ ನೀತಿ ಭ್ರಷ್ಟ ಹೊಂದಾಣಿಕೆಗಳಿಂದಾಗಿ ಸಿ.ಪಿ.ಐ(ಎಂ), ಎಜಿಪಿ ನಡುವಣ ಬಾಂಧವ್ಯಕ್ಕೆ ಧಕ್ಕೆ ಬರುವುದಲ್ಲದೆ ಜಾತ್ಯಾತೀತ ಶಕ್ತಿಗಳ ಏಕತೆಗೂ ಭಂಗ ಉಂಟಾಗುತ್ತದೆ ಎಂದು ಹೇಳಿದ್ದಾರೆ.

ಕೋಮುವಾದಿ ಶಕ್ತಿಗಳ ಜತೆ ಸರಸವಾಡುವುದಕ್ಕೆ ಎಜಿಪಿ ಆದ್ಯತೆ ಕೊಟ್ಟಿದೆ. ಎಜಿಪಿ ನೇತೃತ್ವದ ಸರಕಾರಕ್ಕೆ ಹೊರಗಿನಿಂದ ಕೊಟ್ಟಿರುವ ಬೆಂಬಲವನ್ನು ಮುಂದುವರಿಸುವುದು ಪಕ್ಷಕ್ಕೆ ಸಾಧ್ಯವಾಗದು ಎಂದು ಸಿ.ಪಿ.ಐ.(ಎಂ) ಎಚ್ಚರಿಸಬಯಸುತ್ತದೆ ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ. ಇಂಥ ನೀತಿರಹಿತ ಕ್ರಮವನ್ನು ಭವಿಷ್ಯದಲ್ಲಿ ಪುನರಾವರ್ತಿಸದಂತೆ ಪಕ್ಷದ ರಾಜ್ಯ ಸಮಿತಿ ಎಜಿಪಿ ನಾಯಕತ್ವಕ್ಕೆ ಕರೆ ಕೊಟ್ಟಿದೆ.

ಜೂನ್ 11ರಂದು ಮುಖ್ಯಮಂತ್ರಿ ಪ್ರಫುಲ್ ಕುಮಾರ್ ಮಹಂತ ಅವರನ್ನು ಭೇಟಿ ಮಾಡಿದ ಸಿ.ಪಿ.ಐ.(ಎಂ) ನಾಯಕರು ಪಕ್ಷದ ನಿಲುವನ್ನು ವಿವರಿಸಿದರು. ರಾಜ್ಯ ಕಾರ್ಯದರ್ಶಿ ಹೇಮೇನ್ ದಾಸ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಂದೇಶ್ವರ ತಾಲೂಕ್‌ದಾರ್, ಉದ್ಧವ್ ಬರ್ಮನ್ ಮತ್ತು ಹಿರೇನ್ ಗೊಗೊಯ್ ನಿಯೋಗದಲ್ಲಿ ಇದ್ದರು.

ರಾಜ್ಯದಾದ್ಯಂತ ಬಿಗಡಾಯಿಸುತ್ತಿರುವ ಆರ್ಥಿಕ ಪರಿಸ್ಥಿತಿ, ಬೋಡೋ ಸಮಸ್ಯೆ, ರೋಗಗ್ರಸ್ತ ಸಾರ್ವಜನಿಕ ಉದ್ಯಮಗಳ ಪುನಶ್ಚೇತನಕ್ಕೆ ರಾಜ್ಯ ಸರಕಾರ ಕ್ರಮ ಕೈಗೊಳ್ಳದಿರುವುದರಿಂದ ಉದ್ಭವಿಸಿರುವ ಕಳವಳಕಾರಿ ಪರಿಸ್ಥಿತಿ ಮೊದಲಾದ ವಿಚಾರಗಳ ಬಗ್ಗೆಯೂ ನಿಯೋಗದ ಸದಸ್ಯರು ಮುಖ್ಯಮಂತ್ರಿಯೊಂದಿಗೆ ಚರ್ಚಿಸಿದರು.

ಪತ್ರಕರ್ತನನ್ನು ಸುಡಲು ಶಿವಸೈನಿಕರ ಯತ್ನ

ತನಗೆ ಅನುಕೂಲವಲ್ಲದ ಸನ್ನಿವೇಶಕ್ಕೆ ಗೂಂಡಾಗಿರಿಯೇ ಸಂಘಪರಿವಾರದ ಉತ್ತರ ಎಂಬುದಕ್ಕೆ ಇದೋ ಇಲ್ಲಿದೆ ಒಂದು ತಾಜಾ ನಿದರ್ಶನ. ಶಿವಸೇನೆ-ಬಿಜೆಪಿ ಮಿತ್ರಕೂಟ ಆಡಳಿತದಲ್ಲಿರುವ ಮಹಾರಾಷ್ಟ್ರದಿಂದ ವರದಿಯಾಗಿರುವ ಪ್ರಕರಣವಿದು.

ಅಹಮದ್‌ನಗರದಿಂದ ಪ್ರಕಟವಾಗುವ ಮರಾಠಿ ಪತ್ರಿಕೆಯೊಂದರ ನಾಂದೇಡ್ ಕಛೇರಿಗೆ ನುಗ್ಗಿದ ಶಿವಸೇನೆಯ ಬೆಂಬಲಿಗರು ವರದಿಗಾರ ವೈಜಾಲೆ ಎಂಬವರ ಮೇಲೆ ಹಲ್ಲೆ ನಡೆಸಿದ್ದಲ್ಲದೆ ಅವರನ್ನು ಜೀವಂತ ಸುಟ್ಟು ಹಾಕಲು ಪ್ರಯತ್ನಿಸಿದರು.

ಮರಾಠವಾಡ ಪ್ರದೇಶದ ಕ್ಷೇತ್ರವೊಂದರ ಶಾಸಕ ಖೇಡ್ಕರ್ ಎಂಬುವವರ ಸೋದರ ಈ ಹೇಯ ಕೃತ್ಯದ ನೇತೃತ್ವ ವಹಿಸಿದ್ದ. ಕಛೇರಿಗೆ ನುಗ್ಗಿದ ಶಿವಸೈನಿಕ ಪುಂಡರು ಪೀಠೋಪಕರಣಗಳನ್ನು ಧ್ವಂಸಗೊಳಿಸಿದರು. ದಾಖಲೆ ಪತ್ರಗಳಿಗೆ ಬೆಂಕಿ ಹಚ್ಚಿದರು. ದೂರವಾಣಿ ತಂತಿಯಿಂದ ಕುತ್ತಿಗೆ ಬಿಗಿದು ವೈಜಾಲೆ ಅವರನ್ನು ಸಾಯಿಸಲು ಯತ್ನಿಸಿದ್ದಲ್ಲದೆ ಜೀವಂತವಾಗಿ ಸುಡಲೂ ಪ್ರಯತ್ನಿಸಿದರು.

ಅದೃಷ್ಟವಶಾತ್, ಪತ್ರಕರ್ತ ವೈಜಾಲೆ ಕಿಟಕಿಯೊಂದರಿಂದ ಹಾರಿ ತಪ್ಪಿಸಿಕೊಂಡರು.

ಈಚೆಗಿನ ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಕ್ರಾಸ್‌ವೋಟಿಂಗ್ ನಲ್ಲಿ ಶಾಸಕ ಖೇಡ್ಕರ್ ಅವರ ಪಾತ್ರದ ಕುರಿತಾಗಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯೇ ಶಿವಸೈನಿಕರ 'ಕೋಪ'(!)ಕ್ಕೆ ಕಾರಣವಾಗಿತ್ತು.

ಪ್ರತಿಕೂಲವಾದ ವರದಿಗೆ ಸ್ಪಷ್ಟನೆಯನ್ನೋ, ವಿರೋಧವನ್ನೋ ಪ್ರಜಾತಂತ್ರ ರೀತಿಯಲ್ಲಿ ಸೂಚಿಸಬಹುದಿತ್ತು. ಅದನ್ನು ಬಿಟ್ಟು ಗೂಂಡಾಗಿರಿಗೆ ಇಳಿದದ್ದು ಶಿವಸೇನೆಯಲ್ಲಿ ಉದ್ಭವಿಸಿರುವ ಹತಾಶೆಗೆ ಸಾಕ್ಷಿಯಾಗಿದೆ.

ಶಿವಸೇನೆಯ ಕಾರ್ಯಕರ್ತರು ಸುಡಲು ಯತ್ನಿಸಿದ್ದು ಒಬ್ಬ ವ್ಯಕ್ತಿಯನಲ್ಲ; ಆದರೆ ಮಾನವೀಯ ಮೌಲ್ಯಗಳನ್ನು, ಪ್ರಜಾಪ್ರಭುತ್ವದ ನಿಯಮಗಳನ್ನು.

ಮಧ್ಯಪ್ರದೇಶ: ಗಣಿ ಕಾರ್ಮಿಕರ ಮೇಲೆ ಗೋಳಿಬಾರು

ಕಾರ್ಮಿಕ-ವಿರೋಧಿ ದಮನಕ್ಕೆ ಕುಖ್ಯಾತವಾದ ಮಧ್ಯಪ್ರದೇಶದ ದಿಗ್ವಿಜಯ ಸಿಂಗ್ ಸರ್ಕಾರ ಇನ್ನೊಂದು ಇಂತಹ ಕುಕೃತ್ಯ ನಡೆಸಿದೆ. ಬಿಲಾಸಪುರದ ದೌರಾಭಾಚಾದಲ್ಲಿ ಗಣಿ ಕಾರ್ಮಿಕರ ಮೇಲೆ ಅನಗತ್ಯವಾಗಿ ಪೋಲೀಸ್ ಗೋಳೀಬಾರು ನಡೆಸಿದೆ. ಇದರಲ್ಲಿ 30 ವರ್ಷದ ದನ್ನಾರಾಮ್ ಕೌಶಿಕ್ ಸಾವಿಗೀಡಾಗಿ ಇನ್ನೂ 6 ಜನ ಕಾರ್ಮಿಕರು ತೀವ್ರವಾಗಿ ಗಾಯಗೊಂಡಿದ್ದಾರೆ.

ಇವರೆಲ್ಲಾ ದೌರಾಭಾಚಾದ ಖಾಸಗೀ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದು ಕಳೆದ ಒಂದು ತಿಂಗಳಿಂದ ಕುಡಿಯುವ ನೀರು, ಸರಕಾರ ಪ್ರಕಟಿಸಿದ ಕನಿಷ್ಟ ಕೂಲಿಗಳು, ಗಣಿ ಸುರಕ್ಷತತೆಯ ಕ್ರಮಗಳ ಜಾರಿಗಾಗಿ ಚಳುವಳಿ ನಡೆಸಿದ್ದರು. ಖಾಸಗೀ ಗಣಿ ಮಾಲಕರು ಲಾಕೌಟ್ ಸಾರಿ 1500 ಕಾರ್ಮಿಕರನ್ನು ಬೀದಿಗೆಸೆದರು. ಲೇಬರ್ ಇಲಾಖೆಯ ಮುಂದೆ ಮಾತುಕತೆಗೂ ಅವರು ಹಾಜರಾಗಲಿಲ್ಲ.

ಜೂನ್ 13 ರ ದಿನ ಪೋಲೀಸರು ಗೋಳೀಬಾರ್ ಆರಂಭಿಸಿದಾಗ ಮಾಲಕರು ಅವರ ಜೊತೆಗಿದ್ದರೆಂದು ತಿಳಿದುಬಂದಿದೆ. ನಂತರ ಭಯೋತ್ಪಾದನೆ ಹರಿಯಬಿಟ್ಟ ಪೋಲೀಸರು 199 ಕಾರ್ಮಿಕರನ್ನು ಬಂಧಿಸಿದ್ದಾರೆ. ಇವರಲ್ಲಿ 88 ಮಹಿಳೆಯರೂ ಇದ್ದಾರೆ. ಇದಕ್ಕೆ ಕಾರ್ಮಿಕ ಸಂಘಗಳ ನಡುವಿನ ಘರ್ಷಣೆ ಎಂಬ ಸ್ವರೂಪ ನೀಡಲು ಕೂಡಾ ಅವರು ಪ್ರಯತ್ನಿಸುತ್ತಿದ್ದಾರೆ.

ಸಿಐಟಿಯು ಕೇಂದ್ರ ಕಾರ್ಯಕಾರಿ ಮಂಡಳಿ ಪೋಲೀಸ್ ಗೋಳಿಬಾರನ್ನು ಬಲವಾಗಿ ಖಂಡಿಸುತ್ತಾ ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ಕಾರ್ಮಿಕರ ನೈಜ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು, ಗಣಿಗಳನ್ನು ತಕ್ಷಣ ತೆರೆಯಬೇಕು, ಸತ್ತವರ ಹಾಗೂ ಗಾಯಗೊಂಡವರ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ಆಗ್ರಹಪಡಿಸಿದೆ.

ಧರಣಿ ನಿರತರ ಬಂಧನ ವಿರೋಧಿಸಿ ರಸ್ತೆ ತಡೆ

ರಾಯಚೂರು: ಜಿಲ್ಲೆಯ ಸಿಂಧನೂರಿನಲ್ಲಿ ಅಕ್ರಮವಾಗಿ ಕಟ್ಟಿದ ಕಟ್ಟಡವನ್ನು ನೆಲಸಮಗೊಳಿಸಿ ರಸ್ತೆ ವಿಸ್ತರಿಸುವಂತೆ ಒತ್ತಾಯಿಸಿ ಶಾಂತಿಯುತವಾಗಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಸಿಪಿಐ(ಎಂ)ನ ಕಾರ್ಯದರ್ಶಿ ಹಾಗೂ 27 ಕಾರ್ಯಕರ್ತ ರನ್ನು ಅಕ್ರಮವಾಗಿ ಬಂಧಿಸಿ ಗುಲ್ಬರ್ಗ ಜೈಲಿಗೆ ಕಳುಹಿಸಿರುವುದನ್ನು ಪ್ರತಿಭಟಿಸಿ ಜೂನ್ 16 ರಂದು ಸಿಐಟಿಯು ಹಾಗೂ ಎಸ್‌ಎಫ್‌ಐ ಜಿಲ್ಲಾ ಸಮಿತಿಗಳು 45 ನಿಮಿಷಗಳ ಕಾಲ ರಸ್ತೆ ತಡೆ ನಡೆಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಎಸ್‌ಎಫ್‌ಐ ನ ಯಲ್ಲಪ್ಪ ಪ್ರತಿಭಟನಾಕಾರರನ್ನು ಬಂಧಿಸಿ ಜೈಲಿಗೆ ಕಳಿಸಿರುವ ಜಿಲ್ಲಾಡಳಿತದ ಕ್ರಮವನ್ನು ಖಂಡಿಸಿ ಬಂಧಿತರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ಸಿಐಟಿಯುನ ಕೆ.ವೀರೇಶ್ ಮಾತನಾಡಿ ಸಿಂಧನೂರಿನ ರಸ್ತೆ ವಿಸ್ತರಿಸುವಾಗ ಸಣ್ಣಪುಟ್ಟ ಅಂಗಡಿಗಳನ್ನು ತೆರವುಗೊಳಿಸಿದರೆ ಸಾಲದು ಅಕ್ರಮವಾಗಿ ಕಟ್ಟಿರುವ ಕಟ್ಟಡವನ್ನು ನೆಲಸಮಗೊಳಿಸು ವಂತೆ ಆಗ್ರಹಿಸುವುದರ ಜೊತೆಗೆ ಸಣ್ಣ ಅಂಗಡಿಗಳಿಗೆ ಬೇರೆಡೆ ಜಾಗ ಕಲ್ಪಿಸುವಂತೆ ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಸಿಂಧನೂರಿಗೆ ಭೇಟಿ ನೀಡಿ ನಂತರ ಬಂದಿತರನ್ನು ಬಿಡುಗಡೆಗೊಳಿಸಲಾಗು ವುದೆಂದು ಭರವಸೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಿಐಟಿಯುನ ಖಾಜಾಹುಸೇನ್, ರಸೂಲ್ ಅಹ್ಮದ್, ಬಾಷಾಖಾನ್, ಹಾಜಿ ಇಬ್ರಾಹಿಂ, ಲಕ್ಷ್ಮಣ, ವೀರಣ್ಣ, ಪಂಪಣ್ಣ, ಮಲ್ಲೇಶ್ ಮತ್ತು ಡಿವೈಎಫ್ಐ ಸಿದ್ದಲಿಂಗಯ್ಯ, ಎಸ್‌ಎಫ್‌ಐ ಶರಣಬಸವ, ಕೆ.ಜಿ.ವಿರೇಶ್, ವೈ.ಈರಣ್ಣ ವೀರಭದ್ರ ಮುಂತಾದವರು ಭಾಗವಹಿಸಿದ್ದರು.

ಸಬ್‌ಇನ್ಸ್‌ಪೆಕ್ಟರ್‌ರವರ ಭ್ರಷ್ಟಾಚಾರ ತನಿಖೆಗೆ ಒತ್ತಾಯಿಸಿ ಡಿವೈಎಫ್‌ಐ ರಸ್ತಾರೊಖೋ

ಹೊಸಪೇಟೆ: ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತಾ ಮಿತಿಮೀರಿ ಭ್ರಷ್ಟಾಚಾರ ನಡೆಸುತ್ತಿರುವ ಟಿ.ಬಿ.ಡ್ಯಾಂ ಸಬ್ ಇನ್ಸ್‌ಪೆಕ್ಟರ್ ಸತ್ಯನಾರಾಯಣ ಅವರನ್ನು ಇಲ್ಲಿಂದ ವರ್ಗಾಯಿಸದಿದ್ದರೆ ಜಿಲ್ಲೆಯಾದ್ಯಂತ ಹೋರಾಟ ಕೈಗೊಳ್ಳಲಾಗುವುದು ಎಂದು ಸಿಐಟಿಯು ಮುಖಂಡ ಡಿ.ವೆಂಕಟರಮಣ ಎಚ್ಚರಿಕೆ ನೀಡಿದರು.

ಸಬ್‌ಇನ್ಸ್‌ಪೆಕ್ಟರ್ ವರ್ಗಾವಣೆ ಸೇರಿದಂತೆ ಸ್ಥಳೀಯ ನಾಗರಿಕ ಸಮಸ್ಯೆಗಳ ಈಡೇರಿಕೆಗಾಗಿ ಆಗ್ರಹಿಸಿ ಟಿ.ಬಿ.ಡ್ಯಾಂನಲ್ಲಿ ಜೂ.3 ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ರಸ್ತೆ ತಡೆ ಚಳುವಳಿ ಕೈಗೊಂಡ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತಾಡಿದ ವೆಂಕಟರಮಣ ಪೋಲೀಸರಿರುವುದು ಜನರನ್ನು ಸಂರಕ್ಷಿಸುವುದಕ್ಕೆ ಹೊರತು ಸುಲಿಯುವುದಕ್ಕೆ ಅಲ್ಲ ಎಂದರು. ಡಿವೈಎಫ್‌ಐನ ರಾಜ್ಯ ಅಧ್ಯಕ್ಷ ಶಾಂತರಾಮ ನಾಯಕ್ ಮಾತನಾಡುತ್ತಾ ಪ್ರಜಾಸತ್ತಾತ್ಮಕ ಚಳುವಳಿ ನಡೆಸುವವರ ಮೇಲೆ ಕೆಂಗಣ್ಣು ಕಾರುವುದನ್ನು ಬಿಟ್ಟು ಪೋಲೀಸರು ಸಮಾಜ ಬಾಹಿರ ಶಕ್ತಿಗಳ ವಿರುದ್ಧ ಹೋರಾಟ ನಡೆಸಿದರೆ ಅವರಿಗೆ ಬೆಂಬಲಿಸುವುದಾಗಿ ನುಡಿದರು.

ಟಿ.ಬಿ.ಡ್ಯಾಂ ಸರ್ಕಲ್‌ನಿಂದ ಹೊರಟ ಮೆರವಣಿಗೆಯು ಚಿಗಡಿಕ್ಯಾಂಪ್, ಇ.ಬಿ. ಕ್ಯಾಂಪ್, ಡ್ರೆಸಸ್ ಕ್ಯಾಂಪ್, ನಿಶಾನಿ ಕ್ಯಾಂಪ್ ಹಾಗೂ ಮಂಕಾಯಿ ಕ್ಯಾಂಪ್‌ಗಳ ಮೂಲಕ ಮುಖ್ಯರಸ್ತೆಯ ಸ್ವಾಗತ ಕಮಾನು ಬಳಿ ಬಹಿರಂಗ ಸಭೆ ನಡೆಸುವ ಮೂಲಕ 'ರಸ್ತೆ ತಡೆ' ಮುಷ್ಕರ ಕೈಗೊಳ್ಳಲಾಯಿತು. ಈ ಪ್ರತಿಭಟನೆ ಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಎರಡು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದ ಈ ಹೋರಾಟದ ನೇತೃತ್ವವನ್ನು ಟಿ.ಬಿ.ಡ್ಯಾಂ, ಡಿವೈಎಫ್‌ಐನ ಜಿ.ಪಿ. ರಮೇಶ್, ಡಿ.ಸಭಾ ಪತಿ, ಎಸ್.ರಾಮಚಂದ್ರ ನಾವಡ, ಎಸ್‌ಎಫ್‌ಐನ ಕೆ.ಕತ್ರೇಶ್, ಎ.ಕೆ.ಉರೇದಪ್ಪ ಮುಂತಾದವರು ವಹಿಸಿದರು.

ರೈತ-ಕೃಷಿಕೂಲಿಕಾರರ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಒತ್ತಾಯ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕರೆಯಂತೆ ಕುಂದಾಪುರ ತಾಲೂಕು ರೈತ ಸಂಘದ ನೇತೃತ್ವದಲ್ಲಿ ತಾಲೂಕು ತಹಶೀಲ್ದಾರರ ಮುಖಾಂತರ ಮುಖ್ಯಮಂತ್ರಿಯವರಿಗೆ ಕಳುಹಿಸಲು ಮನವಿಯೊಂದನ್ನು ಅರ್ಪಿಸಲಾಯಿತು.

ಆತ್ಮಹತ್ಯೆ ಪ್ರಕರಣಕ್ಕೆ ಒಳಗಾದ ರೈತರಿಗೆ ತುರ್ತು ಪರಿಹಾರ ನೀಡಬೇಕು, ಸರಕಾರಿ ಸ್ಥಳದಲ್ಲಿ ಮನೆ ಕಟ್ಟಿದವರಿಗೆ ಹಕ್ಕುಪತ್ರ ಕೊಡಬೇಕು, ಕೇಂದ್ರದ ವಿದ್ಯುತ್ ನೀತಿಯನ್ನು ಹಿಂದೆಗೆಯಬೇಕು, ತೋಡುಗಳಲ್ಲಿ ತುಂಬಿದ ಹೊಗೆಯನ್ನು ತೆಗೆಯಬೇಕು, ಬೆಳೆ ನಷ್ಟಕ್ಕೆ ರೈತರಿಗೆ ಪರಿಹಾರ ನೀಡಬೇಕು, ರೈತರ ಪಂಪು ಸೆಟ್ಟುಗಳಿಗೆ ರಿಯಾಯಿತಿ ದರ ಒದಗಿಸಬೇಕು, ರೈತರ ಬೆಳೆಗೆ ವಿಮಾ ಯೋಜನೆ ಜಾರಿಗೆ ತರಬೇಕೆನ್ನುವ ಇವೇ ಮೊದಲಾದ ಮುಖ್ಯ ಬೇಡಿಕೆಗಳಿರುವ ಮನವಿಯೊಂದನ್ನು ರೈತ ಸಂಘದ ನಿಯೋಗವು ಅರ್ಪಿಸಿತು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯವರಾದ ಅಬ್ರಹಾಂ ಕರ್ಕಡರವರು ರಾಜ್ಯ ಸರಕಾರ ರೈತ ವಿರೋಧಿ ನೀತಿಯನ್ನು ಕೈಬಿಡಬೇಕೆಂದು, ರೈತ-ಕೃಷಿ ಕೂಲಿಗಾರರ ಬೇಡಿಕೆಗಳನ್ನು ತುರ್ತಾಗಿ ಇತ್ಯರ್ಥಗೊಳಿಸಬೇಕೆಂದೂ ಒತ್ತಾಯಿಸಿ, ರೈತರು ಮತ್ತು ಕೃಷಿ ಕೂಲಿಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಸಂಘಟಿತ ಹೋರಾಟಕ್ಕೆ ಮುಂದಾಗಬಹುದೆಂಬ ಎಚ್ಚರಿಕೆ ನೀಡಿದ್ದಾರೆ.

ಇ.ಎಸ್.ಐ. ಅವ್ಯವಸ್ಥೆಯ ವಿರುದ್ಧ ಸಿಐಟಿಯು ಪ್ರತಿಭಟನೆ

ಕುಂದಾಪುರ: ಜೂನ್ 18 ರಂದು ರಾಷ್ಟ್ರೀಯ ಪ್ರತಿಭಟನಾ ದಿನದ ಅಂಗವಾಗಿ ಕುಂದಾಪುರದಲ್ಲಿ ಸಿಐಟಿಯುನೊಂದಿಗೆ ಸೇರಿದ ಸೌತ್ ಕೆನರಾ ಟ್ರಾವಲ್ ವರ್ಕರ್ಸ್ ಯೂನಿಯನ್ನಿನ ನೇತೃತ್ವದಲ್ಲಿ ಹಂಚಿನ ಕಾರ್ಮಿಕರು ಇಎಸ್‌ಐ ಡಿಸ್ಪೆನ್ಸರಿಯ ಎದುರು ಪ್ರತಿಭಟನಾ ಮತಪ್ರದರ್ಶನ ನಡೆಸಿದರು. ಕೆ.ಶಂಕರ್, ವಿ.ನರಸಿಂಹ, ಸಿ.ನಾರಾಯಣ ಮತ್ತು ಎಚ್.ನರಸಿಂಹರವರ ನೇತೃತ್ವದಲ್ಲಿ ಮುಖ್ಯ ಬೇಡಿಕೆಗಳ ಮನವಿಯೊಂದನ್ನು ಡಿಸ್ಪೆನ್ಸರಿಯ ವೈದ್ಯಾಧಿಕಾರಿಯವರಿಗೆ ಅರ್ಪಿಸಲಾಯಿತು.

ಇಎಸ್‌ಐನ ಹೆಚ್ಚಿನ ಸಂಸ್ಥೆಯಲ್ಲಿರುವ ಭ್ರಷ್ಟಾಚಾರ ಮತ್ತು ಅವ್ಯವಹಾರಗಳನ್ನು ನಿರ್ಮೂಲನ ಮಾಡಬೇಕು, ಎಲ್ಲಾ ಇಎಸ್‌ಐ ಆಸ್ಪತ್ರೆಗಳಿಗೆ ಮತ್ತು ಚಿಕಿತ್ಸಾಲಯಗಳಿಗೆ ಸಾಕಷ್ಟು ಔಷಧಿಗಳ ಸರಬರಾಜನ್ನು ಖಾತ್ರಿಗೊಳಿಸಬೇಕು, ಇಎಸ್‌ಐ ಯೋಜನೆಗೆ ವಂತಿಗೆ ನೀಡಲು ತಪ್ಪಿದ ಮಾಲಕರ ವಿರುದ್ಧ ಉಗ್ರಕ್ರಮ ಕೈಗೊಳ್ಳಬೇಕು, ಈ ಯೋಜನೆಗೆ ರಾಜ್ಯ ಸರಕಾರಗಳು ಕೊಡುವುದಕ್ಕೆ ಸಮನಾಗಿ ಕೇಂದ್ರ ಸರ್ಕಾರವೂ ವಂತಿಗೆ ನೀಡಬೇಕು, ಬಡತನ ರೇಖೆಯ ಕೆಳಗಿನ ಮಟ್ಟದ ಕಾರ್ಮಿಕರಿಗೆ ಉಚಿತವಾಗಿ ಇಎಸ್‌ಐ ಸೌಲಭ್ಯ ಒದಗಿಸಬೇಕು ಹಾಗೂ ಕಾರ್ಮಿಕರು ಮತ್ತು ಆಡಳಿತ ವರ್ಗದವರು ಸೇರಿ ತಯಾರಿಸಿದ ವಂತಿಗೆ ರಹಿತ ಯೋಜನೆಗೆ ಇಎಸ್‌ಐ ಯೋಜನೆಯಿಂದ ವಿನಾಯಿತಿ ನೀಡಬೇಕೆಂಬ ಇವೇ ಮೊದಲಾದ ಮುಖ್ಯ ಬೇಡಿಕೆಗಳನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸಿ ಮನವಿ ಅರ್ಪಿಸಲಾಯಿತು.

ವಿಶ್ವ ವಿದ್ಯಾಲಯ ಶಿಕ್ಷಣ ಶುಲ್ಕ ದುಪ್ಪಟ್ಟಿಗೆ ಅಂತರ ವಿ.ವಿ.ಯ ಮಂಡಳಿ ಉಪಸಮಿತಿ ಶಿಫಾರಸ್ಸು: ಎಸ್‌ಎಫ್‌ಐ ಅತ್ಯುಗ್ರಖಂಡನೆ

ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಎಲ್ಲಾ ನೂತನ ಕೋರ್ಸುಗಳನ್ನು 'ಸ್ವಯಂ ಹಣಕಾಸು' ಗೊಳಿಸಬೇಕು ಮತ್ತು ಈಗ ಇರುವ ಎಲ್ಲಾ ಶಿಕ್ಷಣ ಶುಲ್ಕಗಳನ್ನು ದುಪ್ಪಟ್ಟುಗೊಳಿಸಬೇಕೆಂದು ಶಿಫಾರಸ್ಸು ನೀಡಿರುವ, ಅಂತರ ವಿಶ್ವವಿದ್ಯಾಲಯ ಮಂಡಳಿಯ ಉಪಸಮಿತಿಯ ವರದಿಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಕರ್ನಾಟಕ ರಾಜ್ಯ ಸಮಿತಿ ಅತ್ಯುಗ್ರವಾಗಿ ಖಂಡಿಸಿದೆ. ಮತ್ತು ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿ ವೆಂಕಟರಾಮಯ್ಯ ನೇತೃತ್ವದ ಈ ಉಪಸಮಿತಿಯ ಶಿಫಾರಸ್ಸುಗಳು ಅತ್ಯಂತ ಶಿಕ್ಷಣ ವಿರೋಧಿಯಾಗಿದೆ ಎಂದು ಎಸ್‌ಎಫ್‌ಐ ತೀವ್ರವಾಗಿ ವಿರೋಧಿಸಿದೆ.

ಭಾರತದ ಸಾಮಾಜಿಕ-ಆರ್ಥಿಕ ಸಂರಚನೆಯನ್ನು ಕಿಂಚಿತ್ತೂ ಪರಿಗಣಿಸದೆ ಶಿಕ್ಷಣವನ್ನು ಸಂಪೂರ್ಣ ವ್ಯಾಪಾರೀಕರಿಸಿ 'ಉಳ್ಳವರಿಗೆ ಮಾತ್ರ ಶಿಕ್ಷಣ' ಎನ್ನುವ ನೂತನ ಶಿಕ್ಷಣ ನೀತಿಯ ಮುಂದುವರಿಕೆಯೇ ಈ ಪ್ರಯತ್ನವಾಗಿದೆ. ಕೇಂದ್ರ ರಾಜ್ಯ ಸರ್ಕಾರಗಳು ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗಗಳು ಶಿಕ್ಷಣಕ್ಕೆ ನೀಡುವ ಜವಾಬ್ದಾರಿಯಿಂದ ಜಾರಿಕೊಳ್ಳುವ ಹೇಯ ನೀತಿಗಳನ್ನು ಅತ್ಯಂತ ನಗ್ನ ರೂಪದಲ್ಲಿಯೇ ಆರಂಭಿಸಿರುವುದರ ನೇರ ಫಲಿತಾಂಶ ಈ ವರದಿ ಎಂದಿರುವ ಎಸ್‌ಎಫ್‌ಐ ಸಮಾಜ ಹಾಗೂ ಶಿಕ್ಷಣ ರಂಗದ ಮೇಲಿನ ಈ ಹಲ್ಲೆಯನ್ನು ಹಿಮ್ಮೆಟ್ಟಿಸಲು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಈ ವರ್ಷ ಬೃಹತ್ ವಿದ್ಯಾರ್ಥಿ ಆಂದೋಲನವನ್ನು ಆರಂಭಿಸಲಿದೆ ಎಂದು ಎಚ್ಚರಿಸಿದೆ.

ಯೆಲ್ಸಿನ್ ವಿರುದ್ಧ ದೋಷಾರೋಪಣೆಗೆ ಡೂಮಾ ತಯಾರಿ

ಲೋಕಸಂಚಾರ

ಶರತ್ ಚಂದ್ರ

ರಶ್ಯಾದ(ಪಾರ್ಲಿಮೆಂಟು) ಡೂಮಾದ ಕೆಳಮನೆ ಭಾರೀ ಬಹುಮತದಿಂದ (331-5) ಅಧ್ಯಕ್ಷ ಯೆಲ್ಸಿನ್ ವಿರುದ್ಧ ದೋಷಾರೋಪಣೆಯ ನಿರ್ಣಯ ಮಂಜೂರು ಮಾಡಿದೆ. ಈ ನಿರ್ಣಯದೊಂದಿಗೆ ಯೆಲ್ಸಿನ್ ವಿರುದ್ಧ ದೋಷಾರೋಪಣೆಯ ಪ್ರಕ್ರಿಯೆ ಆರಂಭವಾಗಿದೆ. ಈ ನಿರ್ಣಯವನ್ನು ಕಮ್ಯುನಿಸ್ಟ್ ಪಕ್ಷ ಮಂಡಿಸಿತ್ತು. ಈ ನಿರ್ಣಯದ ಪ್ರಕಾರ ಡೂಮಾ ದೋಷಾರೋಪಣೆಯ ಪಟ್ಟಿ ಸಿದ್ಧಪಡಿಸಲು ಆಯೋಗ ಒಂದನ್ನು ನೇಮಿಸುತ್ತದೆ. ಆ ಆಯೋಗ ತಯಾರಿಸಿದ ದೋಷಾರೋಪಣೆ ಪಟ್ಟಿಗೆ ಡೂಮಾದ ಮೂರನೇ ಎರಡರಷ್ಟು ಬಹುಮತ ಬರಬೇಕು. ಈ ನಿರ್ಣಯವನ್ನು ಡೂಮಾದ ಮೇಲ್ಮನೆ ಸಂವೈಧಾನಿಕ ಕೋರ್ಟ್, ಸುಪ್ರೀಂ ಕೋರ್ಟುಗಳು ಅನುಮೋದಿಸಬೇಕು.

1994 ರಿಂದ ಯೆಲ್ಸಿನ್ ಮೇಲೆ ದೋಷಾರೋಪಣೆ ನಿರ್ಣಯ ಮಂಡಿಸಬೇಕೆಂದು ಪ್ರಯತ್ನಿಸುತ್ತಿದ್ದರು. ಈಗ ಅದು ಸಾಧ್ಯವಾಗಿರುವುದು ಪಾರ್ಲಿಮೆಂಟಿನಲ್ಲೂ, ದೇಶದ ಬೀದಿಗಳಲ್ಲೂ ಯೆಲ್ಸಿನ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗುತ್ತಿರುವುದು ಕಾರಣವಾಗಿದೆ. ರಶ್ಯಾದ ಅಧಿಕಾರಶಾಹಿ ಸಂವಿಧಾನದಲ್ಲಿ ಅಧ್ಯಕ್ಷರ ದೋಷಾರೋಪಣೆಯ ಕ್ರಮಗಳು ಸ್ಪಷ್ಟವಾಗಿಲ್ಲ. ಇದರಿಂದಾಗಿ ದೋಷಾರೋಪಣೆ ಮಾಡಿ ಅಧ್ಯಕ್ಷರನ್ನು ತೆಗೆಯುವುದು ಅಷ್ಟು ಸುಲಭವಲ್ಲ. ಆದರೂ ದೋಷಾರೋಪಣೆಯ ಕ್ರಮ, ಅದಕ್ಕಾಗಿ ಹೋರಾಟ ರಾಜಕೀಯ ಹೋರಾಟದ ಅಂಗವಾಗಲಿದೆ.

ಈ ನಡುವೆ ಯೆಲ್ಸಿನ್ನರ ಹೊಸ ಮುಖಗಳ 'ಸರ್ಕಾರ' ಮುಖವೇ ಇಲ್ಲದ ಸರ್ಕಾರವಾಗಿದೆ. ಅದೇ 80 ದಿನ ದುರಂತದ ಆರ್ಥಿಕ, ಸಾಮಾಜಿಕ ನೀತಿಗಳನ್ನು ಅನುಸರಿಸುತ್ತಾ ರಶ್ಯಾವನ್ನು ಕೂಪಕ್ಕೆ ತಳ್ಳುತ್ತಿದೆ. ಈಗ ಅದರ ಮುಂದಿರುವ ಗಣಿಕಾರರ ಮುಷ್ಕರ, 60 ಶತ ಕೋಟಿ ಡಾಲರುಗಳ ಬಾಕಿ ಸಂಬಳ, ಪಾವತಿಯ ಸಮಸ್ಯೆ ಬಗ್ಗೆ ಏನೂ ಮಾಡಲಾಗದೆ ಕೈ ಚೆಲ್ಲಿ ಕೂತಿದೆ.

ಝಾಂಬಿಯಾ–ಕೌಂಡಾ ಬಿಡುಗಡೆ

ಝಾಂಬಿಯಾದ ಸರ್ವಾಧಿಕಾರಿ ಅಧ್ಯಕ್ಷ ಫ್ರೆಡ್ರಿಕ್ ಚಿಲುಬಾರ ಸರ್ಕಾರ ಕೊನೆಗೂ ಐದು ತಿಂಗಳ ಗೃಹಬಂಧನದ ನಂತರ ಮಾಜಿ ಅಧ್ಯಕ್ಷ ಹಾಗೂ ಆಫ್ರಿಕಾದ ಹಿರಿಯ ಮುತ್ಸದ್ದಿ ಕೆನೆಥ್ ಕೌಂಡಾರನ್ನು ಬಿಡುಗಡೆ ಮಾಡಿದೆ. ಕೌಂಡಾರ ಮೇಲೆ ಝಾಂಬಿಯಾದಲ್ಲಿ ಅಕ್ಟೋಬರ್ 97 ರಲ್ಲಿ ಕ್ಷಿಪ್ರಕ್ರಾಂತಿಗೆ ನಡೆದ ಯತ್ನದ ಹಿಂದೆ ಪಿತೂರಿಯಲ್ಲಿ ಭಾಗಿಯಾಗಿದ್ದಾರೆಂದು ಆಪಾದಿಸಲಾಗಿದೆ. ಝಾಂಬಿಯಾ ಮಾತ್ರವಲ್ಲ ಆಫ್ರಿಕಾದಲ್ಲೇ ಹಿರಿಯ ಗೌರವಯುತ ಮುತ್ಸದ್ದಿ ಕೌಂಡಾರ ವಿರುದ್ಧ ಆಪಾದನೆಯನ್ನು ಯಾರೂ ಗಂಭೀರವಾಗಿ ತಗೊಂಡಿರಲಿಲ್ಲ. ಅಧ್ಯಕ್ಷ ಚಿಲುಬಾರ ಹೆಚ್ಚೆಚ್ಚು ಭ್ರಷ್ಟ, ಸರ್ವಾಧಿಕಾರಿಯಾಗುತ್ತಿರುವ ಸರ್ಕಾರವನ್ನ ತನ್ನನ್ನು ರಕ್ಷಿಸಿಕೊಳ್ಳಲು ಮಾಡುತ್ತಿರುವ ಹತಾಶೆಯ ಪ್ರಯತ್ನ ಎಂದು ಪರಿಗಣಿಸಲಾಗಿತ್ತು. ಮಾಜಿ ಅಧ್ಯಕ್ಷ ಕೌಂಡಾ ಹಾಗೂ ಅವರ UNIP ಪಕ್ಷ ಪುನಃ ಜನಪ್ರಿಯವಾಗುತ್ತಿರುವುದನ್ನು ಕಂಡ ಚಿಲುಬಾ ಕೌಂಡಾರನ್ನು ರಾಜಕೀಯದಿಂದ ಹೊರಗಿಡಲು ಇನ್ನು ಹಲವು ಪ್ರಯತ್ನಗಳನ್ನು ಮಾಡಿ ವಿಫಲರಾಗಿದ್ದರು: ಕೌಂಡಾ ಝಾಂಬಿಯಾದಲ್ಲಿ ಹುಟ್ಟಿರದೆ, ನೆರೆಯ ಮಲವಿಯಲ್ಲಿ ಹುಟ್ಟಿದ್ದರಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅನರ್ಹರು ಎಂದು ಸರ್ಕಾರ ನಡೆಸಿದ ಪ್ರಯತ್ನವನ್ನು, ಕೌಂಡಾ ಕೋರ್ಟಿನ ಮೂಲಕ ಎದುರಿಸಿ ಸೋಲಿಸಿದರು. ಅವರು ವಿದೇಶಕ್ಕೆ ಪ್ರವಾಸ ಹೋಗಿದ್ದಾಗ ಅಕ್ಟೋಬರ್ 97 ರ ಕ್ಷಿಪ್ರಕ್ರಾಂತಿಯ ಪ್ರಯತ್ನ ನಡೆದಿದ್ದು, ಆ ಬಗ್ಗೆ ಪಿತೂರಿಯ ಆಪಾದನೆ ಹೊರಿಸುವ ಉದ್ದೇಶ, ಕೌಂಡಾ ದೇಶಕ್ಕೆ ವಾಪಸಾಗದಂತೆ.

ಆದರೂ ಅಧಿಕಾರಶಾಹಿ ಸರ್ಕಾರದ ಯಾವ ಆಟವೂ ಸಾಗುತ್ತಿಲ್ಲ.

ಕೊಸೊವೊ ಘರ್ಷಣೆ ತೀವ್ರ ನಾಟೋ ಮಿಲಿಟರಿ ಹಸ್ತಕ್ಷೇಪ ವಿಫಲ

ಯುಗೋಸ್ಲಾವಿಯಾದ ಜನಾಂಗೀಯ ಕಲಹದ ದಾರುಣ ಕಥೆ ಮುಂದುವರಿದು ಈಗ ಉಳಿದಿರುವ ಯುಗೋಸ್ಲಾವಿಯದಿಂದ ಪ್ರತ್ಯೇಕವಾಗಲು ಹೋರಾಡುತ್ತಿರುವ ಕೊಸೊವೊ ಪ್ರಾಂತ್ಯದ ಅಲ್ಬೇನಿಯನ್ ಅಲ್ಪಸಂಖ್ಯಾತರ ಮೇಲೆ ಮಿಲಿಟರಿ ಕಾರ್ಯಾಚರಣೆಗೆ ತೊಡಗಿದೆ. ಇದನ್ನು ನಿಲ್ಲಿಸಲು ಎಚ್ಚರಿಸಿದ್ದ ನಾಟೋದ ನಿರ್ಣಯವನ್ನು ಯುಗೋಸ್ಲಾವಿಯನ್ ಸರ್ಕಾರ ತಿರಸ್ಕರಿಸಿದೆ. ಇದಕ್ಕೆ ಪ್ರತಿಯಾಗಿ ನಾಟೋ ಯುಗೋಸ್ಲಾವಿಯ ಮೇಲೆ ವಿಮಾನಗಳ ಹಾರಾಟಕ್ಕೆ ಆಜ್ಞೆ ಮಾಡಿದೆ. ಆದರೆ ನಾಟೋ ಮಿಲಿಟರಿ ತೋಳೇರಿಸುವ ಕ್ರಮದಿಂದ ಕೊಸೊವೊ ಘರ್ಷಣೆ ಮೇಲೆ ಏನೂ ಪರಿಣಾಮವಾಗಿಲ್ಲ. ರಶ್ಯಾ ನಾಟೋದ ಈ ಏಕಪಕ್ಷದ ಕ್ರಮವನ್ನು ಟೀಕಿಸಿದೆ. ಇಂತಹ ಮಿಲಿಟರಿ ಕ್ರಮಗಳನ್ನು ವಿಶ್ವಸಂಸ್ಥೆ ಭದ್ರತಾ ಸಮಿತಿ ಮಾತ್ರ ತೆಗೆದುಕೊಳ್ಳಬೇಕೆಂದು ನಾಟೋವನ್ನು ಎಚ್ಚರಿಸಿದೆ.

ನಾಟೋ ಹಾಗೂ ಸಾಮ್ರಾಜ್ಯಶಾಹಿ ಯುಗೋಸ್ಲಾವಿಯಾದ ಜನಾಂಗೀಯ ಸಮಸ್ಯೆಯನ್ನು ಹುಟ್ಟು ಹಾಕಿದ್ದು, ಅತ್ಯಂತ ಶಾಂತಿ ಹಾಗೂ ಸಮೃದ್ಧಿಯಾಗಿದ್ದ ಯುಗೋಸ್ಲಾವಿಯದಲ್ಲಿ ಸಮಾಜವಾದದ ವಿರುದ್ಧ ಹೋರಾಟದಲ್ಲಿ ಹಲವಾರು ಜನಾಂಗೀಯ ಕಲಹ ಉಂಟುಮಾಡುವ ಸಂಘಟನೆಗಳಿಗೆ ಕುಮ್ಮಕ್ಕು ಕೊಡುತ್ತಾ ಬಂದಿದೆ. ಎರಡನೇ ಮಹಾಯುದ್ಧದ ನಂತರ ಮಾರ್ಷಲ್ ಟಿಟೋರ ನಾಯಕತ್ವದಲ್ಲಿ ಬಂದಿದ್ದ ಸಮಾಜವಾದಿ ವ್ಯವಸ್ಥೆ ಶಿಥಿಲಗೊಳಿಸಲು ಈ ಜನಾಂಗೀಯ ಸಮಸ್ಯೆ ಬಳಸಲಾಗಿತ್ತು. ಮಾರ್ಷಲ್ ಟಿಟೋರ ನಿಧನದ ನಂತರ ಈ ಜನಾಂಗೀಯ ಸಮಸ್ಯೆ ಸಾಮ್ರಾಜ್ಯಶಾಹಿ ಮಧ್ಯಪ್ರವೇಶದಿಂದ ಉಲ್ಬಣಗೊಂಡು ಆತಂಕಕಾರಿ ಮಟ್ಟ ಮುಟ್ಟಿದೆ. ಹಿಂದೆ ಜನಾಂಗೀಯ ವೈವಿಧ್ಯತೆಗೆ, ಸೌಹಾರ್ದತೆಗೆ ಹೆಸರಾಗಿದ್ದ ಯುಗೋಸ್ಲಾವಿಯಾ ರಣಾಂಗಣವಾಗಿದೆ. ಯುಗೋಸ್ಲಾವಿಯಾದ ರಕ್ಷಕರಂತೆ ಪೋಸು ಕೊಡುತ್ತಿರುವ ಸಾಮ್ರಾಜ್ಯಶಾಹಿಗಳೇ ಇದಕ್ಕೆ ಮುಖ್ಯ ಕಾರಣ.

ಅಂಗೋಲದ ಯುನಿಟಾ ಮೇಲೆ ದಿಗ್ಬಂಧನ

ಅಂಗೋಲದಲ್ಲಿ ರಾಷ್ಟ್ರೀಯ ಸರ್ಕಾರದ ವಿರುದ್ಧ ಇನ್ನೂ ಗೆರಿಲ್ಲಾ ಹೋರಾಟ ನಡೆಸುತ್ತಿರುವ UNITA(ಯುನಿಟಾ)ದ ಮೇಲೆ ಜೂನ್ 25ರ ಒಳಗೆ 1994 ರ ಲುಸಾಕಾ ಒಪ್ಪಂದ ಪಾಲಿಸದಿದ್ದರೆ, ದಿಗ್ಬಂಧ ಹಾಕಲು ವಿಶ್ವ ಸಂಸ್ಥೆ ಭದ್ರತಾ ಸಮಿತಿ ನಿರ್ಣಯಿಸಿದೆ. ಈ ದಿಗ್ಬಂಧನದ ಪ್ರಕಾರ, ಯುನಿಟಾದ ನಾಯಕರ ಆಸ್ತಿ, ಬ್ಯಾಂಕ್ ಖಾತೆಗಳು, ಹಾಗೂ ಆ ಸಂಘಟನೆ ತೊಡಗಿರುವ ವಜ್ರದ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿದೆ.

ಯುನಿಟಾ(Union for Total Independence of Angola) 70 ರ ದಶಕದಲ್ಲಿ ಅಂದೋಲವನ್ನು ವಿದೇಶಿ ದಾಸ್ಯದಿಂದ ವಿವೇಚನೆಯ ರಾಷ್ಟ್ರೀಯ ಹೋರಾಟದಲ್ಲಿ ತೊಡಗಿದ್ದ ಮುಖ್ಯ ಸಂಘಟನೆಯ ಬಲ ಒಡೆಯಲು ಅಮೆರಿಕನ್ ಸಾಮ್ರಾಜ್ಯಶಾಹಿ ಹುಟ್ಟು ಹಾಕಿ ಬೆಂಬಲ ಕೊಡುತ್ತಿದ್ದ ಸಂಘಟನೆ. 70 ರ ದಶಕದಲ್ಲಿ ಆಗಿನ ಸೋವಿಯೆತ್ ಯೂನಿಯನ್ ವಸಾಹತುಶಾಹಿ ಕೊನೆಗೊಳಿಸಲು ಹಲವಾರು ದೇಶಗಳಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ನೆರವು ನೀಡುತ್ತಿತ್ತು. ಈ ದೇಶಗಳಲ್ಲಿ 'ಸೋವಿಯತ್ ಪ್ರಭಾವ' ತಡೆಯುವ ಹೆಸರಲ್ಲಿ, ನಿಜವಾಗಿಯೂ ವಸಾಹತುಶಾಹಿ ಉಳಿಸಿಕೊಳ್ಳಲು ಅಮೆರಿಕಾ ಯುನಿಟಾದಂತಹ ಸಂಘಟನೆಗಳನ್ನು ಹುಟ್ಟುಹಾಕಿ ನೆರವು ಕೊಡುತ್ತಿತ್ತು. ವಸಾಹತುಶಾಹಿ ವಿರುದ್ಧ ಹೋರಾಟ ಮುಗಿದು ದೇಶ ಸ್ವತಂತ್ರವಾದರೂ, ಇಂತಹ ಸಂಘಟನೆಗಳು ಮುಖ್ಯ ರಾಷ್ಟ್ರೀಯ ಸಂಘಟನೆಗಳು ದೇಶ ಕಟ್ಟುವ ಕೆಲಸದಲ್ಲಿ ತೊಡಗದಂತೆ, ಹಿಂಸಾತ್ಮಕ ಗೆರಿಲ್ಲಾ ಕ್ರಮಗಳಿಂದ ತೊಡಕು ಉಂಟು ಮಾಡುತ್ತಿದ್ದವು. ಅಂಗೋಲ ಪೋರ್ಚುಗೀಸರಿಂದ ಸ್ವಾತಂತ್ರ್ಯ ಪಡೆದ ನಂತರ16 ವರ್ಷಗಳವರೆಗೂ ಸಶಸ್ತ್ರ ಹೋರಾಟ ಮುಂದುವರಿಸಿದ್ದವು. ಇದಕ್ಕೆ ಅಮೆರಿಕಾದ ಗುಪ್ತ ಬೆಂಬಲ ಕುಮ್ಮಕ್ಕು ಇದೆ ಎಂದು ಬೇರೆ ಹೇಳಬೇಕಾಗಿಲ್ಲ. ಈಗಲೂ ದೇಶಪ್ರೇಮಿ ಸ್ವತಂತ್ರ ನಿಲುವು ಹೊಂದಿರುವ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಯಾವುದೇ ದೇಶದಲ್ಲಿ ನೆಲೆಯೂರದಂತೆ ಮಾಡಲು, ಅಮೆರಿಕಾ ಏನನ್ನೂ ಮಾಡಲು ಹೇಸುವುದಿಲ್ಲ ಎಂಬುದಕ್ಕೆ ಇದು ಉದಾಹರಣೆ.

16 ವರ್ಷಗಳ ಗೆರಿಲ್ಲಾ ಯುದ್ಧದ ನಂತರ ವಿಶ್ವಸಂಸ್ಥೆಯ ಪ್ರಯತ್ನದಿಂದ ಲೂಸಾಕಾ ಒಪ್ಪಂದವಾಯಿತು. ಇದರ ಪ್ರಕಾರ ಯುನಿಟಾ ಗೆರಿಲ್ಲಾ ಯುದ್ಧ ಕೊನೆಗೊಳಿಸಿ, ರಾಷ್ಟ್ರೀಯ ಸರ್ಕಾರ ಸೇರಿ, ತನ್ನ ವಶದಲ್ಲಿರುವ ಪ್ರದೇಶಗಳನ್ನು ವಾಪಸು ಮಾಡಬೇಕಾಗಿತ್ತು. ಯುನಿಟಾ ರಾಷ್ಟ್ರೀಯ ಸರ್ಕಾರದಲ್ಲಿ ಭಾಗವಹಿಸುತ್ತಿರುವಂತೆ, ತನ್ನ ಹತೋಟಿಯಲ್ಲಿರುವ ಪ್ರದೇಶಗಳ ಮೇಲೆ ಅಧಿಕಾರ ಮುಂದುವರೆಸುತ್ತಿದ್ದು, ತನ್ನ ಗೆರಿಲ್ಲಾ ಪಡೆಗಳನ್ನು ನಿಶ್ಯಸ್ತ್ರಗೊಳಿಸಿಲ್ಲ. ಹಿಂಸಾಚಾರ ನಿಲ್ಲಿಸಿಲ್ಲ. ಒಟ್ಟಾರೆಯಾಗಿ ಲೂಸಾಕಾ ಒಪ್ಪಂದ ಜಾರಿಯಾಗಿಲ್ಲ. ಇದನ್ನು ಜಾರಿಗೆ ತರಲು ವಿಶ್ವಸಂಸ್ಥೆ ಈ ದಿಗ್ಬಂಧನ ಹೊರಿಸಬೇಕಾಗಿ ಬಂದಿದೆ.

ಚಿತ್ತಗಾಂಗ್–ಶಾಂತಿ ಒಪ್ಪಂದದ ವಿರುದ್ಧ ಸಾರ್ವತ್ರಿಕ ಮುಷ್ಕರ

ಬಾಂಗ್ಲಾದೇಶ ಸರ್ಕಾರ ಮಾಡಿಕೊಂಡಿರುವ ಚಿತ್ತಗಾಂಗ್ ಶಾಂತಿ ಒಪ್ಪಂದದ ವಿರುದ್ಧ ಬೇಗಂ ಖಲೀದಾ ಜಿಯಾ ರ ನಾಯಕತ್ವದ BNP ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿತ್ತು. ಈ ಒಪ್ಪಂದ ಸಂವಿಧಾನ- ವಿರೋಧಿ, ದೇಶ-ವಿರೋಧಿ ಎಂದು ಸಾರಿ ಇತ್ತೀಚೆಗೆ ಬೇಗಂ ಜಿಯಾರ BNP ಇತರ ಬಲಪಂಥೀಯ ವಿರೋಧ ಪಕ್ಷಗಳೊಂದಿಗೆ 'ಜಾಥಾ' ನಡೆಸಿತ್ತು. 'ಜಾಥಾ'ದ ಮೇಲೆ ದಬ್ಬಾಳಿಕೆ ನಡೆಯಿತು ಎಂದು ಈ ಸಾರ್ವತ್ರಿಕ ಮುಷ್ಕರವಂತೆ.

ಬೇಗಂ ಹಸಿನಾರ ಎರಡು ವರ್ಷಗಳ ಸರ್ಕಾರವನ್ನು ಉರುಳಿಸಲು ಬೇಗಂ ಜಿಯಾ ಸಿಕ್ಕಿದ ವಿಷಯಗಳನ್ನೆಲ್ಲಾ ದೊಡ್ಡದು ಮಾಡುತ್ತಿದ್ದಾರೆ. ಜವಾಬ್ದಾರಿಯುತ ವಿರೋಧ ಪಕ್ಷದ ಪಾತ್ರ ವಹಿಸುತ್ತಿಲ್ಲ. ಆರು ತಿಂಗಳುಗಳಿಂದ BNP ಯ ಪಾರ್ಲಿಮೆಂಟು ಸದಸ್ಯರು ಸದನಕ್ಕೆ ಬಹಿಷ್ಕಾರ ಹಾಕಿದ್ದಾರೆ. ಈಗ BNP ಪಕ್ಷದೊಳಗೆ ಸದನದ ಬಹಿಷ್ಕಾರ ಮುಂದುವರಿಸಬೇಕೆ ಬೇಡವೇ ಎನ್ನುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಉಂಟಾಗಿದೆ.

150 ಕೋಟಿ ಜನಗಳ ಭದ್ರತೆಗೆ ಅಪಾಯವೊಡ್ಡಿರುವ ಪರಮಾಣು ಪೈಪೋಟಿ

ಪಾಕಿಸ್ತಾನದ ಎಡಪಕ್ಷಗಳ ಖಂಡನೆ

ಭಾರತದಲ್ಲಿ ಸರಕಾರ ಪೋಖ್ರಾನ್ 5 ಸ್ಫೋಟಗಳ ಬೆನ್ನ ಹಿಂದೆಯೇ ವಿದೇಶಿಯರಿಗೆ ಬೇಸರವಾಗದಿರಲೆಂದು ಮೂರು ವಿದೇಶಿ ಕಂಪನಿಗಳಿಗೆ ಪ್ರತಿಗ್ಯಾರಂಟಿ ನೀಡುವ ತರಾತುರಿಯ ನಿರ್ಣಯ ಕೈಗೊಂಡಿತು. ಪೆಟ್ರೋಲಿಯಂ, ಗಣಿಗಾರಿಕೆ ಕಂಪನಿಗಳಿಗೆ ಕಾಂಟ್ರಾಕ್ಟ್‌ಗಳ ಸುಗ್ಗಿಯೋ ಸುಗ್ಗಿ. ಜಪಾನಿ ಮೋಟಾರು ಕಂಪನಿ ಸುಝುಕಿಯ ಮುಂದೆ ಸರಕಾರ ಶರಣಾಯಿತು. ಅಲ್ಲಿ ಪಾಕಿಸ್ತಾನದಲ್ಲಿ ಛಗಾಯ್‌ನಲ್ಲಿ 6 ಸ್ಫೋಟಗಳ ಬೆನ್ನ ಹಿಂದೆಯೇ ಅಲ್ಲಿಯ ಆಳರಸರು ತುರ್ತುಪರಿಸ್ಥಿತಿ ಹೇರಿದರು. ದುಡಿಯುವ ಜನಗಳ ಹಕ್ಕುಗಳ ಮೊಟಕಿನ ಸಂಕೇತವಾಗಿ ಮೇ ದಿನದ ರಾಷ್ಟ್ರೀಯ ರಜೆಯನ್ನು ಸ್ವಾವಲಂಬನೆಯ ಹೆಸರಲ್ಲಿ ರದ್ದು ಮಾಡಿದರು. ಇದನ್ನು ಭಾರತದಂತೆ ಪಾಕಿಸ್ತಾನದಲ್ಲೂ ಎಡಪಂಥೀಯರು ಬಲವಾಗಿ ಖಂಡಿಸಿದ್ದಾರೆ. ಪಾಕಿಸ್ತಾನ ಲೇಬರ್ ಪಕ್ಷ, ಪಾಕಿಸ್ತಾನ ಸಮಾಜವಾದಿ ಪಕ್ಷ, ಪಾಕಿಸ್ತಾನ ಅವಾಮೀ ಜಮ್ಹೂರಿ ಪಾರ್ಟಿ ಹಾಗೂ ಕಮ್ಯುನಿಸ್ಟ್ ಮಜ್ದೂರ್ ಕಿಸಾನ್ ಪಾರ್ಟಿ ನೀಡಿರುವ ಜಂಟಿ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ಭಾರತ ಮತ್ತು ಪಾಕಿಸ್ತಾನದ ಆಳುವ ವರ್ಗಗಳು ಪರಮಾಣು ಸ್ಫೋಟ ನಡೆಸಿವೆ. ಪಾಕಿಸ್ತಾನದಲ್ಲಿ ಆಳುವ ವರ್ಗಗಳು ಪರಮಾಣು ಸ್ಫೋಟದ ನಂತರ ಸ್ವಾವಲಂಬನೆಯ ಹೆಸರಲ್ಲಿ ಕಾರ್ಮಿಕರ ಮೇಲೆ ವರ್ಗ ಸಮರ ಹರಿಯಬಿಟ್ಟಿವೆ, ರಾಷ್ಟ್ರೀಯ ಮೇ ದಿನದ ರಜೆಯನ್ನು ರದ್ದು ಮಾಡಿವೆ.

ಭಾರತ ಮತ್ತು ಪಾಕಿಸ್ತಾನದ ಆಳರಸರ ಹುಚ್ಚು ಪರಮಾಣು ಪೈಪೋಟಿಯಿಂದಾಗಿ ಉಪಖಂಡದ150 ಕೋಟಿಗೂ ಹೆಚ್ಚು ಜನರ ಭದ್ರತೆ ಅಪಾಯಕ್ಕೊಳಗಾಗಿದೆ. ಇದರ ಫಲವಾಗಿ ನಮ್ಮೆರಡೂ, ದೇಶಗಳ ಬಡ ಜನಸಮೂಹಗಳು ಹೊಸ ಮಟ್ಟದ ಬಡತನ, ನಿರುದ್ಯೋಗ, ಬಡತನ ಮತ್ತು ಸಾಮಾಜಿಕ ಅವನತಿಯ ಧಾಳಿಗೆ ಒಳಗಾಗಿದ್ದಾರೆ. ಇದೂ ಸಾಲದೆಂಬಂತೆ ಪರಮಾಣು ಅಸ್ತ್ರಗಳು ಭಾರತದಲ್ಲಿ ಧಾರ್ಮಿಕ ಫ್ಯಾಸಿಸ್ಟ್ ಮತಾಂಧರ ಕೈಯಲ್ಲಿದ್ದರೆ ಪಾಕಿಸ್ತಾನದಲ್ಲಿ ಧಾರ್ಮಿಕ ಒತ್ತಡವಿರುವ ಬಂಡವಾಳಶಾಹಿಗಳ ಕೈಯಲ್ಲಿದೆ. ಈ ಇಬ್ಬರೂ ತಮ್ಮ ಆಳ್ವಿಕೆಗೆ, ಪ್ರತಿಷ್ಠೆಗೆ, ಅವರಿಟ್ಟುಕೊಂಡ ರಾಷ್ಟ್ರೀಯ, ಮತೀಯ ಆದ್ಯತೆಗಳಿಗೆ ಅಪಾಯ ಬಂದರೆ ಈ ಅಪಾಯಕಾರಿ ಅಸ್ತ್ರಗಳನ್ನು ಬಳಸುವ ಯಾವ ಅವಕಾಶವನ್ನೂ ಬಿಡುವಂತವರಲ್ಲ. ಫ್ಯಾಸಿಸ್ಟರು ಮತ್ತು ಬಂಡವಾಳಶಾಹಿಗಳು ತಮ್ಮ ಮಾರುಕಟ್ಟೆಗಳ ರಕ್ಷಣೆಗಾಗಿ, ಹೊಸ ಮಾರುಕಟ್ಟೆಗಳನ್ನು ಪಡೆಯಲಿಕ್ಕಾಗಿ ಎರಡು ಅಂತರ್‌ರಾಷ್ಟ್ರೀಯ ಯುದ್ಧಗಳನ್ನು ನಡೆಸಿದ್ದಾರೆ. ಈ ಅಪಾಯಕಾರಿ ಅಸ್ತ್ರವನ್ನು ಯಾವುದೇ ಸಮರ್ಥನೆಯಿಲ್ಲದೆ ಜಪಾನಿನ ಮುಗ್ಧ ಜನರ ಮೇಲೆ ಪರೀಕ್ಷಿಸಿದ್ದಾರೆ.

ವಿಶ್ವಬ್ಯಾಂಕ್ ಐ.ಎಂ.ಎಫ್. ಗಳ ನೀತಿಗಳಿಂದಾಗಿ ದಕ್ಷಿಣ ಏಶ್ಯಾ ಆಳವಾದ ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಆದರೂ ದಕ್ಷಿಣ ಏಶ್ಯಾದ ಆಳುವ ವರ್ಗಗಳು ಕಳೆದ ಐವತ್ತು ವರ್ಷಗಳಲ್ಲಿ ಈ ಪ್ರದೇಶದ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಅಪಾಯವೊಡ್ಡಿದ ವಿಶ್ವ ವ್ಯಾಪಾರ ಸಂಸ್ಥೆಯವರ ವ್ಯಾಪಾರ ಮತ್ತು ಆರ್ಥಿಕ ಒಪ್ಪಂದಗಳನ್ನು ಸಮರ್ಥಿಸಿಕೊಳ್ಳುತ್ತಿವೆ. ಈ ಒಪ್ಪಂದಗಳಿಂದಾಗಿ ಸ್ಥಳೀಯ ಮಾರುಕಟ್ಟೆ ಸಂಪೂರ್ಣವಾಗಿ ಅಂತರ್‌ರಾಷ್ಟ್ರೀಯ ಗುತ್ತೇದಾರಿಗಳ ಕೈಯಲ್ಲಿದೆ.

ಇದರ ವಿರುದ್ಧ ಹೋರಾಡುವ ಬದಲು ನಮ್ಮ ಆಳರಸರು ಪರಮಾಣು ಕುರುಡುತನವನ್ನು ಪ್ರೋತ್ಸಾಹಿಸಿ ಪರೋಕ್ಷವಾಗಿ ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರಭಾವವನ್ನು ಪ್ರೋತ್ಸಾಹಿಸುತ್ತಿದ್ದಾರೆ. ಅವರು ಜನಸಮೂಹಗಳ ಮೇಲೆ ತಮ್ಮ ಆರ್ಥಿಕ ಹಿಡಿತವನ್ನು ಬಲಗೊಳಿಸಿ ಅವರ ಆರ್ಥಿಕ ಶೋಷಣೆಯನ್ನು ಹೆಚ್ಚಿಸಬಯಸುತ್ತಿದ್ದಾರೆ.

ಪಾಕಿಸ್ತಾನೀ ಆಳರಸರು ಪರಮಾಣು ಸ್ಫೋಟ ನಡೆಸಲು ನೀಡಿರುವ ಏಕೈಕ ಸಮರ್ಥನೆಯೆಂದರೆ ದೇಶದ ರಕ್ಷಣೆ. ಸೋವಿಯತ್ ಒಕ್ಕೂಟಕ್ಕೆ ತನ್ನೆಲ್ಲಾ ಶಸ್ತ್ರಾಸ್ತ್ರಗಳಿಂದಲೂ ತನ್ನನ್ನು ಉಳಿಸಿಕೊಳ್ಳಲಾಗಲಿಲ್ಲ ಎಂಬುದು ಅವರಿಗೆ ತಿಳಿದಿರಬೇಕಿತ್ತು. ಜನಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿರತೆಯಿಂದ ಮಾತ್ರವೇ ದೇಶದ ರಕ್ಷಣೆಯ ಭರವಸೆ ಸಾಧ್ಯ, ಶಸ್ತ್ರಾಸ್ತ್ರಗಳಿಂದಲ್ಲ.

78% ಕ್ಕಿಂತಲೂ ಹೆಚ್ಚು ಜನ ಬಡತನದ ರೇಖೆಯ ಕೆಳಗೆ ಬದುಕುತ್ತಿರುವ ಈ ಪ್ರದೇಶದಲ್ಲಿ ಪರಮಾಣು ಅಸ್ತ್ರಗಳ ಈ ಹುಚ್ಚು ಸ್ಪರ್ಧೆಯಿಂದಾಗಿ ಎರಡೂ ದೇಶಗಳ ಜನ ಇನ್ನಷ್ಟು ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಭಾರತೀಯ ಸರಕಾರ ತನ್ನ ರಕ್ಷಣಾ ಬಜೆಟ್ಟನ್ನು 14% ರಷ್ಟು ಹೆಚ್ಚಿಸಿದೆ. ಪಾಕಿಸ್ತಾನ ಸರಕಾರ ತುರ್ತು ಪರಿಸ್ಥಿತಿ ಘೋಷಿಸಿ ಜನಸಮೂಹಗಳು ಹೊಂದಿದ್ದ ನಾಗರೀಕ ಹಕ್ಕುಗಳನ್ನು ಹಿಂತೆಗೆದುಕೊಂಡಿದೆ. ಜನಗಳ ಮೇಲೆ ಇನ್ನಷ್ಟು ಹೊರೆ ಹೇರುವ ಆರ್ಥಿಕ ಕ್ರಮಗಳನ್ನು ಅದು ಕೈಗೊಳ್ಳಲಿದೆ. ಇವುಗಳಲ್ಲಿ ಕಾರ್ಮಿಕರ ವೇತನ ಕಡಿತದ ಕ್ರಮವೂ ಸೇರಿದೆ.

ಪಾಕಿಸ್ತಾನೀ ಸರಕಾರ ಕೈಗೊಂಡ ಪ್ರಮುಖ ಸರ್ವಾಧಿಕಾರಿ ಕ್ರಮವೆಂದರೆ ರಾಷ್ಟ್ರೀಯ ಮೇ ದಿನದ ರಜೆಯನ್ನು ರದ್ದು ಮಾಡುವ ಪ್ರಕಟಣೆ. ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಖರ್ಚಿನಲ್ಲಿ ಕಡಿತದ ಉದ್ದೇಶವೆಂದರೆ ಕಾರ್ಮಿಕರ ಕೂಲಿಗಳನ್ನು, ಅವರಿಗೆ ಸಿಗುತ್ತಿದ್ದ ರಿಯಾಯ್ತಿಗಳನ್ನು ಕಡಿತಗೊಳಿಸುವುದು.

ನಾವು ಪಾಕಿಸ್ತಾನ ಮತ್ತು ಭಾರತದ ಆಳರಸರ ಪರಮಾಣು ಸ್ಫೋಟಗಳನ್ನು ಖಂಡಿಸುತ್ತೇವೆ. ತಕ್ಷಣ ತುರ್ತು ಪರಿಸ್ಥಿತಿಯನ್ನು ವಾಪಸು ಪಡೆಯಬೇಕು ಎಂದೂ ಆಗ್ರಹಿಸುತ್ತೇವೆ. ಕಾಶ್ಮೀರಿ ಜನಸಮೂಹಗಳ ಸ್ವಯಂ ನಿರ್ಧಾರದ ಹಕ್ಕನ್ನು ಒಪ್ಪಿಕೊಂಡು ಭಾರತ ಮತ್ತು ಪಾಕಿಸ್ತಾನ ಮೇಜಿನ ಸುತ್ತ ಕೂತು ಕಾಶ್ಮೀರ ಸಮಸ್ಯೆಗೆ ಒಂದು ಪರಿಹಾರವನ್ನು ವಿಕಾಸಗೊಳಿಸಬೇಕು, ಮಿಲಿಟರಿ ಖರ್ಚಿನಲ್ಲಿ 50% ಕಡಿತ ಮಾಡಬೇಕು ಎಂದು ನಾವು ಆಗ್ರಹಿಸುತ್ತೇವೆ.

ಭಾರತ ಮತ್ತು ಪಾಕಿಸ್ತಾನ ಪರಸ್ಪರ ಆಕ್ರಮಣ ಮಾಡುವುದಿಲ್ಲವೆಂಬ ಶಾಂತಿ ಸಂಧಿಗೆ ಸಹಿಹಾಕಬೇಕು ಎಂದು ನಾವು ಒತ್ತಾಯಿಸುತ್ತೇವೆ. ಅಂತರ್‌ರಾಷ್ಟ್ರೀಯವಾಗಿ ಪರಮಾಣು ಮತ್ತು ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸಬೇಕು ಎಂದೂ ನಾವು ಆಗ್ರಹಿಸುತ್ತೇವೆ. ಪಾಕಿಸ್ತಾನದಲ್ಲಿ ತಕ್ಷಣ ತುರ್ತು ಪರಿಸ್ಥಿತಿಯನ್ನು ವಾಪಸು ಪಡೆದು ಮೇ ದಿನದಂದು ರಾಷ್ಟ್ರೀಯ ರಜಾದಿನವನ್ನು ಘೋಷಿಸಬೇಕು ಎಂದು ನಾವು ಆಗ್ರಹಿಸುತ್ತೇವೆ.

ಈ ಹೇಳಿಕೆಗೆ ಪಾಕಿಸ್ತಾನದ ಎಡ ಮೈತ್ರಿಕೂಟದ ಪರವಾಗಿ ಸಹಿಹಾಕಿದವರೆಂದರೆ ಕಾಂ. ಶೋಏಬ್ ಭಟ್ಟಿ, ಕಾಂ. ಫರೂಕ್ ತಾರೀಕ್, ಕಾ. ಸಿ.ಆರ್. ಅಸ್ಲಾಂ ಮತ್ತು ಕಾಂ. ಮಲ್ಲಿಕ್ ಅಸ್ಲಾಂ.

ಮತ್ತೊಮ್ಮೆ ಕಾನೂನನ್ನು ಬುಡಮೇಲು ಮಾಡಲು ಸಂಘ ಪರಿವಾರ ಸಿದ್ಧವಾಗುತ್ತಿದೆ



ಇದು ಜೂನ್ 13 ರಂದು ಅಯೋಧ್ಯೆಗೆ ಭೇಟಿ ನೀಡಿ ಅಲ್ಲಿನ ವಿದ್ಯಮಾನಗಳನ್ನು ಕಣ್ಣಾರೆ ಕಂಡ ನಂತರ ಎಡಪಕ್ಷಗಳ ಸಂಸತ್ ಸದಸ್ಯರು ನೀಡಿರುವ ಹೇಳಿಕೆ. ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಮತ್ತು ಫಾರ್ವರ್ಡ್‌ಬ್ಲಾಕ್‌ನ ಸಂಸತ್ ಸದಸ್ಯರಾದ ಬಾಸುದೇವ ಆಚಾರ್ಯ, ದೀಪಂಕರ್ ಮುಖರ್ಜಿ, ಗುರುದಾಸ್ ದಾಸ್‌ಗುಪ್ತಾ, ಅಮರ್‌ರಾಯ್ ಪ್ರಧಾನ್, ಅಬನಿ ರಾಯ್, ಅಜಯ್ ಚಕ್ರವರ್ತಿ ಹಾಗೂ ಜೋಖಿಮ್ ಬಕ್ಸ್‌ಲಾ ತಮ್ಮ ಭೇಟಿಯ ನಂತರ ನೀಡಿರುವ ಹೇಳಿಕೆಯ ಪ್ರಕಾರ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ನೀಡಿರುವ ಭರವಸೆಗೆ ಏನೂ ಅರ್ಥವುಳಿದಿಲ್ಲ. ಎಡಪಕ್ಷಗಳ ಸಂಸತ್ ಸದಸ್ಯರ ಹೇಳಿಕೆಯ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

ಸರಿಯಾಗಿ ಪರಿಶೀಲಿಸಿದ ನಂತರ ನಮ್ಮ ಅಂದಾಜೆಂದರೆ ಮಂದಿರದ ರಚನೆಯ ಕೆಲಸ ವಿವಾದಿತ ಸ್ಥಳದಿಂದ 1.5 ಕಿ.ಮಿ. ದೂರದಲ್ಲಿರುವ ಒಂದು ವರ್ಕ್‌ಶಾಪಿನಲ್ಲಿ ನಡೆಯುತ್ತಿದೆ.

ವರ್ಕ್‌ಶಾಪ್‌ನಲ್ಲಿ 128 ಅಡಿ ಎತ್ತರದ ರಾಮಮಂದಿರ ಮಾದರಿಯನ್ನು ಪ್ರದರ್ಶಿಸಲಾಗಿದೆ. ಈ ಮಾದರಿಗೆ ಕರಾರುವಾಕ್ಕಾಗಿ ಹೊಂದಿಕೊಳ್ಳುವಂತೆ ಕೆಲಸ ನಡೆಯುತ್ತಿದೆ. 50-60 ಕೆಲಸಗಾರರು, ಸೂಪರ್‌ವೈಸರುಗಳು, ಮ್ಯಾನೇಜರುಗಳು ಈ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿಗೆ ಈ ವರ್ಕ್‌ಶಾಪ್‌ನಲ್ಲಿ ಕೆಲಸವನ್ನು ತೀವ್ರಗೊಳಿಸಲು ಒಂದು ದೊಡ್ಡ ಕಲ್ಲು ಕತ್ತರಿಸುವ ಯಂತ್ರವನ್ನು ಹಾಕಲಾಗಿದೆ. ವಿದ್ಯುತ್ ಸದಾ ದೊರೆಯುವಂತೆ ಇಲ್ಲಿ ಜನರೇಟರನ್ನು ಕೂಡಾ ವ್ಯವಸ್ಥೆ ಮಾಡಲಾಗಿದೆ. ಇಲ್ಲಿನ ಕೆಲಸವನ್ನು ನಿರಂತರವಾಗಿ ವಿ.ಹೆಚ್.ಪಿ. ಮತ್ತು ಆರ್.ಎಸ್.ಎಸ್. ನೋಡಿ ಕೊಳ್ಳುತ್ತಿವೆ.

ಭೂಮಟ್ಟದ ಮೇಲಿನ ಮಂದಿರದ ರಚನೆ ಭಾಗ-ಭಾಗವಾಗಿ ಇಲ್ಲಿ ನಡೆಯುತ್ತಿದೆ. ಇವನ್ನೆಲ್ಲಾ ಅವಕಾಶ ಸಿಕ್ಕಾಗ ಅತ್ಯಂತ ತ್ವರಿತವಾಗಿ ಜೋಡಿಸುವಂತೆ ತಯಾರಿಸಲಾಗುತ್ತಿದೆ. ಇದು ಅವರ ಕಾರ್ಯತಂತ್ರವಿದ್ದಂತಿದೆ. ಆಗಬೇಕಾದ ಏಕೈಕ ಕೆಲಸವೆಂದರೆ ರಾಮಮಂದಿರದ ತಳಪಾಯಕ್ಕೆ ಅಗೆಯುವ ಕೆಲಸ.

ಇಂತಹ ಕೆಲಸಗಳು ರಾಜಸ್ತಾನದ ಪಿಂಜೋರಿಯಲ್ಲಿ ಮೂರು ಸ್ಥಳಗಳಲ್ಲಿ ನಡೆಯುತ್ತಿವೆ ಎಂದು ನಮಗೆ ತಿಳಿದುಬಂತು. ಅಂದರೆ ಮಂದಿರದ 'ರಚನೆ' ನಾಲ್ಕು ವಿಭಿನ್ನ ಸ್ಥಳಗಳಲ್ಲಿ ನಡೆಯುತ್ತಿದ್ದು ಸಾಕಷ್ಟು ಮುಂದುವರೆದ ಹಂತದಲ್ಲಿದೆ. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇದು ನಡೆಯುತ್ತಿದೆ.

ಅಲ್ಲಿ ಕೆಲಸ ಮಾಡುತ್ತಿದ್ದವರನ್ನು ಮಂದಿರವನ್ನು ಎಲ್ಲಿ ಕಟ್ಟಲಾಗುತ್ತಿದೆ ಎಂದು ನಾವು ಕೇಳಿದಾಗ ಹಿಂದೆ ಮುಂದೆ ನೋಡದೆ ಅವರು 'ರಾಮಜನ್ಮಭೂಮಿ ಪ್ರದೇಶದಲ್ಲಿ' ಎಂದರು.

ಆದ್ದರಿಂದ, ಇಲ್ಲಿ ಗಮನಿಸಬೇಕಾದ್ದೆಂದರೆ ನ್ಯಾಯಾಲಯ ರಾಮಜನ್ಮಭೂಮಿಯೆನ್ನುವ ವಿವಾದಿತ ಸ್ಥಳದಲ್ಲಿ ರಾಮಮಂದಿರ ಕಟ್ಟುವ ಪ್ರಶ್ನೆಯನ್ನು ಪರಿಶೀಲಿಸುತ್ತಿರುವಾಗ, ನ್ಯಾಯಾಂಗ ತೀರ್ಪು ಇನ್ನೂ ಬರದಿರುವಾಗ ಇಷ್ಟೊಂದು ತೀವ್ರತರವಾದ ಕೆಲಸವನ್ನು ಏಕೆ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆ. ನ್ಯಾಯಾಂಗ ತೀರ್ಪೇನೆಂದು ಮೊದಲೇ ಹೇಳಲು ಆಗದಿರುವಾಗ ತಮಗೆ ಅನುಕೂಲಕರವಾದ ತೀರ್ಪು ಬರುತ್ತದೆಂಬ ನಿರೀಕ್ಷೆಯಲ್ಲಿ ರಾಮಮಂದಿರದ ರಚನೆಯ ಕೆಲಸವನ್ನು ವಿವಿಧ ಭಾಗಗಳಲ್ಲಿ ಮಾಡುವ ಹೊಣೆಯನ್ನು ವಿಹೆಚ್‌ಪಿ, ಆರ್.ಎಸ್.ಎಸ್., ಭಜರಂಗ ದಳ ತಮ್ಮ ಮೇಲೆ ತಗೊಂಡಿದ್ದಾರೆಂದರೆ ಅವರಿಗೆ ಇರುವುದು ಈ ಪ್ರಶ್ನೆಯನ್ನು ಜೀವಂತವಾಗಿಡುವ ರಾಜಕೀಯ ಪರಿಗಣನೆಯೇ ಇರಬೇಕು. ಈ ಮೂಲಕ ತನ್ನ ಕಟ್ಟಾ ಬೆಂಬಲಿಗರಲ್ಲಿ ಭಾವೋದ್ರೇಕ ತಂದು ನ್ಯಾಯಾಂಗದ ಮೇಲೆ ಸತತ ಒತ್ತಡ ತರುವುದು. ವಿವಾದವೇನೂ ಇಲ್ಲದ ಜಾಗದಲ್ಲಿ ಮಂದಿರ ಕಟ್ಟುವ ಕೆಲಸವನ್ನು ಯಾರು ಬೇಕಾದರೂ ಮಾಡಬಹುದು. ಆದರೆ ವಿವಾದಿತ ಸ್ಥಳದ ಇಷ್ಟೊಂದು ಹತ್ತಿರ ಭಾಗ-ಭಾಗವಾಗಿ ಕಟ್ಟುವ ಕೆಲಸ ಬೇರೆಲ್ಲೂ ಅಲ್ಲ, ವಿವಾದಿತ ಸ್ಥಳದಲ್ಲೇ, ಏನೇ ಆಗಲಿ ಮಂದಿರ ಕಟ್ಟುವ ಪ್ರಯತ್ನ ನಡೆಯುತ್ತಿದೆ ಎಂಬುದರ ಸ್ಪಷ್ಟ ಸಂಕೇತ. ಆದ್ದರಿಂದ ಈ ಬೆಳವಣಿಗೆ ಬಹಳ ಆತಂಕದ ವಿಷಯ. ಇದು ದೇಶವಾಗಲೀ, ಸರಕಾರವಾಗಲೀ ನಿರ್ಲಕ್ಷಿಸಲಾಗದಂತಹ ಅಪಾಯಕಾರಿ ಬೆಳವಣಿಗೆ.

ವಿವಾದಿತ ಸ್ಥಳದ ಇಷ್ಟು ಸಮೀಪದಲ್ಲಿ ಅಲ್ಲೇ ಮಂದಿರ ಕಟ್ಟಲಾಗುವುದು ಎಂಬ ವಿ.ಹೆಚ್.ಪಿ. ಮತ್ತು ಆರ್.ಎಸ್.ಎಸ್.ನ ಘೋಷಣೆಗಳ ಹಿನ್ನೆಲೆಯಲ್ಲಿ ಕೆಲಸ ನಡೆಯುತ್ತಿರುವಾಗ ರಾಮಮಂದಿರವನ್ನು ವಿವಾದಿತ ಸ್ಥಳದಲ್ಲಿ ಕಟ್ಟುವುದಾದರೆ ಅದು ನ್ಯಾಯಾಂಗದ ಅನುಮತಿಯಿಂದ ಮಾತ್ರ ಎಂದು ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳ ಭರವಸೆಗೆ ಏನೇನೂ ಮಹತ್ವವಿಲ್ಲ. ಮತ್ತೊಮ್ಮೆ ಅಯೋಧ್ಯೆಯ ಮಣ್ಣಲ್ಲಿ ನ್ಯಾಯಾಂಗ ಪ್ರಕ್ರಿಯೆಯನ್ನು ಬುಡಮೇಲು ಮಾಡಲಾಗದಂತೆ ಸೂಕ್ತ ಕ್ರಮ ಕೈಗೊಳ್ಳುವುದು ಈಗ ಸರಕಾರದ ಕರ್ತವ್ಯ.

ಸಂಸತ್ತಿನ ಬಾಗಿಲಲ್ಲಿ ಐ.ಡಿ.ಪಿ.ಎಲ್. ಕಾರ್ಮಿಕರ ಮತಪ್ರದರ್ಶನ

ಸಾರ್ವಜನಿಕ ವಲಯದ ಭಾರತೀಯ ಔಷಧಿ ತಯಾರಿಕಾ ಕಂಪನಿ, ಐ.ಡಿ.ಪಿ.ಎಲ್. ನ 2000 ಕಾರ್ಮಿಕರು ಮತ್ತು ನೌಕರರು ಜೂನ್ 9 ರಂದು ಸಂಸತ್ತಿನ ಮುಖ್ಯದ್ವಾರದ ಎದುರು ಮತಪ್ರದರ್ಶನ ನಡೆಸಿದರು. ಈ ಸಾರ್ವಜನಿಕ ಉದ್ದಿಮೆಯನ್ನು ಪುನರುಜ್ಜೀವನಗೊಳಿಸ ಬೇಕೆಂಬುದು ಅವರ ಬೇಡಿಕೆ.

ಈ ಸಂಸ್ಥೆಯ ಎಲ್ಲಾ ಐದು ಘಟಕಗಳಿರುವ ಹೈದರಾಬಾದ್, ಋಷಿಕೇಶ, ಗುರ್ಗಾಂವ್, ಮುಝಫ್ಫರ್‌ಪುರ್ ಹಾಗೂ ಚೆನ್ನೈಯಿಂದ ಮಹಿಳಾ ಕಾರ್ಮಿಕರೂ ಸೇರಿದಂತೆ ಸೂಪರ್‌ವೈಸರ್‌ಗಳು, ಅಧಿಕಾರಿಗಳೂ ಇದರಲ್ಲಿ ಭಾಗವಹಿಸಿದ್ದರು. ಗುರುಗಾಂವ್ ಘಟಕದ ಎಲ್ಲರೂ ಈ ಮತಪ್ರದರ್ಶನದಲ್ಲಿ ಭಾಗವಹಿಸಿದರು.

ಸಿಪಿಐ(ಎಂ), ಸಿಪಿಐ ಹಾಗೂ ಆರ್.ಎಸ್.ಪಿ. ಯ ಸಂಸತ್ ಸದಸ್ಯರು ಅವರನ್ನುದ್ದೇಶಿಸಿ ಮಾತನಾಡಿದರು.

12.45 ಕ್ಕೆ ಕಾರ್ಮಿಕ ಮುಖಂಡರನ್ನು ಭೇಟಿ ಮಾಡುವುದಾಗಿ ಹೇಳಿದ್ದ ಪ್ರಧಾನ ಮಂತ್ರಿಗಳು ಹಾಗೆ ಮಾಡಲಿಲ್ಲ. ಕೆಲವು ದಿನಗಳ ಹಿಂದೆ ಕೆಲವು ಸಂಸತ್ ಸದಸ್ಯರೊಂದಿಗೆ ಈ ಬಗ್ಗೆ ಮಾತನಾಡಿರುವುದಾಗಿ ಹೇಳಿ ಈ ಭೇಟಿಯನ್ನು ಇದ್ದಕ್ಕಿದ್ದಂತೆಯೇ ರದ್ದು ಮಾಡಿದರು. ಪ್ರಧಾನ ಮಂತ್ರಿಗಳ ಈ ವರ್ತನೆಯನ್ನು ರ್‍ಯಾಲಿ ಖಂಡಿಸಿತು. ಹಿಂದೆಂದೂ ಭಾರತದ ಪ್ರಧಾನಿ ಕಾರ್ಮಿಕ ಮುಖಂಡರ ನಿಯೋಗವೊಂದನ್ನು ಭೇಟಿ ಮಾಡಲು ನಿರಾಕರಿಸಿರಲಿಲ್ಲ. ಪ್ರಧಾನಮಂತ್ರಿಗಳು ನಿಯೋಗವನ್ನು ಭೇಟಿಯಾಗಲು ಒಪ್ಪುವವರೆಗೆ ಕದಲುವುದಿಲ್ಲ ಎಂದು ಕಾರ್ಮಿಕರು ಧರಣಿ ಕೂತರು. ಆದರೆ ಎಡ ಪಕ್ಷಗಳ ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಪ್ರಧಾನ ಮಂತ್ರಿಗಳ ಭೇಟಿಯ ಕಾರ್ಯಕ್ರಮವನ್ನು ನಿಗದಿಪಡಿಸುವುದಾಗಿ ಆಶ್ವಾಸನೆಯಿತ್ತ ಮೇಲೆ ಧರಣಿಯನ್ನು ಹಿಂತೆಗೆದುಕೊಂಡು ಸಂಸದ್‌ಮಾರ್ಗ ಪೊಲೀಸ್ ಠಾಣೆಯವರೆಗೆ ಮೆರವಣಿಗೆ ಹೋಗಿ ಬಂಧನಕ್ಕೊಳಗಾದರು.

ಎಡ ಪಕ್ಷಗಳ ಸಂಸತ್ ಸದಸ್ಯರಾದ ಬಾಸುದೇವ ಆಚಾರ್ಯ, ಮಹಮ್ಮದ್ ಸಲೀಂ, ಅಜೋಯ್ ಮುಖರ್ಜಿ, ಅಸೀಮ್ ಬಾಲಾ, ತರಿಕ್ ತೋಪ್ದಾರ್, ಗೀತಾ ಮುಖರ್ಜಿ ಹಾಗೂ ಪ್ರಮತೇಶ ಮುಖರ್ಜಿಯವರಲ್ಲದೆ ಸಿಐಟಿಯು ಕಾರ್ಯದರ್ಶಿ ಪಿ.ಕೆ.ಗಂಗೂಲಿ, ಎಐಟಿಯುಸಿ ಕಾರ್ಯದರ್ಶಿ ಡಿ.ಎಲ್. ಸಚ್‌ದೇವ, ಎಸ್.ಎನ್.ಠಾಕೂರ್, ಪಿ.ಎಸ್.ಖಾಪನ, ಬ್ರಹ್ಮಾನಂದ ರೆಡ್ಡಿ, ಆರ್.ಸಿ.ಗುಪ್ತ, ಚಾಗೋ ರಾಯ್ ಮುಂತಾದವರು ಧರಣಿ ಕೂತವರನ್ನು ಉದ್ದೇಶಿಸಿ ಮಾತನಾಡಿದರು

'ಶಕ್ತಿಪೀಠ'ಸ್ಥರಿಗೆ ಬಾಂಬಿನ ವಿನಾಶ ಲೀಲೆಯ ಅರಿವಿದೆಯೇ?

"ಆಗಸದಲ್ಲಿ ಬೆಂಕಿಯುಗುಳುವುದನ್ನು ಕಂಡಾಗ ಬೆಂಚಿನಡಿ ಅಡಗಿಕೊಂಡೆ. ನನ್ನ ಸೋದರಿಯ ತಲೆಗೂದಲು ಸೀದು ಹೋಯಿತು. ದೇಹವಿಡೀ ಸುಟ್ಟು ಗಾಯ ಗಳಾದವು. ಅಮ್ಮಾ ಅಮ್ಮಾ ಎಂದು ಅಂಗಲಾಚುತ್ತಿದ್ದಳು. ಆದರೆ ಸಹಾಯಕ್ಕೆ ಬರುವವರು ಯಾರೂ ಇರಲಿಲ್ಲ" ಎಂದು ನೆನಪಿಸಿಕೊಳ್ಳುವ ಯಾಸುಹಿಕೋ ತಕೇಟಾಗೆ ಈಗ 66 ವರ್ಷ. 1945 ರ ಆಗಸ್ಟ್ 6 ರಂದು ಹಿರೋಶಿಮಾ ಮೇಲೆ 'ಚಿಕ್ಕ ಹುಡುಗ'(ಅಣುಬಾಂಬಿಗಿದ್ದ ಹೆಸರು - ಲಿಟ್ಲ್‌ಬಾಯ್)ಬಿದ್ದು ಸ್ಫೋಟಗೊಂಡಾಗ ಕಣ್ಣೆದುರೇ ತನ್ನ ಕುಟುಂಬದ ಸದಸ್ಯರು, ಗೆಳೆಯರು ಸಾವನ್ನಪ್ಪುತ್ತಿದ್ದುದನ್ನು ಕಂಡಾಗ ಈತನೂ ಚಿಕ್ಕಹುಡುಗ. ಬಾಂಬು ಬಿದ್ದಾಗ ಏಳು ಕಿಲೋಮೀಟರ್ ದೂರ ಇದ್ದುದ ರಿಂದ ಬದುಕುಳಿದಾತ. ಆಗ ಆತನಿಗೆ ಕೇವಲ 13 ವರ್ಷ.

ಭಾರತ ಮತ್ತು ಪಾಕಿಸ್ತಾನಗಳೆರಡೂ ಪರಮಾಣು ಪರೀಕ್ಷಣೆ ನಡೆಸಿದ ಸುದ್ದಿ ಕೇಳಿ ಹೌಹಾರಿದ. ಇಲ್ಲಿಗೆ ಬಂದು ತನ್ನ ಅನುಭವಗಳನ್ನು ತಿಳಿಸಬೇಕು ಎಂದನಿಸಿತು. ನಾಲ್ಕು ಸದಸ್ಯರ ಜಪಾನೀ ತಂಡದ ಸದಸ್ಯ ನಾಗಿ ಅವರು ಭಾರತಕ್ಕೆ ಬಂದರು. 'ಬಾಂಬ್ ಸ್ಫೋಟದ ನಂತರದ ವಿಕಿರಣ'ದ ಬಗ್ಗೆ ಜನಗಳಿಗೆ ನಿಜವಾಗಿಯೂ ಗೊತ್ತಿದ್ದಂತಿಲ್ಲ. ಬೇರೆ ಪರಮಾಣು ದೇಶಗಳಿಗೆ ಭೇಟಿ ನೀಡಿದಾಗಲೂ ನನಗೆ ಹೀಗೆ ಅನಿಸಿತು' ಎನ್ನುತ್ತಾರೆ ಅವರು.

ಹೌದು, ಪೋಖ್ರಾನ್‌ನಲ್ಲಿ 'ಶಕ್ತಿಪೀಠ' ಕಟ್ಟ ಬಯಸುವ ವಿ.ಹೆಚ್.ಪಿ.ಗಳಿಗೆ, ಛಗಾಯ್‌ನ ಸ್ಫೋಟ ದಿಂದ ರಕ್ಷಣೆಯ ಭಾವನೆ ಪ್ರದರ್ಶಿಸುತ್ತಿರುವ ಪಾಕಿಸ್ತಾನೀಯರಿಗೆ ಈ ವಿಕಿರಣದ ಅನಾಹುತದ ಅರಿವು ಎಳ್ಳಷ್ಟೂ ಇಲ್ಲ.

"ನಾವು ಜನಗಳ ಹತ್ತಿರ ಮಾತನಾಡಿ ಅಣು ಬಾಂಬಿನ ವಿನಾಶಲೀಲೆಯನ್ನು ಹೇಳ ಬಯಸುತ್ತೇವೆ. ನಮ್ಮೊಂದಿಗೆ ಆ ವಿನಾಶ ಲೀಲೆಯ ಚಿತ್ರಗಳನ್ನು ತಂದಿದ್ದೇವೆ. ಬಾಂಬು ಬಿದ್ದಾಗ ಇದ್ದ ಜನಗಳನ್ನು ಮಾತ್ರವಲ್ಲ ನಂತರವೂ 2-3 ಪೀಳಿಗೆಗಳನ್ನು ಕಾಡುವ ಅಸ್ತ್ರ ಇದು" ಎನ್ನುತ್ತಾರೆ ಈ ತಂಡದ ಮುಖ್ಯಸ್ಥ ಕೇನ್ ಸಕ್ಕಾ ಮೊಟೊ. 'ಅಣು ಪರಮಾಣು ಬಾಂಬು ವಿರೋಧಿ ಮಂಡಳಿ'ಯ ಹಿರೋಶಿಮಾ ಶಾಖೆಯ ಪ್ರಧಾನ ಕಾರ್ಯದರ್ಶಿ ಆತ. "ಭಾರತ ಸಿಟಿಬಿಟಿ ಬಗ್ಗೆ ತಳೆದಿದ್ದ ನಿಲುವಿನ ಬಗ್ಗೆ ನನಗೆ ಸಹಾನುಭೂತಿಯಿತ್ತು. ಆದರೆ ಭಾರತ ಪರೀಕ್ಷಣೆ ನಡೆಸಿದಾಗ ನನಗೆ ಬಹಳ ಖೇದ ವಾಯಿತು" ಎನ್ನುವ ತಕೇಟಾ ಜಪಾನ್ ಅಮೆರಿಕದ ಪರಮಾಣು ಛತ್ರ ದಿಂದ ಹೊರ ಬಂದು ವಿಶ್ವವನ್ನು ಪರಮಾಣು ಮುಕ್ತಗೊಳಿ ಸುವ ದೃಢತೆ ತೋರಬೇಕು ಎನ್ನುತ್ತಾರೆ.

ಭಾರತ ಪಾಕಿಸ್ತಾನಗಳ ಪರಮಾಣು ಬಾಂಬು ಪ್ರಿಯರಿಗೆ 'ಶಕ್ತಿಪೀಠ'ದ ಪ್ರತಿಪಾದ ಕರಿಗೆ ಇದು ಅರ್ಥವಾಗುತ್ತದೆಯೇ?

ನನ್ನ ಪ್ರೀತಿಯ ಶಾಂತಿ

ಯಾರಿಗೂ ಬೇಡ
ಯುದ್ಧ.
ಬರದಿರಲಿ ಎಂದೆಂದೂ
ಬಾಂಬುಗಳ ಸದ್ದು
ಸುಖೀಗೊಳ್ಳದು ಸಂಪತ್ತು
ಪರಿಸರಕದು
ವಿರುದ್ಧ
ಸೆರೆಯೊಳಿರಲಿ
ಮಾರಕಾಸ್ತ್ರಗಳು
ಧೂಳು ಹಿಡಿದು

ಹಸಿದ ಹೊಟ್ಟೆಗಳು ಹಲವು ಕೋಟಿ
ಬೀಸಿ ಸುಡುವ ಮೊದಲು
ಊಟಕ್ಕೆ ರೊಟ್ಟಿ
ಮುಸುಕು ಯುದ್ಧ ಬೇಡ
ಬಾಂಬುಗಳ ಪೈಪೋಟಿ.
ಹಸಿರು ಕ್ರಾಂತಿಯೊಳಂತಿ
ತಿರುಗುತಿರಲಿ ಮೇಟಿ

ಕಟ್ಟುವದೇಕೆ ಮೊದಲೇ
ರಣಕಂಕಣ
ಹುಟ್ಟಿಲ್ಲ ಇನ್ನೂ
ನಮ್ಮ ವೈರಿಗಳ ಬಣ
ಬೊಟ್ಟು ಮಾಡಿ ತೋರಿಸನೆಂದೂ
ವೈರಿಯನು
ಯಾವ ಜಾಣ
ಮುಟ್ಟೆಬ್ಬಿಸಿ
ಸಾವಾಗುವದೇಕೆ
ಕೋಣ

ಇರುವದಾಗಲೇ
ನಮ್ಮಲ್ಲಿ
ರಕ್ಷಣಾತ್ಮಕ ಬಲ
ವೀರಯೋಧರ
ಜಾಣ್ಮೆಯ ತೋಳ್ಬಲ
ಸಂಗಟ್ಟುವರು ಬಂದರೆ
ತೋರಿಸುವೆವೆಂಬ ಛಲ
ಚಿರಾಯುವಾಗಲಿ ಶಾಂತಿಗೆ
ನಮದಿರಲಿ ಬೆಂಬಲ

ಹಾಂಸ ಬಲ್ಲೆವು ನಾವು
ಕ್ಷಿಪಣಿ
ಪರಿಹರಿಸಲಾಗಿಲ್ಲ
ಇನ್ನೂ ಅರೆ ಹೊಟ್ಟೆಗಳ ಭವಣೆ
ಸುರಿಸಬಲ್ಲೆವು
ಬಾಂಬುಗಳ ಸರಣಿ
ಪೂರೈಸಲಾಗಿಲ್ಲ ಇನ್ನೂ
ಕುಡಿಯುವ ನೀರಿಗಾಗಿ
ಜನರ ಹಣಾಹಣಿ

ಸ್ಫೋಟಿಸಿದರೆ ಸಿಡಿಮದ್ದು
ಊಟಕ್ಕೆ ಬಾರದು ಆ ಸದ್ದು
ಕೀಟಲೆಯ ಆಟವಲ್ಲಿ
ಬಾಂಬುಗಳಿಗೆ ಮುದ್ದು
ರೋಟಿ ಕಪಡಾ ಔರ್ ಮಕಾನ್
ನಮಗೆ ಬೇಕಾದದ್ದು

ಹಾರಿಸುವ ಮೊದಲು
ನಾವು ಶಾಂತಿ ಪತಾಕೆ
ತೋರಲಿ ಭಾರತ
ಈ ವಿಶ್ವಕೆ
ಸಾರಲಿ ಸಂದೇಶ
ಮಾನವ ಕುಲಕೆ
ಯಾರಲ್ಲಿಯೂ ಬೇಡ
ಯುದ್ಧದಾ ಭಯಕೆ

- ನರಸಿಂಹಪ್ಪ
ಜನತಾ ಕಾಲೋನಿ, ಸಿಂಧನೂರು

ವಾರದ ವ್ಯಂಗ್ಯ ಚಿತ್ರ

'ಪೀಪಲ್ಸ್‌ಡೆಮಾಕ್ರಸಿ'ಯಲ್ಲಿ ನಾಥ್



ವಾಜಪೇಯಿ ಚಿಕ್ಕಮಕ್ಕಳಿಗೆ ಕಥೆ ಬರೆದಿದ್ದಾರೆ-ಸುದ್ದಿ

Reg. No. 17015/64 KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27